

# ದರ್ಪಣ

## ವಾರ್ಷಿಕ ಸಂಚಿಕೆ 2016-17




## ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದೂರವಾಣಿ ನಂ. 08224-252149, ಫ್ಯಾಕ್ಸ್ ನಂ. 08224-256051

www.jsscwkgl.org, Email. jsscwk@gmail.com

## ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜನ್ಮಶತಮಾನೋತ್ಸವ ಸಮಾರೋಪ ಸಮಾರಂಭ



ಪೂಜ್ಯರು ಹಾಗೂ ಗಣ್ಯರಿಂದ ಉದ್ಘಾಟನೆ




ಚಾಮರಾಜನಗರ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾದ ಶ್ರೀಯುತ ಎಂ. ರಾಮಚಂದ್ರರವರಿಂದ ಸಮಾರೋಪ ಭಾಷಣ



ಪರಮಪೂಜ್ಯ ರಾಜೇಂದ್ರ ಶ್ರೀಗಳವರ ಜೀವನಾಧಾರಿತ ವಸ್ತು ಪ್ರದರ್ಶನವನ್ನು ಗಣ್ಯರು ವೀಕ್ಷಿಸುತ್ತಿರುವುದು

ದರ್ಪಣ

# ದರ್ಪಣ

## ವಾರ್ಷಿಕ ಸಂಚಿಕೆ 2016-2017

## ಸಂಪಾದಕ ಮಂಡಳಿ

ಪ್ರಧಾನ ಸಂಪಾದಕರು

**ಪ್ರೊ. ಉಮೇಶ**

ಪ್ರಾಂಶುಪಾಲರು




ಸಂಪಾದಕರು

**ಶ್ರೀಮತಿ ಸಿ. ರೂಪಶ್ರೀ**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ

ಸದಸ್ಯರು

**ಶ್ರೀ. ಎ.ಪಿ. ಮಹದೇವಪ್ಪ** - ಆಂಗ್ಲಭಾಷ ವಿಭಾಗ

**ಶ್ರೀ ಎಂ. ಬಸವರಾಜು** - ಕನ್ನಡ ವಿಭಾಗ

**ಶ್ರೀ ನಟರಾಜು** - ಕನ್ನಡ ವಿಭಾಗ

**ಶ್ರೀ ಪಿ. ಮಹೇಶ್** - ಅರ್ಥಶಾಸ್ತ್ರ ವಿಭಾಗ

**ಶ್ರೀ ಸಿ. ಎಸ್. ಬಸವದತ್ತ ಮಹದೇವಪ್ರಸಾದ್** - ವಾಣಿಜ್ಯಶಾಸ್ತ್ರ ವಿಭಾಗ

ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ
ಜೆ. ಎಸ್. ಎಸ್. ಮ...
ಕೊಳ್ಳೇಗಾಲ-571440



# ದರ್ಪಣ

## ವಾರ್ಷಿಕ ಸಂಚಿಕೆ 2016-17




ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ
ದೂರವಾಣಿ ನಂ. 08224-252149, ಫ್ಯಾಕ್ಸ್ ನಂ. 08224-256051
www.jsscwkgl.org, Email. jsscwk@gmail.com



ಪರಮಪೂಜ್ಯ ಜಗದ್ಗುರು

**ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

ಸಂಸ್ಥಾಪಕರು, ಜೆಎಸ್ಎಸ್ ಮಹಾವಿದ್ಯಾಪೀಠ

# ಶ್ರೀಮತ್ಸುತ್ತೂರು ವೀರಸಿಂಹಾಸನದ ಗುರುಪರಂಪರೆ

1. ಜಗದ್ಗುರು ಶ್ರೀ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರು
2. ಜಗದ್ಗುರು ಶ್ರೀ ಶ್ರೀ ಈಶಾನೇಶ ಒಡೆಯರು
3. ಜಗದ್ಗುರು ಶ್ರೀ ಶ್ರೀ ನಿಜಲಿಂಗ ಶಿವಾಚಾರ್ಯರು
4. ಜಗದ್ಗುರು ಶ್ರೀ ಶ್ರೀ ಸಿದ್ಧನಂಜ ದೇಶಿಕೇಂದ್ರರು
5. ಜಗದ್ಗುರು ಶ್ರೀ ಶ್ರೀ ಕಪಿನಿ ನಂಜುಂಡ ದೇಶಿಕೇಂದ್ರರು
6. ಜಗದ್ಗುರು ಶ್ರೀ ಶ್ರೀ ಚನ್ನವೀರ ದೇಶಿಕೇಂದ್ರರು
7. ಜಗದ್ಗುರು ಶ್ರೀ ಶ್ರೀ ಸಿದ್ಧಮಲ್ಲ ಶಿವಾಚಾರ್ಯರು
8. ಜಗದ್ಗುರು ಶ್ರೀ ಶ್ರೀ ಪರ್ವತೇಂದ್ರ ಶಿವಾಚಾರ್ಯರು
9. ಜಗದ್ಗುರು ಶ್ರೀ ಶ್ರೀ ಭಂಡಾರಿ ಬಸವಪ್ಪ ಒಡೆಯರು
10. ಜಗದ್ಗುರು ಶ್ರೀ ಶ್ರೀ ಕೂಗಲೂರು ನಂಜುಂಡ ದೇಶಿಕೇಂದ್ರರು
11. ಜಗದ್ಗುರು ಶ್ರೀ ಶ್ರೀ ಘನಲಿಂಗಿದೇವರು
12. ಜಗದ್ಗುರು ಶ್ರೀ ಶ್ರೀ ಇಮ್ಮಡಿ ಶಿವರಾತ್ರೀಶ್ವರರು
13. ಜಗದ್ಗುರು ಶ್ರೀ ಶ್ರೀ ಚನ್ನಬಸವ ದೇಶಿಕೇಂದ್ರರು
14. ಜಗದ್ಗುರು ಶ್ರೀ ಶ್ರೀ ಗುರುನಂಜ ದೇಶಿಕೇಂದ್ರರು
15. ಜಗದ್ಗುರು ಶ್ರೀ ಶ್ರೀ ಗುರು ಚನ್ನಬಸವ ದೇಶಿಕೇಂದ್ರರು
16. ಜಗದ್ಗುರು ಶ್ರೀ ಶ್ರೀ ಗುರುಪಂಚಾಕ್ಷರ ದೇಶಿಕೇಂದ್ರರು
17. ಜಗದ್ಗುರು ಶ್ರೀ ಶ್ರೀ ಚಿದ್ಘನಶಿವಾಚಾರ್ಯರು
18. ಜಗದ್ಗುರು ಶ್ರೀ ಶ್ರೀ ಚನ್ನವೀರ ದೇಶಿಕೇಂದ್ರರು
19. ಜಗದ್ಗುರು ಶ್ರೀ ಶ್ರೀ ಮಹಾಂತ ದೇಶಿಕೇಂದ್ರರು
20. ಜಗದ್ಗುರು ಶ್ರೀ ಸಿದ್ಧಮಲ್ಲ ಶಿವಾಚಾರ್ಯರು
21. ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರರು
22. ಜಗದ್ಗುರು ಶ್ರೀ ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳು
23. ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು
24. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು



# ಶುಭ ಹಾರೈಕೆ

ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ದೂರದೃಷ್ಟಿಯ ಫಲವಾಗಿ ಜೆಎಸ್ಎಸ್ ಸಂಸ್ಥೆಯ ಆಶ್ರಯದಲ್ಲಿ ಮಹಿಳಾ ಕಾಲೇಜುಗಳು ತುಂಬ ಹಿಂದೆಯೇ ಪ್ರಾರಂಭವಾದುವು. ಮಧ್ಯಯುಗೀನ ತಮಸ್ಸಿನ ಫಲವಾಗಿ ಮಹಿಳಾ ಸಮುದಾಯಕ್ಕೆ ಸಹಜವಾಗಿ ದಕ್ಕಬೇಕಾದ ಹಲವಾರು ಸಾಮಾಜಿಕ ಹಾಗೂ ಶೈಕ್ಷಣಿಕ ಅವಕಾಶಗಳು ಲಭ್ಯವಾಗಲಿಲ್ಲ. ಇದರ ಫಲವಾಗಿ ಭಾರತೀಯ ಸಮಾಜವು ತನ್ನ ವ್ಯಕ್ತಿತ್ವವನ್ನು ಪೂರ್ಣ ಪ್ರಮಾಣದಲ್ಲಿ ಬೆಳೆಸಿಕೊಳ್ಳುವುದು, ಸ್ಥಾಪಿಸಿಕೊಳ್ಳುವುದು ಸಾಧ್ಯವಾಗಲಿಲ್ಲ. ಇಂದು ಸಮಾಜದಲ್ಲಿ ಮಹಿಳೆಯರ ವಿರುದ್ಧ ನಡೆಯುತ್ತಿರುವ ಅಪಾರ ಪ್ರಮಾಣದ ತಾರತಮ್ಯಗಳಿಗೆ, ಲಿಂಗಾಧಾರಿತ ಅಸಂಬದ್ಧತೆಗಳಿಗೆ ಈ ಮನೋಭಾವವೇ ಕಾರಣ. ಆದರೆ, ದೇವರ ದಯೆಯೆಂಬಂತೆ ಇಂದು ಮಹಿಳೆಯರು ಎಲ್ಲ ಭೂಮಿಕೆಗಳಲ್ಲೂ ಪ್ರಭಾವದ ಮುದ್ರೆಯೊತ್ತುತ್ತಿದ್ದಾರೆ. ಮನೆ, ಉದ್ಯೋಗ ಈ ಎರಡೂ ರಂಗಗಳಲ್ಲಿ ಪುರುಷರಿಗೆ ಸಮನಾಗಿ, ಕೆಲವೆಡೆ ಪುರುಷರನ್ನೂ ಮೀರಿ, ಕಾರ್ಯಕ್ಷಮತೆಯನ್ನು ಸಾಧಿಸಿ ತೋರಿಸುತ್ತಿದ್ದಾರೆ.

"ಮಹಿಳೆಯೊಬ್ಬಳು ಕಲಿತರೆ ಶಾಲೆಯೊಂದು ತೆರೆದಂತೆ" ಎಂಬ ಘೋಷಣೆ ಒಳ್ಳೆಯ ಅರ್ಥ ವ್ಯಾಪ್ತಿಯನ್ನು ಹೊಂದಿದೆ. ವಿದ್ಯಾವಂತ ಮಹಿಳೆಯರು ಮನೆವಾರ್ತೆಗಳಲ್ಲಿ ಒಂದು ಸಮತೋಲನವನ್ನು ಸಾಧಿಸಬಲ್ಲರು. ಮುಂದಿನ ತಲೆಮಾರಿನ ವಿದ್ಯಾಭ್ಯಾಸದ ಮೇಲುಸ್ತುವಾರಿಯನ್ನೂ ಹೊರಬಲ್ಲರು. "ಮನೆಯೆ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರುವು" ಎಂಬ ಕವಿವಾಣಿ ಸದಾಕಾಲಕ್ಕೂ ನಿಲ್ಲುವಂಥದು.

ಶಾಲಾಕಾಲೇಜುಗಳಲ್ಲಿ ವಿದ್ಯಾಭ್ಯಾಸ ಪಡೆಯುತ್ತಿರುವ ಮಹಿಳೆಯರು ಒಂದರ್ಥದಲ್ಲಿ ನಿಜಕ್ಕೂ ಭಾಗ್ಯಶಾಲಿಗಳು. ಆಧುನಿಕ ಜ್ಞಾನ ವಿಜ್ಞಾನಗಳ ಬೆಳಕು ಅವರಿಗೆ ಅಂಗೈ ತುದಿಯಲ್ಲಿ ಲಭಿಸುತ್ತಿದೆ. ಆದರೆ ಇನ್ನೂ ಬಹುಸಂಖ್ಯಾತ ಮಹಿಳೆಯರು ಅರೆವಿದ್ಯಾವಂತರಾಗಿ, ವಿದ್ಯಾವಂಚಿತರಾಗಿ ಇರುವುದನ್ನು ಮನಗಾಣಬೇಕಿದೆ. ಶಿಕ್ಷಣ ಪಡೆದವರು ಬಳಿಕ ಇಂಥ ಅಭಾಗಿನಿಯರ ಪುರೋಭಿವೃದ್ಧಿಗಾಗಿ ಏನನ್ನಾದರೂ ಮಾಡುವ ತುಡಿತ ಹೊಂದಿರಬೇಕು.

ಮಹಿಳಾ ವಿದ್ಯಾರ್ಥಿಗಳು ತಮ್ಮ ಬಹುಮುಖ ಅನುಭವಗಳನ್ನು ಪ್ರತಿಭೆಯ ಪಾತಳಿಯಲ್ಲಿ ಹದಗೊಳಿಸಿ ಸರ್ವರನ್ನು ಮುದಗೊಳಿಸುವಂಥ ಸಾಹಿತ್ಯರಚನೆಯಲ್ಲಿ ತೊಡಗುವ ಸಾಮರ್ಥ್ಯ ಹೊಂದಿದ್ದಾರೆ. "ದರ್ಪಣ" ಕಾಲೇಜು ಸಂಚಿಕೆಯು ವಿಚಾರಪರಿಪ್ಲುತವಾದ ಲೇಖನಗಳಿಂದೊಡಗೂಡಿ ಪ್ರಕಟವಾಗಲೆಂದು ಹಾರೈಸುತ್ತೇವೆ.

ಶುಭಮಸ್ತು.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**



ಕರ್ತೃಗದ್ದಿಗೆ, ಸುತ್ತೂರು ಶ್ರೀಕ್ಷೇತ್ರ



ಶ್ರೀ ಮಠ, ಸುತ್ತೂರು ಶ್ರೀಕ್ಷೇತ್ರ




ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು

ಪ್ರೊ:ಹೆಚ್.ಕುಸುಮ,
ನಿರ್ದೇಶಕರು
ಕಾಲೇಜು ಶಿಕ್ಷಣ ನಿರ್ದೇಶಕರು

ದೂರವಾಣಿ :080-22343901
ಫ್ಯಾಕ್ಸ್: 080-223437
ಇ–ಮೇಲ್ : director182016@gmail.com
ಅರಮನೆ ರಸ್ತೆ, ಬೆಂಗಳೂರು–560 001

ದಿನಾಂಕ: 03-02-2017

## ಶುಭ ಸಂದೇಶ

ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಹಿನ್ನೆಲೆಯಲ್ಲಿ ವಾರ್ಷಿಕ ಸಂಚಿಕೆಯಾದ "ದರ್ಪಣ" ಹೊರತರುತ್ತಿರುವುದು ತುಂಬಾ ಸಂತೋಷದ ವಿಷಯವಾಗಿದೆ.

ಸದರಿ ಸಂಚಿಕೆಯಲ್ಲಿ ಕಾಲೇಜಿನ ಶೈಕ್ಷಣಿಕ ವರ್ಷದ ವರದಿಯೊಂದಿಗೆ ವಿದ್ಯಾರ್ಥಿಗಳಲ್ಲಿ ಪ್ರತಿಭೆಗಳನ್ನು ಪ್ರೋತ್ಸಾಹಿಸುವ, ಬರವಣಿಗೆಯ ಶಕ್ತಿಯನ್ನು ಹೊರಹೊಮ್ಮಿಸುವ ಸುಂದರ ಲೇಖನಗಳೊಂದಿಗೆ ಮೂಡಿ ಬರಲಿ ಎಂದು ಹಾರೈಸುತ್ತಾ, ಈ ವಾರ್ಷಿಕ ಸಂಚಿಕೆಯ ಯಶಸ್ಸಿಗಾಗಿ ಶ್ರಮಿಸುತ್ತಿರುವ ಪ್ರಾಂಶುಪಾಲರು, ಬೋಧಕ/ಬೋಧಕೇತರ ಸಿಬ್ಬಂದಿ ವರ್ಗದವರಿಗೆ ಶುಭ ಹಾರೈಸುತ್ತೇನೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಮೈಸೂರು ವಿಶ್ವವಿದ್ಯಾನಿಲಯ

ಕ್ರಾಫರ್ಡ್ ಭವನ, ಮೈಸೂರು-570 005
ದೂರವಾಣಿ : ಕಚೇರಿ : +91-0821-2419666
ನಿವಾಸ : +91-0821-2419633
ಫ್ಯಾಕ್ಸ್ : +91-0821-2419363
ಇ-ಮೇಲ್ : vc@uni-mysore.ac.in

ಪ್ರೊ. ಯಶವಂತ ಡೋಂಗ್ರೆ
ಕುಲಪತಿಗಳು ಪ್ರಭಾರ

24ನೇ ಜನವರಿ, 2017

## ಸಂದೇಶ

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲದ ಜೆಎಸ್ಎಸ್ ಮಹಿಳಾ ಕಾಲೇಜು 2016-17 ನೇ ಸಾಲಿನ ವಾರ್ಷಿಕ ಸಂಚಿಕೆ "ದರ್ಪಣ" ವನ್ನು ಹೊರತರುತ್ತಿರುವುದು ಸಂತಸದ ವಿಷಯ.

ಚಾಮರಾಜನಗರ ಜಿಲ್ಲೆಯ ಜೆಎಸ್ಎಸ್ ಮಹಿಳಾ ಕಾಲೇಜು ವಿದ್ಯಾರ್ಥಿನಿಯರ ಉನ್ನತ ಶಿಕ್ಷಣದ ಕನಸನ್ನು ನನಸಾಗಿಸುವಲ್ಲಿ ಸಾರ್ಥಕತೆಯನ್ನು ಹೊಂದಿದೆ. ಶೈಕ್ಷಣಿಕ ಉನ್ನತಿಯೊಂದಿಗೆ, ಅವರ ಸುಪ್ತಪ್ರತಿಭೆಯ ಅನಾವರಣಕ್ಕೂ ಮುಕ್ತ ಅವಕಾಶವನ್ನು ಕಲ್ಪಿಸುತ್ತಾ, ಶೈಕ್ಷಣಿಕ ಸಾಧನೆಯೊಂದಿಗೆ ಪಠ್ಯೇತರ ಚಟುವಟಿಕೆಗಳ ಯಶಸ್ಸನ್ನು ಕಾಲೇಜಿನ ವಾರ್ಷಿಕ ಸಂಚಿಕೆ "ದರ್ಪಣ"ದಲ್ಲಿ ದಾಖಲಿಸುತ್ತಿರುವುದು ಹರ್ಷದಾಯಕ ಸಂಗತಿಯಾಗಿದೆ.

"ದರ್ಪಣ" ಸಂಚಿಕೆಯಲ್ಲಿ ವಿದ್ಯಾರ್ಥಿನಿಯರ ಸೃಜನಶೀಲ ಹಾಗೂ ವೈಚಾರಿಕ ಬರಹಗಳನ್ನು, ಮಹಿಳಾ ಕೇಂದ್ರಿತವಾದ ಬರಹಗಳು ಹೆಚ್ಚಿನ ಸಂಖ್ಯೆಯಲ್ಲಿ ಅನಾವರಣಗೊಳ್ಳುತ್ತಿರುವುದು ಸಂತಸದ ಸಂಗತಿ.

ವಿದ್ಯಾರ್ಥಿನಿಯರು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿ ವಿದ್ಯಾಸಂಸ್ಥೆಗೆ ಕೀರ್ತಿಯನ್ನು ತರಲೆಂದು ಆಶಿಸುತ್ತಾ, "ದರ್ಪಣ" ವಾರ್ಷಿಕ ಸಂಚಿಕೆಗೆ ಶುಭವನ್ನು ಹಾರೈಸುತ್ತೇನೆ.

ಕುಲಪತಿ
25/1/17

ಆರ್. ಧ್ರುವನಾರಾಯಣ
ಎಂ.ಎಸ್ಸಿ.(ಕೃಷಿ)
ಲೋಕಸಭಾ ಸದಸ್ಯರು,
ಚಾಮರಾಜನಗರ, ಕರ್ನಾಟಕ.

ಕಛೇರಿ : ರೂಂ ನಂ. 220
ಜಿಲ್ಲಾಧಿಕಾರಿಗಳ ಸಂಕೀರ್ಣ, ಡಬಲ್ ರೋಡ್
ಚಾಮರಾಜನಗರ – 571313 (ಕರ್ನಾಟಕ)
ಕಛೇರಿ : 08226 - 223444
ಮನೆ : 08221 - 221628
0821 - 2515774
ಮೊ. : 91 - 9448135658
E-mail : dhruvanarayana@gmail.com

ಪತ್ರ ಸಂಖ್ಯೆ 902 | 2016-17

ದಿನಾಂಕ : 06 | 02 | 2017

## ಶು ಭ ಸಂ ದೇ ಶ

ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ಪಟ್ಟಣದಲ್ಲಿರುವ ಜೆ.ಎಸ್.ಎಸ್. ಮಹಿಳಾ ಕಾಲೇಜಿನ ವತಿಯಿಂದ 2016–17ನೇ ಸಾಲಿನ **ವಾರ್ಷಿಕ ಸಂಚಿಕೆ** ಹಾಗೂ ಆಡಳಿತಾತ್ಮಕ ವರದಿ **"ದರ್ಪಣ"**ವನ್ನು ಹೊರತರುತ್ತಿರುವುದು ಸಂತೋಷದ ವಿಷಯವಾಗಿರುತ್ತದೆ. ಈ ಮಹಿಳಾ ಕಾಲೇಜು ನನ್ನ ಮತಕ್ಷೇತ್ರದ ವ್ಯಾಪ್ತಿಗೆ ಒಳಪಡಲಿದ್ದು, ಅನೇಕ ವರ್ಷಗಳಿಂದ ಕೊಳ್ಳೇಗಾಲ ತಾಲ್ಲೂಕಿನ ಸುತ್ತಮುತ್ತಲ ಗ್ರಾಮೀಣ ಹಾಗೂ ಬಡತನದ ಕುಟುಂಬದಿಂದ ಬಂದ ವಿದ್ಯಾರ್ಥಿನಿಯರಿಗೆ ಈ ಕಾಲೇಜು ಉತ್ತಮ ಶಿಕ್ಷಣ ನೀಡುವುದರ ಜೊತೆಗೆ ಸಾಂಸ್ಕೃತಿಕ ಚಟುವಟಿಕೆ ಮತ್ತು ಕ್ರೀಡಾ ಚಟುವಟಿಕೆ ಇತ್ಯಾದಿಗಳಲ್ಲೂ ಇವರುಗಳನ್ನು ತೊಡಗಿಸಿಕೊಂಡು ಅವರ ಪ್ರತಿಭೆಗಳನ್ನು ಗುರುತಿಸಿರುತ್ತದೆ ಅಲ್ಲದೇ ಮುಂದೆ ಇವರುಗಳು ಭಾರತ ದೇಶದ ಉತ್ತಮ ಪ್ರಜೆಯಾಗಲು ಪೂರಕವಾಗುವಂತೆ ಇವರುಗಳನ್ನು ತಯಾರು ಮಾಡಲಾಗಿರುತ್ತದೆ. ಈ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ಅನೇಕ ವಿದ್ಯಾರ್ಥಿನಿಯರು ಉತ್ತಮ ಉದ್ಯೋಗವನ್ನು ಗಳಿಸಿಕೊಳ್ಳುವುದರ ಜೊತೆಗೆ ಇತರರಿಗೆ ಮಾದರಿಯಾಗಿ ಜೀವನ ನಡೆಸುತ್ತಿದ್ದಾರೆ. ಈ ಕಾಲೇಜಿನ ವತಿಯಿಂದ ಹೊರತರುತ್ತಿರುವ ವಾರ್ಷಿಕ ಸಂಚಿಕೆಯಲ್ಲಿನ ಪ್ರತಿಯೊಂದು ಪುಟವೂ ಓದುಗರ ಮನಸೂರೆಗೊಳ್ಳಲಿ ಎಂದು ಹಾಗೂ ಈ ಸಂಚಿಕೆಯಲ್ಲಿ ಕಾಲೇಜಿನ ಪ್ರತಿಭೆಗಳನ್ನು ಇತರರಿಗೆ ಪರಿಚಯಿಸುವ ಸಾಧನವಾಗಲಿ ಎಂದು ಮತ್ತು ಕಾಲೇಜಿನ ವತಿಯಿಂದ ಕೈಗೊಂಡ ಪಠ್ಯ ಮತ್ತು ಪಠ್ಯೇತರ ಕಾರ್ಯಕ್ರಮಗಳ ಸಮಗ್ರ ಆಡಳಿತಾತ್ಮಕ ವರದಿ "ದರ್ಪಣ"ವೂ ಸಹಾ ಕಾಲೇಜಿನ ಚಟುವಟಿಕೆಯ ದರ್ಪಣವಾಗಲಿ ಎಂದು ಶುಭ ಹಾರೈಸುತ್ತೇನೆ. ಈ ಸಂಚಿಕೆಗಳನ್ನು ಹೊರತರಲು ಶ್ರಮಿಸಿದ ಎಲ್ಲರಿಗೂ ಈ ಮೂಲಕ ನನ್ನ ಪ್ರೋತ್ಸಾಹದಾಯಕ ಅಭಿನಂದನೆಗಳು.

ಆರ್. ಧ್ರುವನಾರಾಯಣ
ಲೋಕಸಭಾ ಸದಸ್ಯರು
ಚಾಮರಾಜನಗರ (ಮೀಸಲು) ಲೋಕಸಭಾ ಕ್ಷೇತ್ರ

# ಗೌರ್ನಿಂಗ್ ಕೌನ್ಸಿಲ್ ಸದಸ್ಯರ ಪಟ್ಟಿ

1. ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು — ಅಧ್ಯಕ್ಷರು
   ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
2. ಡಾ. ಸಿ.ಜಿ.ಬೆಟಸೂರಮಠ, ಐಎಎಸ್ (ನಿ) — ಸದಸ್ಯರು
   ಕಾರ್ಯನಿರ್ವಾಹಕ ಕಾರ್ಯದರ್ಶಿ
   ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
3. ಪ್ರೊ. ಟಿ.ಡಿ. ಸುಬ್ಬಣ್ಣ — ಸದಸ್ಯರು
   ನಿರ್ದೇಶಕರು, ಕಾಲೇಜು ಶಿಕ್ಷಣ ವಿಭಾಗ
   ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
4. ಶ್ರೀ ಜಿ. ನಾರಾಯಣ ಪ್ರಸಾದ್ — ವಿಶ್ವವಿದ್ಯಾನಿಲಯದ ನಿಯೋಜಿತ ಸದಸ್ಯರು
   ಸಿಂಡಿಕೇಟ್ ಸದಸ್ಯರು
   ಮೈಸೂರು ವಿಶ್ವವಿದ್ಯಾನಿಲಯ
   ಮೈಸೂರು
5. ಡಾ. ಎಸ್. ಶಿವರುದ್ರಸ್ವಾಮಿ — ಸದಸ್ಯರು
   ಮುದ್ದವೀರಪ್ಪ ಸ್ಮಾರಕ ಆಸ್ಪತ್ರೆ, ಕೊಳ್ಳೇಗಾಲ
6. ಶ್ರೀ ಎಸ್.ಪಿ.ಪಶುಪತಿ — ಸದಸ್ಯರು
   ತೆರಿಗೆ ಲೆಕ್ಕ ಪರಿಶೋಧಕರು
   ಕೊಳ್ಳೇಗಾಲ
7. ಪ್ರೊ. ಬಿ. ಸೋಮಣ್ಣ — ಸದಸ್ಯರು
   ಸಹ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ
   ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ
8. ಡಾ. ಎಂ. ಪ್ರಭು — ಸದಸ್ಯರು
   ಸಹಾಯಕ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
   ವಾಣಿಜ್ಯಶಾಸ್ತ್ರ ಸ್ನಾತಕೋತ್ತರ ಅಧ್ಯಯನ ವಿಭಾಗ
   ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ
9. ಪ್ರೊ. ಉಮೇಶ — ಸದಸ್ಯ ಕಾರ್ಯದರ್ಶಿ
   ಪ್ರಾಂಶುಪಾಲರು
   ಜೆಎಸ್‌ಎಸ್ ಮಹಿಳಾ ಕಾಲೇಜು
   ಕೊಳ್ಳೇಗಾಲ

ದರ್ಪಣ

राष्ट्रीय मूल्यांकन एवं प्रत्यायन परिषद

विश्वविद्यालय अनुदान आयोग का स्वायत्त संस्थान

**NATIONAL ASSESSMENT AND ACCREDITATION COUNCIL**

*An Autonomous Institution of the University Grants Commission*

# Certificate of Accreditation

The Executive Committee of the
National Assessment and Accreditation Council
on the recommendation of the duly appointed
Peer Team is pleased to declare the
J. S. S. College for Women
Ilegal, Dist. Chamarajanagar, affiliated to University of Mysore, Karnataka as
Accredited
With CGPA of 2.31 on four point scale
at B grade
valid up to September 23, 2019

Date : September 24, 2014

Director

EC(SC)/08/RAR/46

# ಪ್ರಾಚಾರ್ಯರ ನುಡಿ

ಶ್ರೀ ಮತ್ತುತ್ತೂರು ಶ್ರೀ ಕ್ಷೇತ್ರದ ಗುರು ಪರಂಪರೆಗೆ ಭಕ್ತಿಪೂರ್ವಕವಾದ ಪ್ರಣಾಮಗಳನ್ನು ಸಲ್ಲಿಸಿ, ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಶಿಕ್ಷಣವೇ ದಿವ್ಯಔಷದವೆಂದು ಮನಗಂಡು ಶಿಕ್ಷಣ ಉಳ್ಳವರಿಗಷ್ಟೇ ಅಲ್ಲ, ಜನ ಸಾಮಾನ್ಯರಿಗೂ ಲಭಿಸುವಂತಾಗಬೇಕು ಎಂಬ ಅದಮ್ಯ ಅಭೀಪ್ಸೆ ಹೊಂದಿದ್ದ ಪ್ರಾತಃಸ್ಮರಣೀಯರಾದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರನ್ನು ಸ್ಮರಿಸುತ್ತ ಸಮಾಜದ ಶ್ರೇಯೋಭಿವೃದ್ಧಿಯನ್ನೇ ಮನದ ಗುರಿಯನ್ನಾಗಿಸಿಕೊಂಡಿರುವ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಪಾದಕಮಲಗಳಿಗೆ ಅನನ್ಯ ಭಕ್ತಿಪೂರ್ವಕವಾದ ಶರಣು ಸಮರ್ಪಣೆಯನ್ನು ಸಲ್ಲಿಸುತ್ತೇನೆ.

ಹಳೇ ಬೇರು ಹೊಸ ಚಿಗುರು ಕೂಡಿರಲು ಮರ ಸೊಗಸು. ಹಾಗೆಯೇ ಹಳೇ ನೀತಿ ಹೊಸ ರೀತಿ ಹೊಂದಿಸಿ ಬಾಳಿದರೆ ಅದೇ ಸ್ವರ್ಗೀಯ ಸ್ಥಿತಿ. ಇದಕ್ಕೆ ಬೇಕು ಶಿಕ್ಷಣ. ಡಾ. ಎಸ್ ರಾಧಾಕೃಷ್ಣನ್ ಹೇಳಿರುವಂತೆ ರಾಷ್ಟ್ರ ಆರ್ಥಿಕ, ಔದ್ಯೋಗಿಕ, ಸಾಮಾಜಿಕ, ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಲು ಅಲ್ಲಿನ ಪ್ರಜೆಗಳಿಗೆ ಸಿಗುತ್ತಿರುವ ಶಿಕ್ಷಣದ ಮೇಲೆ ಅವಲಂಬಿತ. ಈ ದಿಶೆಯಲ್ಲಿ ಬಡತನ, ನಿರುದ್ಯೋಗ, ಅಸಮಾನ್ಯತೆ, ಅನಾರೋಗ್ಯಗಳಿಗೆ ವಿದ್ಯೆಯಿಲ್ಲದಿರುವುದೇ ಮೂಲ ಎಂಬುದನ್ನು ಅರಿತು ಪೂಜ್ಯ ಶ್ರೀಗಳು 1954ರಲ್ಲಿ ಸ್ಥಾಪಿಸಿದ ಜೆಎಸ್‌ಎಸ್ ಮಹಾವಿದ್ಯಾಪೀಠದ ಶಿಕ್ಷಣ ಸಂಸ್ಥೆಗಳಲ್ಲೊಂದಾದ ಕೊಳ್ಳೇಗಾಲ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿರುವುದು ನನ್ನ ಪುಣ್ಯವೆಂದೇ ಭಾವಿಸುತ್ತೇನೆ.

ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳಿಗೆ ಪದವಿ ಶಿಕ್ಷಣ ಗಗನ ಕುಸುಮವಾಗಿದ್ದ ಕಾಲದಲ್ಲಿ ಮಹಿಳಾ ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣವನ್ನು ನೀಡುವ ಉದ್ದೇಶದೊಂದಿಗೆ ಕಾಲೇಜು 1983ರಲ್ಲಿ ಸ್ಥಾಪಿಸಲ್ಪಟ್ಟಿತು. ಅಂದು ಕೇವಲ 23 ವಿದ್ಯಾರ್ಥಿಗಳೊಂದಿಗೆ ಬಾಡಿಗೆ ಕಟ್ಟಡದಲ್ಲಿ ಬಿ.ಎ ಪದವಿಯೊಂದಿಗೆ ಪ್ರಾರಂಭಗೊಂಡು ಇಂದು ಬಿ.ಎ ಮಾತ್ರವಲ್ಲದೆ ಬಿ.ಕಾಂ, ಬಿ.ಬಿ.ಎ, ಯು.ಜಿ.ಸಿ ಪ್ರಾಯೋಜಿತ ಆಡ್ ಆನ್ ಕೋರ್ಸ್‌ಗಳು, ಇತರೆ ಅಲ್ಪಾವಧಿ ಪದವಿಗಳು ಮತ್ತು ಎಂ.ಕಾಂ (ವಾಣಿಜ್ಯಶಾಸ್ತ್ರ ಸ್ನಾತಕೋತ್ತರ ವಿಭಾಗ) ಪದವಿಗಳವರೆವಿಗೂ ಬೆಳೆದು 600ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿರುವುದು ಸಂತಸದ ವಿಷಯವಾಗಿದೆ.

ಕಾಲೇಜಿನಲ್ಲಿ ಮಾಹಿತಿ ಮತ್ತು ಸಂವಹನ ಸೌಲಭ್ಯವುಳ್ಳ ಸುಸಜ್ಜಿತ ಸಭಾಂಗಣ, ತರಗತಿ ಕೊಠಡಿಗಳು, ವಿಚಾರ ಸಂಕಿರಣ ಕೊಠಡಿ, ಗಣಕಯಂತ್ರ ಪ್ರಯೋಗಾಲಯ, ಪೂರ್ಣ ಪ್ರಮಾಣದಲ್ಲಿ ಗಣಕೀಕೃತ ಹೊಂದಿರುವ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ, ಆಟದ ಮೈದಾನ, ವಾಹನ ನಿಲುಗಡೆ ಸೌಲಭ್ಯ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಫಲಹಾರ ಮಂದಿರ, 210 ವಿದ್ಯಾರ್ಥಿನಿಯರು ವಾಸ್ತವ್ಯ ಹೊಂದುವಂಥ ಮಹಿಳಾ ವಸತಿ ನಿಲಯ, ಇತ್ಯಾದಿ ಸೌಲಭ್ಯಗಳೊಂದಿಗೆ ಶಿಕ್ಷಣ ನೀಡುತ್ತಿರುವ ಪ್ರತಿಫಲವಾಗಿ ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮೌಲ್ಯೀಕರಣ ಸಂಸ್ಥೆ (ನ್ಯಾಕ್) ಸೆಪ್ಟೆಂಬರ್ 2014ರಲ್ಲಿ ಕಾಲೇಜಿಗೆ ಭೇಟಿ ನೀಡಿ "ಬಿ" ಮಾನ್ಯತೆ ನೀಡಿದೆ.

ವಿದ್ಯಾರ್ಥಿನಿಯರ ಸರ್ವತೋಮುಖ ಅಭಿವೃದ್ಧಿಗೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ಕಾಲೇಜು ಸಕ್ರಿಯವಾಗಿದ್ದು, ವಿದ್ಯಾರ್ಥಿನಿಯರಲ್ಲಿ ಅಡಗಿರುವ ಸುಪ್ತ ಪ್ರತಿಭೆಯನ್ನು ಗುರುತಿಸಿ ಸಮಾಜಮುಖಿಯಾಗಿಸುವ ಉದ್ದೇಶದಿಂದ "ದರ್ಪಣ" ವಾರ್ಷಿಕ ಸಂಚಿಕೆಯನ್ನು ಹೊರತರುತ್ತಿರುವುದು ಸಂತಸ ನೀಡಿದೆ. ಇದು ವಿದ್ಯಾರ್ಥಿನಿಯರ ಪ್ರತಿಭೆಗಳಿಗೆ ಹಿಡಿದ ಕನ್ನಡಿಯಾಗಲಿ ಎಂದು ಹಾರೈಸುತ್ತೇನೆ. ಸಕಾಲಕ್ಕೆ ಶುಭ ಸಂದೇಶ ಕಳುಹಿಸಿಕೊಟ್ಟಿರುವ ಗೌರವಾನ್ವಿತರೆಲ್ಲರಿಗೂ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸಬಯಸುತ್ತೇನೆ. ಕಾಲೇಜಿನ ಶ್ರೇಯೋಭಿವೃದ್ಧಿಗೆ ಮಾರ್ಗದರ್ಶನ ನೀಡುತ್ತಿರುವ ಕಾಲೇಜು ಆಡಳಿತ ಮಂಡಳಿಯ ಗೌರವಾನ್ವಿತ ಸದಸ್ಯರುಗಳಿಗೆ, ವಿದ್ಯಾರ್ಥಿ ಪೋಷಕರಿಗೆ, ಕಾಲೇಜಿನ ನೌಕರ ಬಂಧುಗಳಿಗೆ ಹಾಗೂ ಈ ಸಂಚಿಕೆಗಾಗಿ ಶ್ರಮಿಸಿರುವ ಸಂಪಾದಕರು, ಸಮಿತಿ ಸದಸ್ಯರು, ಮುದ್ರಕರಾದ ಶ್ರೀ ಎಂ ಎಸ್ ರಾಮನಾಥ ಗುಪ್ತರವರಿಗೂ ಅಭಿನಂದನೆಗಳು.

ಪ್ರಾಂಶುಪಾಲರು

## ಸಂಪಾದಕರ ನುಡಿ



ಶ್ರೀಮತ್ಸುತ್ತೂರು ಗುರುಪರಂಪರೆಯನ್ನು ಭಕ್ತಿಪೂರ್ವಕವಾಗಿ ನೆನೆಯುತ್ತಾ, ಅಕ್ಷರಜ್ಞಾನವೇ ನಾಡಿನ ಬೀಜಮಂತ್ರವೆಂದು ನಾಡಿನಾದ್ಯಂತ ಅಕ್ಷರ, ಅನ್ನದಾಸೋಹದ ಮೂಲಕ ಸಮಾಜದ ಶ್ರೇಯೋಭಿವೃದ್ಧಿಯನ್ನು ಬಯಸಿದ ಕಾಯಕಯೋಗಿ ಜ್ಞಾನಾನ್ನ ದಾಸೋಹಿಗಳಾದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರನ್ನು ಸಂಸ್ಮರಿಸುತ್ತ, "ದರ್ಪಣ" ಸಂಚಿಕೆಗೆ ಶುಭ ಸಂದೇಶವನ್ನು ದಯಪಾಲಿಸಿ ಆಶೀರ್ವದಿಸಿರುವ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಪಾದಾರವಿಂದಗಳಿಗೆ ಭಕ್ತಿಪೂರ್ವಕವಾದ ಪ್ರಣಾಮಗಳನ್ನು ಸಲ್ಲಿಸುತ್ತೇನೆ.

ನಮ್ಮ ಕಾಲೇಜಿನ ಹೆಮ್ಮೆಯ ವಾರ್ಷಿಕ ಸಂಚಿಕೆ "ದರ್ಪಣ" ಭೌತಿಕ ಸ್ವರೂಪವನ್ನು ಯಥಾವತ್ತಾಗಿ ತೋರಿಸುವ ಸಾಧನವೆಂದರೆ ಕನ್ನಡಿ. ಮೂರ್ತ ವಸ್ತುವನ್ನು ಕಂಡು ಅದನ್ನು ಆಂತರ್ಯಕ್ಕೆ ತೆಗೆದುಕೊಂಡು ಪ್ರತಿಭಾ ನೆಲೆಯಲ್ಲಿ ಮಥನಿಸಿ ಅದರ ಮೂಲರೂಪಕ್ಕೆ ತಕ್ಕ ಹಾಗೆ ಅಭಿವ್ಯಕ್ತಿಸುವ ಮಾಧ್ಯಮವೇ ದರ್ಪಣ.

ವಿದ್ಯಾರ್ಥಿಗಳಲ್ಲಿ ಅಡಗಿರುವ ಸುಪ್ತ ಪ್ರತಿಭೆಯನ್ನು ಅನಾವರಣಗೊಳಿಸಲು ಅವಕಾಶವೀಯುವ ಮತ್ತು ಪ್ರತಿಭೆಯನ್ನು ಸಾಕ್ಷೀಕರಿಸಿ ಭರವಸೆ ಮೂಡಿಸುವ ದಿಕ್ಕಿನಲ್ಲಿ ನಾವು ಪ್ರತೀ ಶೈಕ್ಷಣಿಕ ಸಾಲಿನಲ್ಲಿಯೂ ಸೃಜನಶೀಲ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳು ತಮ್ಮನ್ನು ಮುಕ್ತವಾಗಿ ತೊಡಗಿಸಿಕೊಳ್ಳಬೇಕೆಂಬ ಉದ್ದೇಶ ಹೊತ್ತು, ಅನುಪಮ ಆಶಯಗಳನ್ನಿಟ್ಟುಕೊಂಡು ಈ ಸಂಚಿಕೆಯನ್ನು ಹೊರತರುತ್ತಿದ್ದೇವೆ. ವಿವಿಧ ಪ್ರಕಾರಗಳಲ್ಲಿ ಮೇಳೈಸಿರುವ ಸಾಹಿತ್ಯ ವಿದ್ಯಾರ್ಥಿಗಳ ಆಸಕ್ತಿ ಕೆರಳಿಸಿ ಅಭಿವ್ಯಕ್ತಿ ಕಾಯ್ದುಕೊಳ್ಳುವ ದಿಕ್ಕಿನಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿ ಸಮುದಾಯದ ಕಾಣ್ಕೆಯಂತೆ ಈ ದರ್ಪಣ ಸಂಚಿಕೆ ರೂಪ ಪಡೆದಿದೆ.

ಸಂಚಿಕೆಯನ್ನು ಹೊರತರುವ ಸಂದರ್ಭದಲ್ಲಿ ಸೂಕ್ತ ಸಲಹೆ ಸೂಚನೆಗಳನ್ನು ನೀಡಿ ಸಹಕರಿಸಿದ ಪ್ರಾಂಶುಪಾಲರಾದ ಪ್ರೊ. ಉಮೇಶರವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಸಂಚಿಕೆಗೆ ಶುಭ ಸಂದೇಶವನ್ನು ಕಳುಹಿಸಿ ಶುಭ ಕೋರಿರುವ ಎಲ್ಲಾ ಗಣ್ಯರಿಗೂ ಹೃತ್ಪೂರ್ವಕ ಕೃತಜ್ಞತೆಗಳು. ದರ್ಪಣ ಸಂಚಿಕೆಯ ಪ್ರಕಟಣೆಗೆ ಸಂಪೂರ್ಣ ಸಹಕಾರ ನೀಡಿದ ಜೆಎಸ್ಎಸ್ ಮಹಾವಿದ್ಯಾಪೀಠದ ಆಡಳಿತ ಮಂಡಳಿಯವರಿಗೆ, ಕಾಲೇಜು ಶಿಕ್ಷಣ ವಿಭಾಗದ ಅಧಿಕಾರಿ ವರ್ಗದವರಿಗೆ, ಗೌರವಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಸಂಚಿಕೆಗೆ ತಮ್ಮ ಬರಹಗಳ ಮೂಲಕ ಕಳೆಕಟ್ಟಿರುವ ಎಲ್ಲಾ ವಿದ್ಯಾರ್ಥಿನಿಯರಿಗೂ ಪ್ರೀತಿಪೂರ್ವಕವಾದ ಧನ್ಯವಾದಗಳು. ವರದಿಗಳನ್ನು ನೀಡುವುದರ ಮೂಲಕ ಸಹಕರಿಸಿರುವ ವಿವಿಧ ವಿಭಾಗದ ಮುಖ್ಯಸ್ಥರು ಹಾಗೂ ವಿವಿಧ ಸಮಿತಿಯ ಸಂಚಾಲಕರಿಗೆ ಮತ್ತು ಸಂಪಾದಕ ಮಂಡಳಿಯ ಸದಸ್ಯರುಗಳಿಗೆ ಕೃತಜ್ಞತೆಗಳು. ಈ ಸಂಚಿಕೆಯನ್ನು ಅಂದವಾಗಿ ಮುದ್ರಿಸಲು ಶ್ರಮಿಸಿದ ಗುಪ್ತ ಆಫ್‌ಸೆಟ್ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀ ರಾಮನಾಥ ಗುಪ್ತರವರಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಧನ್ಯವಾದಗಳು.

ಸಂಪಾದಕರು

# ಕಾಲೇಜಿನ ಮಾಹಿತಿ

| | | |
|---|---|---|
| ಹೆಸರು ಮತ್ತು ವಿಳಾಸ | : | ಜೆಎಸ್‌ಎಸ್ ಮಹಿಳಾ ಕಾಲೇಜು<br>ಕೊಳ್ಳೇಗಾಲ – 571440 |
| ದೂರವಾಣಿ | : | 08224 252149 |
| ಫ್ಯಾಕ್ಸ್ | : | 08224 256051 |
| ಮಿಂಚಂಚೆ | | jsscwk@gmail.com |
| ಜಾಲತಾಣ | : | www.jsscwkgl.org |
| ಸ್ಥಾಪನೆ | : | 1983 |
| ಪ್ರಾಚಾರ್ಯರ ಹೆಸರು | : | ಪ್ರೊ. ಉಮೇಶ |
| ಮಿಂಚಂಚೆ | : | umeshamudigundam@gmail.com |
| ಮೂಲ ಸೌಕರ್ಯಗಳು: | | |
| ಭೂಮಿಯ ವಿಸ್ತೀರ್ಣ | : | 3.96 ಎಕರೆ |
| ಕಟ್ಟಡ | : | 128825 ಚದರ ಅಡಿ |
| ತರಗತಿಗಳು | : | 15 (9010.875 ಚ. ಅಡಿ) |
| ಪ್ರಯೋಗಾಲಯ ಕೊಠಡಿಗಳು | : | 02 (1656 ಚ.ಅಡಿ) |
| ಸಭಾಂಗಣ | : | 01 (834.75 ಚ. ಅಡಿ) |
| ಪ್ರಾಚಾರ್ಯರ ಕೊಠಡಿ | : | 01 (543.25 ಚ.ಅಡಿ) |
| ಅಧ್ಯಾಪಕರ ಕೊಠಡಿಗಳು | : | 05 (1367 ಚ.ಅಡಿ) |
| ವಿದ್ಯಾರ್ಥಿನಿಯರ ವಿಶ್ರಾಂತಿ ಕೊಠಡಿಗಳು | : | 03 (1197.875 ಚ.ಅಡಿ) |
| ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ | : | 01 (2132 ಚ.ಅಡಿ) |
| ಗ್ರಂಥಾಲಯದಲ್ಲಿನ ಪುಸ್ತಕಗಳ ಸಂಖ್ಯೆ | : | 19580 |
| ನಿಯತ ಕಾಲಿಕೆಗಳು | : | 58 |
| ಕ್ರೀಡಾ ಕೊಠಡಿ | : | 01 456 ಚ. ಅಡಿ |
| ವ್ಯಾಯಾಮ ಕೊಠಡಿಗಳು | : | 02 648 ಚ.ಅಡಿ |
| ಮಹಿಳಾ ವಸತಿನಿಲಯ | : | 3443 ಚ. ಮೀಟರ್ |
| ರಾ.ಸೇ.ಯೋ. ಕೊಠಡಿ | : | 247 ಚ.ಅಡಿಗಳು |

# ಬೋಧನಾಂಗ

## ಪ್ರೊ ಉಮೇಶ

ಪ್ರಾಂಶುಪಾಲರು
ವಾಣಿಜ್ಯಶಾಸ್ತ್ರ ವಿಭಾಗ

| ಕ್ರ ಸಂ | ವಿಭಾಗ ಮತ್ತು ಹೆಸರು | ಪದನಾಮ | ಪಿ ಹೆಚ್‌ಡಿ, ಎನ್‌ಇಟಿ, ಕೆಸೆಟ್ |
|---|---|---|---|
| 1 | **ಕನ್ನಡ ವಿಭಾಗ** | | |
| | ಪ್ರೊ. ಎಂ. ಬಸವರಾಜು | ಮುಖ್ಯಸ್ಥರು ನುತ್ತು ಸಹಾಯಕ ಪ್ರಾಧ್ಯಾಪಕರು | ಎನ್‌ಇಟಿ |
| | ಶ್ರೀಮತಿ ಸಿ ರೂಪಶ್ರೀ | ಸಹಾಯಕ ಪ್ರಾಧ್ಯಾಪಕರು | |
| | ಶ್ರೀ ನಟರಾಜು | ಸಹಾಯಕ ಪ್ರಾಧ್ಯಾಪಕರು | ಎಂ.ಫಿಲ್ ಎನ್‌ಇಟಿ |
| 2 | **ಇಂಗ್ಲಿಷ್ ವಿಭಾಗ** | | |
| | ಪ್ರೊ. ಎ.ಪಿ ಮಹದೇವಪ್ಪ | ಮುಖ್ಯಸ್ಥರು ಮತ್ತು ಸಹಾಯಕ ಪ್ರಾಧ್ಯಾಪಕರು | ಎಂ.ಫಿಲ್ |
| | ಕು. ಎಸ್ ಗೀತಾ | ಸಹಾಯಕ ಪ್ರಾಧ್ಯಾಪಕರು | |
| 3 | **ಇತಿಹಾಸ ವಿಭಾಗ** | | |
| | ಪ್ರೊ. ಹೆಚ್ ಜಿ ನಟರಾಜನ್ | ಮುಖ್ಯಸ್ಥರು & ಸಹಾಯಕ ಪ್ರಾಧ್ಯಾಪಕರು | ಎಂ.ಫಿಲ್ |
| | ಶ್ರೀ ಸತೀಶ್ | ಸಹಾಯಕ ಪ್ರಾಧ್ಯಾಪಕರು | ಕೆ.ಸೆಟ್ |
| 4 | **ಅರ್ಥಶಾಸ್ತ್ರ ವಿಭಾಗ** | | |
| | ಪ್ರೊ. ಬಿ ಸೋಮಣ್ಣ | ಮುಖ್ಯಸ್ಥರು ಮತ್ತು ಸಹ ಪ್ರಾಧ್ಯಾಪಕರು | |
| | ಶ್ರೀಮತಿ ಪುಟ್ಟಮ್ಮ | ಸಹಾಯಕ ಪ್ರಾಧ್ಯಾಪಕರು | ಎಂ.ಫಿಲ್ |
| | ಶ್ರೀ ಪಿ ಮಹೇಶ್ | ಸಹಾಯಕ ಪ್ರಾಧ್ಯಾಪಕರು | ಕೆ.ಸೆಟ್ |
| 5 | **ರಾಜ್ಯಶಾಸ್ತ್ರ ವಿಭಾಗ** | | |
| | ಶ್ರೀ ಕೆ.ಆರ್ ಗುರುಪ್ರಸಾದ್ | ಸಹಾಯಕ ಪ್ರಾಧ್ಯಾಪಕರು | |
| | ಶ್ರೀಮತಿ ಜಿ.ಎಸ್ ಸುಮ | ಸಹಾಯಕ ಪ್ರಾಧ್ಯಾಪಕರು | |
| | ಶ್ರೀ ಕೆ.ಎಸ್ ಪ್ರಕಾಶ್ | ಸಹಾಯಕ ಪ್ರಾಧ್ಯಾಪಕರು | |
| 6 | **ಭೂಗೋಳಶಾಸ್ತ್ರ ವಿಭಾಗ** | | |
| | ಶ್ರೀಮತಿ ಎ.ಎಸ್ ಸ್ಮಿತಾ | ಮುಖ್ಯಸ್ಥರು ಮತ್ತು ಸಹಾಯಕ ಪ್ರಾದ್ಯಾಪಕರು | |
| | ಶ್ರೀ ಬಿ. ಮಂಜುನಾಥ್ | ಸಹಾಯಕ ಪ್ರಾದ್ಯಾಪಕರು | |
| 7 | **ವಾಣಿಜ್ಯಶಾಸ್ತ್ರ ವಿಭಾಗ** | | |
| | ಪ್ರೊ ಉಮೇಶ್ | ಮುಖ್ಯಸ್ಥರು ಮತ್ತು ಸಹಾಯಕ ಪ್ರಾಧ್ಯಾಪಕರು | |
| | ಡಾ. ಎಂ ಪ್ರಭು | ಸಹಾಯಕ ಪ್ರಾಧ್ಯಾಪಕರು | ಪಿ.ಹೆಚ್‌ಡಿ ಎನ್‌ಇಟಿ |
| | ಶ್ರೀಮತಿ ಎನ್ ಭ್ರಮರಾಂಭ | ಸಹಾಯಕ ಪ್ರಾಧ್ಯಾಪಕರು | ಎಂ.ಫಿಲ್ |
| | ಕು. ಆರ್.ಪಿ ಸೌಮ್ಯ | ಸಹಾಯಕ ಪ್ರಾಧ್ಯಾಪಕರು | |
| | ಕು ತೇಜಸ್ವಿನಿ | ಸಹಾಯಕ ಪ್ರಾಧ್ಯಾಪಕರು | |

| | | | |
|---|---|---|---|
| 8 | **ವ್ಯವಹಾರ ನಿರ್ವಹಣಾ ವಿಭಾಗ** | | |
| | ಶ್ರೀಮತಿ ಎಸ್ ಮಮತ | ಮುಖ್ಯಸ್ಥರು ಮತ್ತು ಸಹಾಯಕ ಪ್ರಾಧ್ಯಾಪಕರು | ಎಂ.ಫಿಲ್ |
| | ಶ್ರೀಮತಿ ಎನ್ ವಾಣಿ | ಸಹಾಯಕ ಪ್ರಾಧ್ಯಾಪಕರು | |
| | ಕು. ಎನ್ ಸೌಮ್ಯಶ್ರೀ | ಸಹಾಯಕ ಪ್ರಾಧ್ಯಾಪಕರು | |
| 9 | **ದೈಹಿಕ ಶಿಕ್ಷಣ ವಿಭಾಗ** | | |
| | ಪ್ರೊ. ಕೆ.ಆರ್ ಉಮಾದೇವಿ | ದೈಹಿಕ ಶಿಕ್ಷಣ ನಿರ್ದೇಶಕರು | |
| 10 | **ವಾಣಿಜ್ಯಶಾಸ್ತ್ರ ಸ್ನಾತಕೋತ್ತರ ವಿಭಾಗ** | | |
| | ಡಾ. ಎಂ. ಪ್ರಭು | ಮುಖ್ಯಸ್ಥರು ಮತ್ತು ಸಹಾಯಕ ಪ್ರಾದ್ಯಾಪಕರು | ಪಿ.ಹೆಚ್‌ಡಿ, ಎನ್‌ಇಟಿ |
| | ಶ್ರೀ ಸುರೇಶ್ | ಸಹಾಯಕ ಪ್ರಾಧ್ಯಾಪಕರು | ಕೆ.ಸೆಟ್ |
| | ಶ್ರೀ ಬಸವದತ್ತ ಮಹದೇವಪ್ರಸಾದ್ | ಸಹಾಯಕ ಪ್ರಾಧ್ಯಾಪಕರು | |
| | ಕು ಎಸ್. ಸರಸ್ವತಿ | ಸಹಾಯಕ ಪ್ರಾದ್ಯಾಪಕರು | ಎನ್‌ಇಟಿ |

| | | |
|---|---|---|
| **ಬೋಧಕೇತರ ವರ್ಗ (ಅನುದಾನಿತ)** | ಶ್ರೀ ಮಂಜೇಗೌಡ | ಅಧೀಕ್ಷಕರು |
| | ಶ್ರೀ ಎಂ ಶಾಂತಮೂರ್ತಿ | ದ್ವಿತೀಯ ದರ್ಜೆ ಸಹಾಯಕರು |
| | ಶ್ರೀ ಆರ್ ಮಾದೇಶು | ಗುಮಾಸ್ತ – ಯಾ ಬೆರಳಚ್ಚುಗಾರರು |
| | ಶ್ರೀ ಮಹದೇವಪ್ಪ | ಸಹಾಯಕರು |
| | ಶ್ರೀ ಬಿ ಮಹದೇವಸ್ವಾಮಿ | ಪರಿಚಾರಕರು |
| | ಶ್ರೀ ಪ್ರಭುಸ್ವಾಮಿ | ಪರಿಚಾರಕರು |
| **ಬೋಧಕೇತರ ವರ್ಗ (ಆಡಳಿತ ಮಂಡಳಿ)** | ಶ್ರೀ ಶ್ರೀನಿವಾಸ್ | ಗ್ರಂಥಪಾಲಕರು |
| | ಶ್ರೀಮತಿ ವಿ. ಗೀತಾ | ಕಂಪ್ಯೂಟರ್ ಪ್ರೋಗ್ರಾಮರ್ |
| | ಶ್ರೀಮತಿ ಎಂ ನಾಗರತ್ನ | ದ್ವಿತೀಯ ದರ್ಜೆ ಸಹಾಯಕರು |
| | ಶ್ರೀಮತಿ ಪಿ ಮಧುಶಾಲಿನಿ | ದ್ವಿತೀಯ ದರ್ಜೆ ಸಹಾಯಕರು |
| | ಶ್ರೀಮತಿ ಪಿ ಮಧುಶಾಲಿನಿ | ದ್ವಿತೀಯ ದರ್ಜೆ ಸಹಾಯಕರು |
| | ಶ್ರೀಮತಿ ಬಿ ಕಾತ್ಯಾಯಿನಿ | ದ್ವಿತೀಯ ದರ್ಜೆ ಸಹಾಯಕರು |
| | ಶ್ರೀಮತಿ ಬಿ ಅನಿತ | ದ್ವಿತೀಯ ದರ್ಜೆ ಸಹಾಯಕರು |
| | ಕು. ಭವಾನಿ | ದ್ವಿತೀಯ ದರ್ಜೆ ಸಹಾಯಕರು |
| | ಶ್ರೀ ಜಿ ಮಹದೇವಸ್ವಾಮಿ | ಸಹಾಯಕರು |
| | ಶ್ರೀ ವಿರೂಪಾಕ್ಷ ಮೂರ್ತಿ | ಪರಿಚಾರಕರು |
| | ಶ್ರೀ ದಾಸಯ್ಯ | ಕಾವಲುಗಾರರು |

# ವಿವಿಧ ಸಮಿತಿಗಳು

## ನ್ಯಾಕ್ ಸಮಿತಿ

| | | |
|---|---|---|
| ಶ್ರೀ ಬಿ. ಸೋಮಣ್ಣ | ಅರ್ಥಶಾಸ್ತ್ರ ವಿಭಾಗ | ಸಂಚಾಲಕರು |
| ಶ್ರೀ ಎಂ.ಎಂ. ಮೋಹನ | ರಾಜ್ಯಶಾಸ್ತ್ರ ವಿಭಾಗ | ಸದಸ್ಯರು |
| ಶ್ರೀ ಎ.ಪಿ. ಮಹದೇವಪ್ಪ | ಆಂಗ್ಲಭಾಷಾ ವಿಭಾಗ | ಸದಸ್ಯರು |
| ಶ್ರೀ ಎಂ. ಬಸವರಾಜು | ಕನ್ನಡ ವಿಭಾಗ | ಸದಸ್ಯರು |
| ಶ್ರೀ ಹೆಚ್.ಜಿ. ನಟರಾಜನ್ | ಇತಿಹಾಸ ವಿಭಾಗ | ಸದಸ್ಯರು |
| ಡಾ. ಎಂ. ಪ್ರಭು | ವಾಣಿಜ್ಯಶಾಸ್ತ್ರ ವಿಭಾಗ | ಸದಸ್ಯರು |
| ಶ್ರೀಮತಿ ಕೆ.ಆರ್. ಉಮಾದೇವಿ | ದೈಹಿಕ ಶಿಕ್ಷಣ ನಿರ್ದೇಶಕರು | ಸದಸ್ಯರು |
| ಶ್ರೀಮತಿ ಎಸ್. ಮಮತ | ನಿರ್ವಹಣಾ ವಿಭಾಗ | ಸದಸ್ಯರು |
| ಶ್ರೀಮತಿ ಎ.ಎಸ್. ಸ್ಮಿತಾ | ಭೂಗೋಳಶಾಸ್ತ್ರ ವಿಭಾಗ | ಸದಸ್ಯರು |
| ಶ್ರೀಮತಿ ವಿ. ಗೀತಾ | ಗಣಕಯಂತ್ರ ವಿಭಾಗ | ಸದಸ್ಯರು |

## ಆಂತರಿಕ ಗುಣಮಟ್ಟ ಮೌಲ್ಯಮಾಪನ ಸಮಿತಿ

| | | |
|---|---|---|
| ಡಾ. ಎಂ. ಪ್ರಭು | ವಾಣಿಜ್ಯಶಾಸ್ತ್ರ ವಿಭಾಗ | ಸಂಚಾಲಕರು |
| ಶ್ರೀಮತಿ ಎನ್. ಭ್ರಮರಾಂಭ | ವಾಣಿಜ್ಯಶಾಸ್ತ್ರ ವಿಭಾಗ | ಸದಸ್ಯರು |
| ಕು. ಎಸ್. ಸರಸ್ವತಿ | ಸ್ನಾತಕೋತ್ತರ ವಿಭಾಗ | ಸದಸ್ಯರು |
| ಶ್ರೀಮತಿ ಎಸ್. ಮಮತ | ನಿರ್ವಹಣಾ ವಿಭಾಗ | ಸದಸ್ಯರು |
| ಶ್ರೀ ಶ್ರೀನಿವಾಸ | ಗ್ರಂಥಾಲಯ ವಿಭಾಗ | ಸದಸ್ಯರು |

## ಮಹಿಳೆಯರ ಲೈಂಗಿಕ ಕಿರುಕುಳ ನಿವಾರಣಾ ಸಮಿತಿ

| | | |
|---|---|---|
| ಶ್ರೀಮತಿ ಕೆ.ಆರ್. ಉಮಾದೇವಿ | ದೈಹಿಕ ಶಿಕ್ಷಣ ನಿರ್ದೇಶಕರು | ಸಂಚಾಲಕರು |
| ಶ್ರೀಮತಿ ಎಸ್. ಮಮತ | ನಿರ್ವಹಣಾ ವಿಭಾಗ | ಸದಸ್ಯರು |
| ಶ್ರೀಮತಿ ಎನ್. ವಾಣಿ | ನಿರ್ವಹಣಾ ವಿಭಾಗ | ಸದಸ್ಯರು |
| ಶ್ರೀಮತಿ ವಿಜಯಲಕ್ಷ್ಮೀ | ಹಿರಿಯ ವಿದ್ಯಾರ್ಥಿನಿ | ಸದಸ್ಯರು |
| ಶ್ರೀಮತಿ ಅನುಪಮಾ ಗುರಪ್ಪ | ಹಿರಿಯ ವಿದ್ಯಾರ್ಥಿನಿ | ಸದಸ್ಯರು |

## ಉದ್ಯೋಗ ಮತ್ತು ಮಾಹಿತಿ ಕೇಂದ್ರ ಸಮಿತಿ

| | | |
|---|---|---|
| ಶ್ರೀ ಎ ಪಿ ಮಹದೇವಪ್ಪ | ಆಂಗ್ಲಭಾಷಾ ವಿಭಾಗ | ಸಂಚಾಲಕರು |
| ಶ್ರೀ ಬಸವದತ್ತ ಮಹದೇವಪ್ರಸಾದ್ | ವಾಣಿಜ್ಯಶಾಸ್ತ್ರ ವಿಭಾಗ | ಸದಸ್ಯರು |
| ಕು. ಸರಸ್ವತಿ | ಸ್ನಾತಕೋತ್ತರ ವಿಭಾಗ | ಸದಸ್ಯರು |
| ಶ್ರೀಮತಿ ಎಸ್. ಮಮತ | ನಿರ್ವಹಣಾ ವಿಭಾಗ | ಸದಸ್ಯರು |
| ಕು. ಎಸ್. ಗೀತಾ | ಆಂಗ್ಲಭಾಷಾ ವಿಭಾಗ | ಸದಸ್ಯರು |
| ಶ್ರೀಮತಿ ಭ್ರಮರಾಂಭ | ವಾಣಿಜ್ಯಶಾಸ್ತ್ರ ವಿಭಾಗ | ಸದಸ್ಯರು |
| ಶ್ರೀಮತಿ ಪುಟ್ಟಮ್ಮ | ಅರ್ಥಶಾಸ್ತ್ರ ವಿಭಾಗ | ಸದಸ್ಯರು |
| ಕು. ಎಸ್. ಸೌಮ್ಯಶ್ರೀ | ನಿರ್ವಹಣಾ ವಿಭಾಗ | ಸದಸ್ಯರು |
| ಶ್ರೀಮತಿ ಎನ್. ವಾಣಿ | ನಿರ್ವಹಣಾ ವಿಭಾಗ | ಸದಸ್ಯರು |

## ರ್‍ಯಾಗಿಂಗ್ ನಿರ್ಮೂಲನಾ ಸಮಿತಿ

| | | |
|---|---|---|
| ಶ್ರೀಮತಿ ಕೆ.ಆರ್. ಉಮಾದೇವಿ | ದೈಹಿಕ ಶಿಕ್ಷಣ ನಿರ್ದೇಶಕರು | ಸಂಚಾಲಕರು |
| ಶ್ರೀ ಶ್ರೀನಿವಾಸ | ಗ್ರಂಥಾಲಯ ವಿಭಾಗ | ಸದಸ್ಯರು |
| ಶ್ರೀಮತಿ ವಿ. ಗೀತಾ | ಗಣಕಯಂತ್ರ ವಿಭಾಗ | ಸದಸ್ಯರು |
| ಕು. ಸರಸ್ವತಿ | ಸ್ನಾತಕೋತ್ತರ ವಿಭಾಗ | ಸದಸ್ಯರು |
| ಶ್ರೀಮತಿ ಎನ್. ಭ್ರಮರಾಂಭ | ವಾಣಿಜ್ಯಶಾಸ್ತ್ರ ವಿಭಾಗ | ಸದಸ್ಯರು |

## ರಾಷ್ಟ್ರೀಯ ಉಚ್ಚತಾ ಶಿಕ್ಷಣ ಅಭಿಯಾನ ಸಮಿತಿ

| | | |
|---|---|---|
| ಡಾ. ಎಂ ಪ್ರಭು | ವಾಣಿಜ್ಯಶಾಸ್ತ್ರ ವಿಭಾಗ | ಸಂಚಾಲಕರು |
| ಶ್ರೀಮತಿ ವಿ. ಗೀತಾ | ಗಣಕಯಂತ್ರ ವಿಭಾಗ | ಸದಸ್ಯರು |
| ಕು. ಸರಸ್ವತಿ | ಸ್ನಾತಕೋತ್ತರ ವಿಭಾಗ | ಸದಸ್ಯರು |
| ಶ್ರೀ ಸುರೇಶ | ವಾಣಿಜ್ಯಶಾಸ್ತ್ರ ವಿಭಾಗ | ಸದಸ್ಯರು |
| ಶ್ರೀ ಪಿ. ಮಹೇಶ | ಅರ್ಥಶಾಸ್ತ್ರ ವಿಭಾಗ | ಸದಸ್ಯರು |

## ಇನೋವೇಷನ್ ಸಮಿತಿ

| | | |
|---|---|---|
| ಶ್ರೀ ಎ.ಪಿ. ಮಹದೇವಪ್ಪ | ಆಂಗ್ಲಬಾಷಾ ವಿಭಾಗ | ಸಂಚಾಲಕರು |
| ಶ್ರೀ ಶ್ರೀನಿವಾಸ | ಗ್ರಂಥಾಲಯ ವಿಭಾಗ | ಸದಸ್ಯರು |

| | | |
|---|---|---|
| ಶ್ರೀಮತಿ ಗೀತಾ ವಿ. | ಗಣಕಯಂತ್ರ ವಿಭಾಗ | ಸದಸ್ಯರು |
| ಕು. ಸರಸ್ವತಿ | ಸ್ನಾತಕೋತ್ತರ ವಿಭಾಗ | ಸದಸ್ಯರು |
| ಶ್ರೀಮತಿ ಎನ್. ಭ್ರಮರಾಂಭ | ವಾಣಿಜ್ಯಶಾಸ್ತ್ರ ವಿಭಾಗ | ಸದಸ್ಯರು |

## Minor Research Project

| | | |
|---|---|---|
| ಶ್ರೀಮತಿ ಭ್ರಮರಾಂಭ | ವಾಣಿಜ್ಯಶಾಸ್ತ್ರ ವಿಭಾಗ | ಸಂಚಾಲಕರು |
| ಶ್ರೀಮತಿ ಎಸ್. ಮಮತ | ನಿರ್ವಹಣಾ ವಿಭಾಗ | ಸದಸ್ಯರು |
| ಕು. ಸರಸ್ವತಿ | ಸ್ನಾತಕೋತ್ತರ ವಿಭಾಗ | ಸದಸ್ಯರು |

## ಜಾಲತಾಣ ನಿರ್ವಹಣಾ ಸಮಿತಿ

| | | |
|---|---|---|
| ಶ್ರೀಮತಿ ಗೀತಾ | ಗಣಕಯಂತ್ರ ವಿಭಾಗ | ಸಂಚಾಲಕರು |
| ಶ್ರೀ ಶ್ರೀನಿವಾಸ | ಗ್ರಂಥಾಲಯ ವಿಭಾಗ | ಸದಸ್ಯರು |
| ಕು. ಕೆ.ಎಂ. ರಂಜಿತಾ | ಕಛೇರಿ ಸಿಬ್ಬಂದಿ | ಸದಸ್ಯರು |

## ರೆಡ್ ರಿಬ್ಬನ್ ಕ್ಲಬ್

| | | |
|---|---|---|
| ಶ್ರೀ ಎಂ.ಎಂ. ಬಸವರಾಜು | ಕನ್ನಡ ವಿಭಾಗ | ಸಂಚಾಲಕರು |
| ಕು. ಆರ್.ಪಿ. ಸೌಮ್ಯ | ವಾಣಿಜ್ಯಶಾಸ್ತ್ರ ವಿಭಾಗ | ಸದಸ್ಯರು |
| ಶ್ರೀ ಮಾದೇಶು ಆರ್ | ಕಛೇರಿ ಸಿಬ್ಬಂದಿ | ಸದಸ್ಯರು |

## ಸಂಸ್ಥಾಪಕರ ಜಯಂತಿ ಮಹೋತ್ಸವ ಸಮಿತಿ

| | | |
|---|---|---|
| ಶ್ರೀ ಹೆಚ್.ಜಿ. ನಟರಾಜನ್ | ಇತಿಹಾಸ ವಿಭಾಗ | ಸಂಚಾಲಕರು |
| ಶ್ರೀಮತಿ ಸಿ. ರೂಪಶ್ರೀ | ಕನ್ನಡ ವಿಭಾಗ | ಸದಸ್ಯರು |
| ಶ್ರೀ ಸತೀಶ | ಇತಿಹಾಸ ವಿಭಾಗ | ಸದಸ್ಯರು |
| ಶ್ರೀ ಸುರೇಶ | ವಾಣಿಜ್ಯಶಾಸ್ತ್ರ ವಿಭಾಗ | ಸದಸ್ಯರು |
| ಶ್ರೀ ಪಿ. ಮಹೇಶ | ಅರ್ಥಶಾಸ್ತ್ರ ವಿಭಾಗ | ಸದಸ್ಯರು |
| ಶ್ರೀಮತಿ ಎನ್. ಭ್ರಮರಾಂಭ | ವಾಣಿಜ್ಯಶಾಸ್ತ್ರ ವಿಭಾಗ | ಸದಸ್ಯರು |
| ಶ್ರೀಮತಿ ಎಂ. ನಾಗರತ್ನ | ಕಛೇರಿ ಸಿಬ್ಬಂದಿ | ಸದಸ್ಯರು |
| ಶ್ರೀಮತಿ ಬಿ. ಅನಿತ | ಕಛೇರಿ ಸಿಬ್ಬಂದಿ | ಸದಸ್ಯರು |

## ರಾಷ್ಟ್ರೀಯ ಸೇವಾ ಯೋಜನಾ ಸಮಿತಿ

| | | |
|---|---|---|
| ಶ್ರೀಮತಿ ಎ.ಎಸ್. ಸ್ಮಿತಾ | ಭೂಗೋಳಶಾಸ್ತ್ರ ವಿಭಾಗ | ಸಂಚಾಲಕರು |
| ಶ್ರೀ ಎಂ. ಬಸವರಾಜು | ಕನ್ನಡ ವಿಭಾಗ | ಸದಸ್ಯರು |

| | | |
|---|---|---|
| ಶ್ರೀಮತಿ ಕೆ.ಆರ್. ಉಮಾದೇವಿ | ದೈಹಿಕ ಶಿಕ್ಷಣ ನಿರ್ದೇಶಕರು | ಸದಸ್ಯರು |
| ಶ್ರೀ ಬಸವದತ್ತ ಮಹದೇವಪ್ರಸಾದ್ | ವಾಣಿಜ್ಯಶಾಸ್ತ್ರ ವಿಭಾಗ | ಸದಸ್ಯರು |
| ಕು. ಕೆ.ಎಂ. ರಂಜಿತಾ | ಕಛೇರಿ ಸಿಬ್ಬಂದಿ | ಸದಸ್ಯರು |
| ಶ್ರೀ ಮಹದೇವಸ್ವಾಮಿ | ಕಛೇರಿ ಸಿಬ್ಬಂದಿ | ಸದಸ್ಯರು |

## ಕ್ರೀಡಾ ವೇದಿಕೆ

| | | |
|---|---|---|
| ಶ್ರೀಮತಿ ಕೆ.ಆರ್. ಉಮಾದೇವಿ | ದೈಹಿಕ ಶಿಕ್ಷಣ ನಿರ್ದೇಶಕರು | ಸಂಚಾಲಕರು |
| ಶ್ರೀ ಬಿ. ಮಂಜುನಾಥ | ಭೂಗೋಳಶಾಸ್ತ್ರ ವಿಭಾಗ | ಸದಸ್ಯರು |
| ಶ್ರೀ ಪಿ. ಮಹೇಶ | ಅರ್ಥಶಾಸ್ತ್ರ ವಿಭಾಗ | ಸದಸ್ಯರು |
| ಶ್ರೀ ಬಸವದತ್ತ ಮಹದೇವಪ್ರಸಾದ್ | ವಾಣಿಜ್ಯಶಾಸ್ತ್ರ ವಿಭಾಗ | ಸದಸ್ಯರು |
| ಶ್ರೀ ಆರ್. ಮಾದೇಶು | ಕಛೇರಿ ಸಿಬ್ಬಂದಿ | ಸದಸ್ಯರು |
| ಶ್ರೀಮತಿ ಪಿ. ಮಧುಶಾಲಿನಿ | ಕಛೇರಿ ಸಿಬ್ಬಂದಿ | ಸದಸ್ಯರು |
| ಶ್ರೀಮತಿ ಬಿ. ಅನಿತ | ಕಛೇರಿ ಸಿಬ್ಬಂದಿ | ಸದಸ್ಯರು |

## ಸಾಂಸ್ಕೃತಿಕ ವೇದಿಕೆ

| | | |
|---|---|---|
| ಕು. ಆರ್.ಪಿ. ಸೌಮ್ಯ | ವಾಣಿಜ್ಯಶಾಸ್ತ್ರ ವಿಭಾಗ | ಸಂಚಾಲಕರು |
| ಶ್ರೀಮತಿ ವಾಣಿ ಎನ್ | ನಿರ್ವಹಣಾ ವಿಭಾಗ | ಸದಸ್ಯರು |
| ಶ್ರೀಮತಿ ಪುಟ್ಟಮ್ಮ | ಅರ್ಥಶಾಸ್ತ್ರ ವಿಭಾಗ | ಸದಸ್ಯರು |
| ಶ್ರೀ ನಟರಾಜು | ಕನ್ನಡ ವಿಭಾಗ | ಸದಸ್ಯರು |
| ಶ್ರೀ ಶಾಂತಮೂರ್ತಿ ಎಂ | ಕಛೇರಿ ಸಿಬ್ಬಂದಿ | ಸದಸ್ಯರು |
| ಶ್ರೀಮತಿ ನಾಗರತ್ನ ಎಂ | ಕಛೇರಿ ಸಿಬ್ಬಂದಿ | ಸದಸ್ಯರು |

## ಸಂಚಿಕೆ ಸಮಿತಿ

| | | |
|---|---|---|
| ಶ್ರೀಮತಿ ರೂಪಶ್ರೀ .ಸಿ | ಕನ್ನಡ ವಿಭಾಗ | ಸಂಪಾದಕರು |
| ಶ್ರೀ ಬಸವರಾಜು ಎಂ | ಕನ್ನಡ ವಿಭಾಗ | ಸದಸ್ಯರು |
| ಶ್ರೀ ಎ.ಪಿ. ಮಹದೇವಪ್ಪ | ಆಂಗ್ಲಬಾಷಾ ವಿಭಾಗ | ಸದಸ್ಯರು |
| ಶ್ರೀ ಬಸವದತ್ತ ಮಹದೇವಪ್ರಸಾದ್ | ವಾಣಿಜ್ಯಶಾಸ್ತ್ರ ವಿಭಾಗ | ಸದಸ್ಯರು |
| ಶ್ರೀ ಮಹೇಶ್ ಪಿ | ಅರ್ಥಶಾಸ್ತ್ರ ವಿಭಾಗ | ಸದಸ್ಯರು |
| ಶ್ರೀ ನಟರಾಜು | ಕನ್ನಡ ವಿಭಾಗ | ಸದಸ್ಯರು |

## ಹಿರಿಯ ವಿದ್ಯಾರ್ಥಿನಿಯರ ವೇದಿಕೆ

| | | |
|---|---|---|
| ಶ್ರೀಮತಿ ಭ್ರಮರಾಂಭ ಎಸ್ | ವಾಣಿಜ್ಯಶಾಸ್ತ್ರ ವಿಭಾಗ | ಸಂಚಾಲಕರು |
| ಶ್ರೀಮತಿ ವಾಣಿ ಎನ್ | ನಿರ್ವಹಣಾ ವಿಭಾಗ | ಸದಸ್ಯರು |
| ಶ್ರೀಮತಿ ಮಮತ ಎಸ್ | ನಿರ್ವಹಣಾ ವಿಭಾಗ | ಸದಸ್ಯರು |
| ಶ್ರೀಮತಿ ಎ.ಎಸ್. ಸ್ಮಿತಾ | ಭೂಗೋಳಶಾಸ್ತ್ರ ವಿಭಾಗ | ಸದಸ್ಯರು |
| ಶ್ರೀಮತಿ ನಾಗರತ್ನ ಎಂ | ಕಛೇರಿ ಸಿಬ್ಬಂದಿ | ಸದಸ್ಯರು |
| ಶ್ರೀಮತಿ ಮಧುಶಾಲಿನಿ ಪಿ | ಕಛೇರಿ ಸಿಬ್ಬಂದಿ | ಸದಸ್ಯರು |

## ಸಿಬ್ಬಂದಿಗಳ ಹಿತರಕ್ಷಣಾ ಸಮಿತಿ

| | | |
|---|---|---|
| ಶ್ರೀ ಬಿ ಸೋಮಣ್ಣ | ಅರ್ಥಶಾಸ್ತ್ರ ವಿಭಾಗ | ಸಂಚಾಲಕರು |
| ಶ್ರೀ ಎಂ.ಎಂ. ಮೋಹನ | ರಾಜ್ಯಶಾಸ್ತ್ರ ವಿಭಾಗ | ಸದಸ್ಯರು |
| ಶ್ರೀಮತಿ ಮಮತ ಎಸ್ | ನಿರ್ವಹಣಾ ವಿಭಾಗ | ಸದಸ್ಯರು |
| ಕು. ಆರ್ ಪಿ ಸೌಮ್ಯ | ವಾಣಿಜ್ಯಶಾಸ್ತ್ರ ವಿಭಾಗ | ಸದಸ್ಯರು |

## ಪರಿಹಾರ ಬೋಧನಾ ತರಗತಿಗಳ ಸಮಿತಿ

| | | |
|---|---|---|
| ಶ್ರೀ ಎಂ.ಎಂ ಮೋಹನ | ರಾಜ್ಯಶಾಸ್ತ್ರ ವಿಭಾಗ | ಸಂಚಾಲಕರು |
| ಶ್ರೀಮತಿ ಪುಟ್ಟಮ್ಮ | ಅರ್ಥಶಾಸ್ತ್ರ ವಿಭಾಗ | ಸದಸ್ಯರು |
| ಶ್ರೀಮತಿ ಅನಿತ ಬಿ | ಕಛೇರಿ ಸಿಬ್ಬಂದಿ | ಸದಸ್ಯರು |

## ವರದಿ ಸಮಿತಿ

| | | |
|---|---|---|
| ಶ್ರೀಮತಿ ಮಮತ ಎಸ್ | ನಿರ್ವಹಣಾ ವಿಭಾಗ | ಸಂಚಾಲಕರು |
| ಶ್ರೀಮತಿ ಗೀತಾ ವಿ | ಗಣಕಯಂತ್ರ ವಿಭಾಗ | ಸದಸ್ಯರು |
| ಶ್ರೀಮತಿ ನಾಗರತ್ನ ಎಂ | ಕಛೇರಿ ಸಿಬ್ಬಂದಿ | ಸದಸ್ಯರು |
| ಶ್ರೀ ಮಹದೇವಸ್ವಾಮಿ ಜಿ | ಕಛೇರಿ ಸಿಬ್ಬಂದಿ | ಸದಸ್ಯರು |

## ಅಧ್ಯಾಪಕ – ಪೋಷಕರ ಸಮಿತಿ

| | | |
|---|---|---|
| ಶ್ರೀ ಸುರೇಶ | ವಾಣಿಜ್ಯಶಾಸ್ತ್ರ ವಿಭಾಗ | ಸಂಚಾಲಕರು |
| ಶ್ರೀಮತಿ ವಾಣಿ ಎನ್ | ನಿರ್ವಹಣಾ ವಿಭಾಗ | ಸದಸ್ಯರು |
| ಶ್ರೀಮತಿ ಪಿ. ಮಧುಶಾಲಿನಿ | ಕಛೇರಿ ಸಿಬ್ಬಂದಿ | ಸದಸ್ಯರು |

## ರಾಷ್ಟ್ರೀಯ ಹಬ್ಬಗಳ ಸಮಿತಿ

| | | |
|---|---|---|
| ಶ್ರೀ ಬಿ. ಸೋಮಣ್ಣ | ಅರ್ಥಶಾಸ್ತ್ರ ವಿಭಾಗ | ಸಂಚಾಲಕರು |
| ಶ್ರೀಮತಿ ಎನ್. ವಾಣಿ | ನಿರ್ವಹಣಾ ವಿಭಾಗ | ಸದಸ್ಯರು |
| ಶ್ರೀಮತಿ ಎಸ್. ಮಮತ | ನಿರ್ವಹಣಾ ವಿಭಾಗ | ಸದಸ್ಯರು |
| ಶ್ರೀ ಬಸವದತ್ತ ಮಹದೇವಪ್ರಸಾದ್ | ವಾಣಿಜ್ಯಶಾಸ್ತ್ರ ವಿಭಾಗ | ಸದಸ್ಯರು |
| ಕು. ತೇಜಸ್ವಿನಿ | ವಾಣಿಜ್ಯಶಾಸ್ತ್ರ ವಿಭಾಗ | ಸದಸ್ಯರು |

## ಗ್ರಂಥಾಲಯ ಸಮಿತಿ

| | | |
|---|---|---|
| ಶ್ರೀ ಶ್ರೀನಿವಾಸ | ಗ್ರಂಥಾಲಯ ವಿಭಾಗ | ಸಂಚಾಲಕರು |
| ಶ್ರೀ ಬಿ ಸೋಮಣ್ಣ | ಅರ್ಥಶಾಸ್ತ್ರ ವಿಭಾಗ | ಸದಸ್ಯರು |
| ಶ್ರೀ ಎಂ.ಎಂ. ಮೋಹನ | ರಾಜ್ಯಶಾಸ್ತ್ರ ವಿಭಾಗ | ಸದಸ್ಯರು |
| ಶ್ರೀ ಎ.ಪಿ. ಮಹದೇವಪ್ಪ | ಆಂಗ್ಲಭಾಷಾ ವಿಭಾಗ | ಸದಸ್ಯರು |
| ಶ್ರೀ ಬಸವರಾಜು ಎಂ | ಕನ್ನಡ ವಿಭಾಗ | ಸದಸ್ಯರು |
| ಶ್ರೀ ಹೆಚ್.ಜಿ. ನಟರಾಜನ್ | ಇತಿಹಾಸ ವಿಭಾಗ | ಸದಸ್ಯರು |
| ಡಾ. ಎಂ ಪ್ರಭು | ವಾಣಿಜ್ಯಶಾಸ್ತ್ರ ವಿಭಾಗ | ಸದಸ್ಯರು |
| ಶ್ರೀಮತಿ ಮಮತ ಎಸ್ | ನಿರ್ವಹಣಾ ವಿಭಾಗ | ಸದಸ್ಯರು |
| ಶ್ರೀಮತಿ ಎ.ಎಸ್. ಸ್ಮಿತಾ | ಭೂಗೋಳಶಾಸ್ತ್ರ ವಿಭಾಗ | ಸದಸ್ಯರು |
| ಶ್ರೀಮತಿ ಗೀತಾ ವಿ | ಗಣಕಯಂತ್ರ ವಿಭಾಗ | ಸದಸ್ಯರು |

## ವಸತಿನಿಲಯದ ಉಸ್ತುವಾರಿ ಸಮಿತಿ

| | | |
|---|---|---|
| ಶ್ರೀಮತಿ ಎನ್ ಭ್ರಮರಾಂಭ | ವಾಣಿಜಜ್ಯಶಾಸ್ತ್ರ ವಿಭಾಗ | ಸಂಚಾಲಕರು |
| ಶ್ರೀಮತಿ ವಾಣಿ ಎನ್ | ನಿರ್ವಹಣಾ ವಿಭಾಗ | ಸದಸ್ಯರು |
| ಶ್ರೀಮತಿ ಮಮತ ಎಸ್ | ನಿರ್ವಹಣಾ ವಿಭಾಗ | ಸದಸ್ಯರು |
| ಶ್ರೀಮತಿ ಕೆ.ಆರ್. ಉಮಾದೇವಿ | ದೈಹಿಕ ಶಿಕ್ಷಣ ನಿರ್ದೇಶಕರು | ಸದಸ್ಯರು |
| ಶ್ರೀಮತಿ ರೂಪಶ್ರೀ | ಕನ್ನಡ ವಿಭಾಗ | ಸದಸ್ಯರು |

ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ
ಜೆಎಸ್ಎಸ್ ಮಹಿಳಾ ಕಾಲೇಜು
ಕೊಳ್ಳೇಗಾಲ-571440

## ರಾಜ್ಯ/ರಾಷ್ಟ್ರೀಯ/ಅಂತರಾಷ್ಟ್ರೀಯ ಮಟ್ಟದ ಸಮ್ಮೇಳನ/ವಿಚಾರ ಸಂಕಿರಣ/ಕಾರ್ಯಗಾರಗಳಲ್ಲಿ ಭಾಗವಹಿಸಿರುವ ಅಧ್ಯಾಪಕರುಗಳ ವಿವರ

| ಕ್ರಮ ಸಂಖ್ಯೆ | ಹೆಸರು ಮತ್ತು ವಿಭಾಗ ಶ್ರೀಮತಿ : ಶ್ರೀ | ಸಮ್ಮೇಳನ / ವಿಚಾರ ಸಂಕಿರಣ / ಕಾರ್ಯಗಾರದ ಹೆಸರು | ಸ್ಥಳ | ದಿನಾಂಕ |
|---|---|---|---|---|
| 01. | ಎಂ ಬಸವರಾಜು ಕನ್ನಡ ವಿಭಾಗ | ಪುನಶ್ಚೇತನ ಶಿಬಿರ | ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ , ಮಾನಸ ಗಂಗೋತ್ರಿ ಮೈಸೂರು | 28-07-2016 ರಿಂದ 17-08-2016 |
| 02 | ಪಿ ಮಹೇಶ್ ಅರ್ಥಶಾಸ್ತ್ರ ವಿಭಾಗ | Panel Date Econometrics' | ಅರ್ಥಶಾಸ್ತ್ರ ಅಧ್ಯಯನ ವಿಭಾಗ ಮಾನಸ ಗಂಗೋತ್ರಿ, ಮೈಸೂರು | 12-08-2016 |
| 03 | ಬಿ. ಮಂಜುನಾಥ ಭೂಗೋಳಶಾಸ್ತ್ರ ವಿಭಾಗ | Advanced GIS and Remote sesing Applications | ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ , ಮೈಸೂರು | 26-08-2016 ರಿಂದ 28-08-2016 |
| 04 | ಎ ಎಸ್ ಸ್ಮಿತ ಭೂಗೋಳಶಾಸ್ತ್ರ ವಿಭಾಗ | Social Harmony National Unity and Human Rights | ರಾಜೀವ್‌ಗಾಂಧಿ ರಾಷ್ಟ್ರೀಯ ಯುವ ಅಭಿವೃದ್ಧಿ ಸಂಸ್ಥೆ, ಚೆನ್ನೈ | 08-09-2016 ರಿಂದ 12-09-2016 |
| 05 | ಎ ಪಿ ಮಹದೇವಪ್ಪ ಆಂಗ್ಲಭಾಷಾ ವಿಭಾಗ | Teaching of English Theory and Practice | ಹಿಂದೂಸ್ಥಾನ ಪ್ರಥಮ ದರ್ಜೆ ಕಾಲೇಜು, ಮೈಸೂರು. | 27-09-2016 |
| 06 | ಎಂ ಭ್ರಮರಾಂಭ ವಾಣಿಜ್ಯಶಾಸ್ತ್ರ ವಿಭಾಗ | Creating Conductive Learning Environment | ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ ಮಾನಸ ಗಂಗೋತ್ರಿ, ಮೈಸೂರು | 01-10-2016 |
| 07 | ಪಿ ಮಹೇಶ ಅರ್ಥಶಾಸ್ತ್ರ ವಿಭಾಗ | Counseling Training Programme for Degree College Lectures | ಕೌನ್ಸಲಿಂಗ್ ಸೆಂಟರ್ ಜೆಎಸ್ಎಸ್ ವೈದ್ಯಕೀಯ ಕಾಲೇಜು ಆಸ್ಪತ್ರೆ ಮೈಸೂರು | 28-10-2016 ರಿಂದ 29-10-2016 |
| 08 | ಎಂ ಭ್ರಮರಾಂಭ ವಾಣಿಜ್ಯಶಾಸ್ತ್ರ ವಿಭಾಗ | Counseling Training Programme for Degree College Lectures | ಕೌನ್ಸಲಿಂಗ್ ಸೆಂಟರ್ ಜೆಎಸ್ಎಸ್ ವೈದ್ಯಕೀಯ ಕಾಲೇಜು ಆಸ್ಪತ್ರೆ, ಮೈಸೂರು | 28 & 29 ಅಕ್ಟೋಬರ್ 2016 |

| | | | | |
|---|---|---|---|---|
| 09 | ಉಮೇಶ<br>ಪ್ರಾಂಶುಪಾಲರು | Employment and Professional Information and Guidance and pre examination training | ಮಹಾರಾಜ ಕಾಲೇಜು<br>ಶತಮಾನೋತ್ಸವ ಭವನ,<br>ಮೈಸೂರು | 23-11-2016 |
| 10 | ಉಮೇಶ<br>ಪ್ರಾಂಶುಪಾಲರು | Quality Enhancement is Higher Education - Issues and Challenges | ಮಹಾರಾಜ ಕಾಲೇಜು<br>ಶತಮಾನೋತ್ಸವ ಭವನ,<br>ಮೈಸೂರು | 01-12-2016 |
| 11 | ಪಿ ಮಹೇಶ್<br>ಅರ್ಥಶಾಸ್ತ್ರ ವಿಭಾಗ | Quality Enhancement is Higher Education - Issues and Challenges | ಮಹಾರಾಜ ಕಾಲೇಜು<br>ಶತಮಾನೋತ್ಸವ ಭವನ,<br>ಮೈಸೂರು | 01-12-2016 |
| 12 | ಬಿ ಮಂಜುನಾಥ್<br>ಭೂಗೋಳಶಾಸ್ತ್ರ<br>ವಿಭಾಗ | Quality Enhancement is Higher Education - Issues and Challenges | ಮಹಾರಾಜ ಕಾಲೇಜು<br>ಶತಮಾನೋತ್ಸವ ಭವನ,<br>ಮೈಸೂರು | 01-12-2016 |
| 13 | ಹೆಚ್ ಎಸ್ ಸುಮ<br>ರಾಜ್ಯಶಾಸ್ತ್ರ ವಿಭಾಗ | Women Empowerment | ರಾಜ್ಯಶಾಸ್ತ್ರ ವಿಭಾಗ<br>ಸರ್ಕಾರಿ ಪ್ರಥಮ ದರ್ಜೆ<br>ಕಾಲೇಜು, ಟಿ. ನರಸೀಪುರ | 21-01-2017 |
| 14 | ಡಾ. ಎಂ ಪ್ರಭು<br>ವಾಣಿಜ್ಯಶಾಸ್ತ್ರ ವಿಭಾಗ | Goods and Service Tax | ವಾಣಿಜ್ಯಶಾಸ್ತ್ರ ಅಧ್ಯಯ;ನ<br>ವಿಭಾಗ<br>ಮಾನಸ ಗಂಗೋತ್ರಿ, ಮೈಸೂರು | 08-02-2017 |
| 15 | ಎನ್ ವಾಣಿ<br>ವ್ಯವಹಾರ ನಿರ್ವಹಣ<br>ವಿಭಾಗ | Goods and Service Tax | ವಾಣಿಜ್ಯಶಾಸ್ತ್ರ ಅಧ್ಯಯ;ನ<br>ವಿಭಾಗ<br>ಮಾನಸ ಗಂಗೋತ್ರಿ, ಮೈಸೂರು | 08-02-2017 |
| 16 | ಸುರೇಶ್<br>ವಾಣಿಜ್ಯಶಾಸ್ತ್ರ ವಿಭಾಗ | Goods and Service Tax | ವಾಣಿಜ್ಯಶಾಸ್ತ್ರ ಅಧ್ಯಯ;ನ<br>ವಿಭಾಗ<br>ಮಾನಸ ಗಂಗೋತ್ರಿ, ಮೈಸೂರು | 08-02-2017 |




## ಪ್ರೊ. ಉಮೇಶ
ಪ್ರಾಂಶುಪಾಲರು



## ಡಾ. ಎಂ. ಪ್ರಭು
ಮುಖ್ಯಸ್ಥರು, ವಾಣಿಜ್ಯ ಶಾಸ್ತ್ರ ಸ್ನಾತಕೋತ್ತರ ಅಧ್ಯಯನ ವಿಭಾಗ

## ಬೋಧನಾಂಗ ಮತ್ತು ಕಾರ್ಯಾಂಗ



ಬೋಧನ ವಿಭಾಗ



ಬೋಧಕೇತರ ವಿಭಾಗ



ಸ್ನಾತಕೋತ್ತರ ಬೋಧನ ವಿಭಾಗ



ಅಂತಿಮ ಬಿ.ಎ. ಐಚ್ಛಿಕ ಕನ್ನಡ ವಿಭಾಗದ ವಿದ್ಯಾರ್ಥಿನಿಯರು



ಅಂತಿಮ ಬಿ.ಎ. ರಾಜ್ಯಶಾಸ್ತ್ರ ವಿಭಾಗದ ವಿದ್ಯಾರ್ಥಿನಿಯರು



ಅಂತಿಮ ಬಿ.ಎ. ಭೂಗೋಳಶಾಸ್ತ್ರ ವಿಭಾಗದ ವಿದ್ಯಾರ್ಥಿನಿಯರು



ಅಂತಿಮ ಬಿ.ಕಾಂ ವಿದ್ಯಾರ್ಥಿನಿಯರು



ಅಂತಿಮ ಬಿ.ಬಿ.ಎಂ ವಿದ್ಯಾರ್ಥಿನಿಯರು



ಅಂತಿಮ ಎಂ.ಕಾಂ ವಿದ್ಯಾರ್ಥಿನಿಯರು

## ಸಾಂಸ್ಕೃತಿಕ ವೇದಿಕೆ ತರಗತಿ ಪ್ರತಿನಿಧಿಗಳು



**ನಾಗಮಣಿ ಇ.**
ಪ್ರಥಮ ಬಿ.ಎ. (ಹೆಚ್.ಇ.ಕೆ)



**ದಿವ್ಯ ಜೆ.**
ದ್ವಿತೀಯ ಬಿ.ಎ. (ಹೆಚ್.ಇ.ಕೆ)



**ಗೀತಾಂಜಲಿ ಇ.**
ತೃತೀಯ ಬಿ.ಎ. (ಹೆಚ್.ಇ.ಕೆ)



**ದೀಪಿಕಾ ಬಿ.**
ಪ್ರಥಮ ಬಿ.ಕಾಂ



**ಚಾಂದಿನಿ ಕೆ.**
ದ್ವಿತೀಯ ಬಿ.ಕಾಂ



**ಪೂಜಾ ಎಂ.**
ತೃತೀಯ ಬಿ.ಕಾಂ



**ಹರ್ಷಿತ ಆರ್.**
ಪ್ರಥಮ ಬಿ.ಬಿ.ಎ



**ಬಿಂದುಶ್ರೀ ಕೆ.**
ದ್ವಿತೀಯ ಬಿ.ಬಿ.ಎಂ



**ಸುಪ್ರಿತ ಎಸ್.**
ತೃತೀಯ ಬಿ.ಬಿ.ಎಂ

## ಕ್ರೀಡಾ ವೇದಿಕೆ ತರಗತಿ ಪ್ರತಿನಿಧಿಗಳು



**ರಾಜೇಶ್ವರಿ ಬಿ.**
ಪ್ರಥಮ ಬಿ.ಎ. (ಹೆಚ್.ಇ.ಪಿ)



**ಅಂಜು ಎಸ್.**
ದ್ವಿತೀಯ ಬಿ.ಎ. (ಹೆಚ್.ಇ.ಜಿ)



**ರಮ್ಯ ಪಿ.**
ತೃತೀಯ ಬಿ.ಎ. (ಹೆಚ್.ಇ.ಪಿ)



**ವಾಸಂತಿ ವಿ.**
ಪ್ರಥಮ ಬಿ.ಕಾಂ



**ಮೇಘ ಎಂ.**
ದ್ವಿತೀಯ ಬಿ.ಕಾಂ



**ಅಂಬಿಕ ಎಸ್.**
ತೃತೀಯ ಬಿ.ಕಾಂ



**ಮಾಲಾಶ್ರೀ ಎಸ್.**
ಪ್ರಥಮ ಬಿ.ಬಿ.ಎ



**ಸುಕನ್ಯ ಪಿ.**
ದ್ವಿತೀಯ ಬಿ.ಬಿ.ಎಂ



**ಮೇಘನಾ ವಿ.**
ತೃತೀಯ ಬಿ.ಬಿ.ಎಂ

## ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜನ್ಮಶತಮಾನೋತ್ಸವದ ಅಂಗವಾಗಿ ನಡೆದ ಕಾರ್ಯಕ್ರಮಗಳು



ಅಂತರ ಕಾಲೇಜು ಸಾಂಸ್ಕೃತಿಕ ಹಾಗೂ ಕ್ರೀಡಾಕೂಟದ ಉದ್ಘಾಟನಾ ಭಾಷಣ ಪ್ರೊ. ಎಂ.ಎಂ. ಮೋಹನ್‌ರವರಿಂದ



ಲಯನ್ಸ್ ಮತ್ತು ಲಯನೆಸ್ ಸಂಸ್ಥೆಗಳ ಆಶ್ರಯದೊಂದಿಗೆ ಉಚಿತ ಆರೋಗ್ಯ ತಪಾಸಣ ಕಾರ್ಯಕ್ರಮವನ್ನು ಡಾ. ಶಿವರುದ್ರಸ್ವಾಮಿಯವರು ಉದ್ಘಾಟಿಸುತ್ತಿರುವುದು



ಪಟ್ಟಣದ ಸರ್ಕಾರಿ ಆಸ್ಪತ್ರೆ ರೋಗಿಗಳಿಗೆ ಹಣ್ಣು ಹಂಪಲು ವಿತರಣೆ



'ದಿವ್ಯಚೇತನ' ನಾಟಕದ ದೃಶ್ಯ



ಚಾರ್ಟರ್ಡ್ ಅಕೌಂಟೆಂಟ್ ಶ್ರೀ ಕೇಶವ ಡೊಂಗ್ರೆರವರಿಂದ ವಿಶೇಷ ಉಪನ್ಯಾಸ



ಕೊಳ್ಳೇಗಾಲ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಶ್ರೀಮತಿ ಎನ್.ಬಿ. ಜಯಲಕ್ಷ್ಮಿ ಇವರಿಂದ ಆ್ಯಂಟಿ ರ್‍ಯಾಗಿಂಗ್ ಸಮಿತಿ ವತಿಯಿಂದ ಆಯೋಜಿಸಿದ್ದ ವಿಶೇಷ ಉಪನ್ಯಾಸ




ಜಿಲ್ಲಾ ಗ್ರಾಹಕರ ವೇದಿಕೆಯ ಸದಸ್ಯರಾದ ಶ್ರೀಮತಿ ಗೌರಮ್ಮಣ್ಣಿ ಇವರಿಂದ ಮಹಿಳಾ ದೌರ್ಜನ್ಯ ನಿವಾರಣ ಸಮಿತಿ ವತಿಯಿಂದ ನಡೆದ ವಿಶೇಷ ಉಪನ್ಯಾಸ




ಶ್ರೀ ಹ.ಬ. ತಮ್ಮೇಗೌಡ ಇವರಿಂದ ದ.ರಾ. ಬೇಂದ್ರೆಯವರ 121ನೇ ಜನ್ಮದಿನದ ಪ್ರಯುಕ್ತ ವಿಶೇಷ ಉಪನ್ಯಾಸ

## ವಿಶೇಷ ಉಪನ್ಯಾಸ ಹಾಗೂ ರಾಷ್ಟ್ರೀಯ ಯುವ ಸಪ್ತಾಹ ಕಾರ್ಯಕ್ರಮ



ಛತ್ರಪತಿ ಶಿವಾಜಿಯವರ 391ನೇ ಜನ್ಮದಿನಾಚರಣೆಯ ಅಂಗವಾಗಿ ಶ್ರೀ ಹೆಚ್.ಎಂ. ಬಸವರಾಜು ಇವರಿಂದ ವಿಶೇಷ ಉಪನ್ಯಾಸ

ರಾಷ್ಟ್ರೀಯ ಮತದಾರರ ದಿನಾಚರಣೆಯ ಅಂಗವಾಗಿ ಶ್ರೀ ಶಿವಕುಮಾರ್ ಇವರಿಂದ ವಿಶೇಷ ಉಪನ್ಯಾಸ





ಶ್ರೀ ಮಹದೇಶ್ವರ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಪುಟ್ಟಲಿಂಗಯ್ಯ ಇವರಿಂದ ರಾಷ್ಟ್ರೀಯ ಯುವ ಸಪ್ತಾಹದ ಸಮಾರೋಪ ಭಾಷಣ

ರಾಷ್ಟ್ರೀಯ ಯುವ ಸಪ್ತಾಹದ ಅಂಗವಾಗಿ ಕಾಲೇಜಿನ ವಿದ್ಯಾರ್ಥಿನಿಯರು ಹಾಗೂ ಅಧ್ಯಾಪಕ ವರ್ಗದವರಿಂದ 'ಜಾಗೃತಿ ಜಾಥಾ'



# ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ನಿವೃತ್ತರಿಗೆ ಸನ್ಮಾನ



ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ಅಂತರ ಕಾಲೇಜು ಪ್ರಬಂಧ ಮತ್ತು ಚರ್ಚಾಸ್ಪರ್ಧೆಗಳನ್ನು ಕಾಲೇಜಿನ ಹಿರಿಯ ವಿದ್ಯಾರ್ಥಿನಿಯರಾದ ಶ್ರೀಮತಿ ವಿಜಯಲಕ್ಷ್ಮಿ ಮತ್ತು ಶ್ರೀಮತಿ ಅನುಪಮರವರು ಉದ್ಘಾಟಿಸುತ್ತಿರುವುದು



ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಕಾಲೇಜಿನ ಪ್ರತಿಭಾನ್ವಿತ ಹಿರಿಯ ವಿದ್ಯಾರ್ಥಿನಿಯರಿಗೆ ಸನ್ಮಾನ



ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಉಚಿತ ಆರೋಗ್ಯ ತಪಾಸಣ ಕಾರ್ಯಕ್ರಮಕ್ಕೆ ಆಗಮಿಸಿದ್ದ ವೈದ್ಯರ ತಂಡ



ವಯೋ ನಿವೃತ್ತಿ ಹೊಂದಿದ ಪ್ರೊ. ಎಂ. ಎಂ. ಮೋಹನ್‌ರವರಿಗೆ ಆತ್ಮಿಯ ಬೀಳ್ಕೊಡುಗೆ

## ಇನ್‌ಫೋಸಿಸ್-ಬಿ.ಪಿ.ಓ. ವತಿಯಿಂದ ನಡೆದ ಕ್ಯಾಂಪಸ್ ಆಯ್ಕೆ ಪ್ರಕ್ರಿಯೆ ಹಾಗೂ ಪೋಷಕರ ಸಭೆ




ಇನ್‌ಫೋಸಿಸ್-ಬಿ.ಪಿ.ಓ. ವತಿಯಿಂದ ನಡೆದ ಆಯ್ಕೆಯ ಉದ್ಘಾಟನಾ ಸಮಾರಂಭದಲ್ಲಿ ಕಂಪನಿಯ ಪ್ರತಿನಿಧಿಗಳು ಹಾಗೂ ಪ್ರಾಂಶುಪಾಲರು



ಆಯ್ಕೆ ಪ್ರಕ್ರಿಯೆಯ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡಿರುವುದು



ಆಯ್ಕೆ ಪ್ರಕ್ರಿಯೆಯಲ್ಲಿ ಅಂತಿಮವಾಗಿ ಆಯ್ಕೆಗೊಂಡ ವಿದ್ಯಾರ್ಥಿ ತಂಡ




ಪೋಷಕರ ಸಭೆಯಲ್ಲಿ ಪ್ರಾಂಶುಪಾಲರು ಮಾತನಾಡುತ್ತಿರುವುದು



ರಾಷ್ಟ್ರೀಯ ಸೇವಾ ಯೋಜನೆ ಚಟುವಟಿಕೆಗಳ ಕಾರ್ಯಕ್ರಮವನ್ನು ಪಟ್ಟಣ ಠಾಣೆಯ ಆರಕ್ಷಕ ನಿರೀಕ್ಷಕರಾದ ಶ್ರೀ ಎನ್. ಆನಂದ್‌ರವರು ಉದ್ಘಾಟಿಸುತ್ತಿರುವುದು




ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ವಾರ್ಷಿಕ ಶಿಬಿರವನ್ನು ಕೊಳ್ಳೇಗಾಲದ ಉಪಾಧೀಕ್ಷಕರಾದ ಶ್ರೀಮತಿ ಪಿ.ವಿ. ಸ್ನೇಹರವರು ಉದ್ಘಾಟಿಸಿ ಮಾತನಾಡುತ್ತಿರುವುದು



ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕಿಯರು



ಕಾಲೇಜಿನ ಹೊರ ಆವರಣದ ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕಿಯರು



ಇತಿಹಾಸ ಸಹಾಯಕ ಪ್ರಾಧ್ಯಾಪಕರಾದ
ಹೆಚ್.ಜಿ. ನಟರಾಜನ್‌ರವರಿಂದ
ಸ್ವಾತಂತ್ರ್ಯ ದಿನಾಚರಣೆಯ ಸಂದೇಶ



ಗ್ರಂಥಾಲಯ ಮತ್ತು
ಮಾಹಿತಿ ಕೇಂದ್ರ



ಗಣಕ ಯಂತ್ರ
ಪ್ರಯೋಗಾಲಯ



ವ್ಯಾಯಾಮ ಕೊಠಡಿಯಲ್ಲಿ
ವಿದ್ಯಾರ್ಥಿನಿಯರು



ಅಂತರ ಪದವಿ ಕ್ರೀಡಾಕೂಟದ ಉದ್ಘಾಟನಾ ಭಾಷಣ: ಸರ್ಕಾರಿ ಶ್ರೀ ಮಹದೇಶ್ವರ ಪ್ರಥಮ ದರ್ಜೆ ಕಾಲೇಜಿನ ದೈಹಿಕ ನಿರ್ದೇಶಕರಾದ ಶ್ರೀ ಸಿ. ಮೋಸಸ್‌ರವರಿಂದ



ಮೈಸೂರು ವಿಶ್ವವಿದ್ಯಾನಿಲಯ ಚಾಮರಾಜವಲಯ ಮಟ್ಟದ ಮಹಿಳಾ ಕ್ರೀಡಾಕೂಟದ ವಾಲಿಬಾಲ್ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮಸ್ಥಾನ ಪಡೆದು ಅಂತರ ವಲಯ ಮಟ್ಟಕ್ಕೆ ಆಯ್ಕೆಗೊಂಡ ವಿದ್ಯಾರ್ಥಿನಿಯರು



ವಾರ್ಷಿಕ ಕ್ರೀಡಾಕೂಟವನ್ನು ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಉಮೇಶ್‌ರವರು ಉದ್ಘಾಟಿಸುತ್ತಿರುವುದು



ವಾರ್ಷಿಕ ಕ್ರೀಡಾಕೂಟ ಸ್ಪರ್ಧೆಯಲ್ಲಿ ಪಾಲ್ಗೊಂಡ ವಿದ್ಯಾರ್ಥಿನಿಯರು

# ಕನ್ನಡ ವಿಭಾಗ



## ಪುಟ ತೆರೆದು ನೋಡಿ


| | | | |
|---|---|---|---|
| 1 | ಶಿಕ್ಷಣ | ಪೂಜಾ ಎಂ. | 1 |
| 2 | ಆಸೆಯ ಕಿರು ನೋಟ | ಚೈತ್ರ ಎಂ. | 2 |
| 3 | ಪರನಿಂದೆಯ ಫಲ | ಪೂಜಾ ಎಂ. | 3 |
| 4 | 21ರ ಮಗಳಿಗೆ ಅಪ್ಪಕೊಟ್ಟ ಜ್ಞಾನದೀಕ್ಷೆ! | ಮೇಘನಾ . | 4 |
| 5 | ಹೆತ್ತ ತಾಯಿ ಹೊತ್ತ ನಾಡು | ಅಶ್ವಿನಿ ಎಸ್. | 6 |
| 6 | ಬದುಕು–ಸಾವಿನ ನಡುವಿನ ಆಯ್ಕೆ (ಕವನ) | | 7 |
| 7 | ವಿದ್ಯೆಯ ಮಹತ್ವ | ಕಾವ್ಯಶ್ರೀ ಎನ್. | 8 |
| 8 | ಗಣಿತಜ್ಞ ವರಾಹಮಿಹಿರ | ದೀಪು ಎಂ. | 10 |
| 9 | ಭಾಷಣ ಕಲೆ ರೂಢಿಸಿಕೊಳ್ಳಿ | ಅಂಜು ಎಸ್. | 11 |
| 10 | ಸ್ವಾಮಿ ವಿವೇಕಾನಂದ | ರಶ್ಮಿ ಡಿ. | 12 |
| 11 | ಸೆಲ್ಫಿ ಮಾಯೆ | ಗೀತಾಂಜಲಿ | 13 |
| 12 | ಪ್ರಾಮಾಣಿಕತೆಯ ಪ್ರತಿಫಲ | ಹೆಚ್.ಎಂ. ವಾಣಿಶ್ರೀ | 15 |
| 13 | ಆ ಹೂಗಳ ನಗುವಿಗೆ ಕಾರಣ ನೀನೆ? | ವಿನುತ ಎಸ್. | 16 |
| 14 | ಮಾತೃ ಋಣ ತೀರಿಸಲು ಸಾಧ್ಯವೇ? | ಹೆಚ್.ಎಂ. ವಾಣೀಶ್ರೀ | 15 |
| 15 | ಇಚ್ಛಾಶಕ್ತಿ ದೊಡ್ಡದು | ದೀಪದೀಪ ಸಿ. | 20 |
| 16 | ಜೀವನದ ಅರ್ಥ........ | ನೀಲಾಂಬಿಕ ಎಸ್. | 22 |
| 17 | ಬದಲಿಸಿಕೊಳ್ಳೋಣ ನಮ್ಮ ಆಲೋಚನೆಗಳನ್ನ! | ಉಮಾ ಎನ್. | 24 |
| 18 | ಶಾಲೆಯಲ್ಲೇ ಮಗುವಿನ ಸಮಾಜ | ಯಶೋದ ಸಿ. | 25 |
| 19 | ತುಡಿತ – ಮಿಡಿತ | ತೇಜಸ್ವಿನಿ ಎಂ. | 27 |
| 20 | ಹೆಣ್ಣೆಂದರೆ ಹೀಗೇಕೆ | ಕಾವ್ಯ ಎಂ. | 29 |
| 21 | ಅಪ್ಪ ಅಮ್ಮ ಮತ್ತು ಮಕ್ಕಳು | ಮಾಲಾಶ್ರೀ ಹೆಚ್ | 31 |
| 22 | ಮೂರ್ಖತನ ತಂದಿತು ಮರೆಯಲಾರದ ನಗು.... | ಶಿಲ್ಪಶ್ರೀ ಎಂ. | 33 |
| 23 | ಮುತ್ತಿನಂಥಹ ಮಾತು | ಉಮಾ .ಎನ್ | 34 |
| 24 | ಗುರಿ ಸಾಧಿಸುವುದು ಹೇಗೆ | ಅಂಜು ಎಸ್ | 35 |
| 25 | ಮುತ್ತಿನಂಥಹ ಮಾತು | ಶಮರಿನ್ | 36 |
| 26 | ಲಜ್ಜೆ ಎಲ್ಲಿರಬೇಕು | ಸುಸ್ಮಿತ ಎನ್. | 37 |
| 27 | ಬೋಧನೆಯಲ್ಲಿ ಮೌಲ್ಯಗಳ ಮಹತ್ವ | ಟಿ.ಎಂ. ಶಿಲ್ಪ | 38 |
| 28 | ಸೈನಿಕರಿಗೊಂದು ಸಲಾಂ | ಯಮುನ ಎ.ಆರ್. | |
| 29 | ಮನಸ್ಸಿನಂತೆ ಮಹದೇವ | ಸುಚಿತ್ರಾ ಎಂ. | 42 |
| 30 | ಮನುಕುಲಮಾಡುತ್ತಿರುವುದುಇದನ್ನೇ | ನವ್ಯ.ಬಿ | 43 |
| 31 | ಮರೆಯಾಗುತ್ತಿರುವಪಂಚವಾರ್ಷಿಕಯೋಜನೆ | ಅಂಬಿಕಾಎಸ್ | 44 |
| 32 | ಟೀಕೆಗೆ ಹೇಗೆ ಪ್ರತಿಕ್ರಿಯಿಸುವಿರಿ | ದೀಪು ಎಂ. | 46 |
| 33 | ಸಂಸ್ಕಾರ | ದೀಪು ಎಂ. | 47 |
| 34 | ಮದುವೆ | ಪೂಜಾ ಎಂ. | 48 |
| 35 | ಶಿಕ್ಷಕ ಮತ್ತು ಶಿಕ್ಷಣ | ಮೇಘನಾ ಹೆಚ್.ಎಸ್. | 49 |
| 36 | ಕಳ್ಳ ಮತ್ತು ರಾಜಕಾರಣಿ | ಜಯಲಕ್ಷ್ಮಿ . | 50 |



ಪೂಜಾ ಎಂ.
ತೃತೀಯ ಬಿ.ಎ., (ಹೆಚ್‌ಇಜಿ)

# ಶಿಕ್ಷಣ

ಮಾನವ ಹುಟ್ಟುತ್ತಾ ವಿಶ್ವಮಾನವನಾಗುತ್ತಾನೆ. ಆದರೆ ಸಮಾಜ ಆತನನ್ನು ಅಲ್ಪಮಾನವನನ್ನಾಗಿಸುತ್ತದೆ. "ಅಲ್ಪತೆಯನ್ನು ಹೋಗಲಾಡಿಸಿ ವಿಶ್ವ ಮಾನವನನ್ನಾಗಿ ಮಾಡುವುದೇ ಶಿಕ್ಷಣದ ಗುರಿ" ಎಂದು ರಾಷ್ಟ್ರಕವಿ ಕುವೆಂಪುರವರ ಕವಿವಾಣಿಯನ್ನು ಇಂದಿನ ಶಿಕ್ಷಣ ಕ್ಷೇತ್ರ ಹುಸಿಯಾಗಿಸುತ್ತಿದೆ.

ವಿದ್ಯಾ ವಿಹೀನಃ ಪಶುಃ ಎಂಬ ಮಾತಿನಂತೆ ಪುರುಷರಾಗಲಿ, ಸ್ತ್ರೀಯರಾಗಲಿ ವಿದ್ಯೆ ಇಲ್ಲದವನು ಪಶುವಿಗೆ ಸಮಾನನಾಗಿರುತ್ತಾರೆ. ಪಶುವಿಗಿಂತ ಭಿನ್ನವಾದ ಉತ್ತಮವಾದ ಜೀವನನ್ನು ಸಾಧಿಸಬೇಕಾದರೆ ಅದಕ್ಕೆ ಯೋಗ್ಯ ಶಿಕ್ಷಣ ಅವಶ್ಯಕ. ಇಂದಿನ ಶಿಕ್ಷಣ ಪದ್ಧತಿಯಲ್ಲಿ ಶಿಕ್ಷಕರು ಸಂಬಳಕ್ಕಾಗಿ ದುಡಿಯುವ ಯಂತ್ರಗಳಾಗಿ ವಿದ್ಯಾರ್ಥಿಗಳಲ್ಲಿ ಉದಾತ್ತ ಚಿಂತನೆಗಳನ್ನು ಮೂಡಿಸುವಲ್ಲಿ ವಿಫಲರಾಗುತ್ತಿದ್ದಾರೆ. ಪರಿಣಾಮ ವಿದ್ಯಾರ್ಥಿಗಳಲ್ಲಿನ ಸುಪ್ತ ಪ್ರತಿಭೆ ಗುಪ್ತವಾಗಿಯೇ ಉಳಿಯುತ್ತಿದೆ. ಶಿಲ್ಪಿ ಹೇಗೋ ಹಾಗೇ ಅದರ ವಿನ್ಯಾಸ. ಶಿಕ್ಷಿತ ಯುವಕ ಯುವತಿಯರು ನೈತಿಕ ಅಧಃಪತನದ ಹಾದಿ ತುಳಿಯುತ್ತಿದ್ದಾರೆ.

ಕಾಲೇಜು ಮೆಟ್ಟಿಲು ಫ್ಯಾಶನ್ ವೇದಿಕೆಗಳಾಗುತ್ತಿವೆ. ಇಂದಿನ ಉನ್ನತ ಹಂತದ ಶಿಕ್ಷಣಗಳಲ್ಲೂ ಜಾತಿಯತೆಯ ಪಿಡುಗು ತಲೆದೋರಿರುವುದು ದುರಂತವೇ ಸರಿ. ನಿಸ್ವಾರ್ಥ, ಮಾನವೀಯತೆ, ಸಮಾನತೆ, ಬುದ್ಧಿವಂತಿಕೆಗೆ ಬದಲಾಗಿ ವ್ಯಕ್ತಿಯ ಬಾಹ್ಯ ಸೌಂದರ್ಯ, ಜಾತಿ, ಧರ್ಮದ ಮೂಲಕ ಆತನ ವ್ಯಕ್ತಿತ್ವನ್ನು ಅಳೆಯಲಾಗುತ್ತದೆ. ಇಂದಿನ ಶಿಕ್ಷಣ ಕೇವಲ ಉದ್ಯೋಗಸ್ಥರನ್ನು ಸೃಷ್ಟಿಸುವ ಕಾರ್ಖಾನೆಯಾಗುತ್ತಿದೆಯೇ ವಿನಃ ಮನಸ್ಸಿನ ವಿಕೃತಿಯನ್ನು ತಿದ್ದಿ ಆದರ್ಶ ಮೌಲ್ಯಗಳನ್ನು ಬೆಳೆಸುತ್ತಿಲ್ಲ.

"ಸರಳ ಜೀವನ, ಉದಾತ್ತ ಚಿಂತನೆ" ಎಂಬ ಗಾಂಧೀವಾದದ ಪಾಲನೆ ತಿರುಳು ಗಗನ ಕುಸುಮವಾಗಿದೆ. ಗಾಂಧೀಜಿ, ಬಸವಣ್ಣ, ವಿವೇಕಾನಂದರಂತಹ ಆದರ್ಶ ವ್ಯಕ್ತಿಗಳ ಆದರ್ಶ ಪಾಲನೆಯಲ್ಲಿ ದುಷ್ಟ ಸಾಮಾಜಿಕ ಪದ್ಧತಿಗಳ ವಿರುದ್ಧ ಹೋರಾಡುವಲ್ಲಿ ಯುವಜನಾಂಗದ ಹೋರಾಟದ ಶಕ್ತಿಕುಂದುತ್ತಿದೆ. ಇಂದಿನ ಯುವಜನಾಂಗ ಮಹಾನ್ ವ್ಯಕ್ತಿಗಳ ಮೌಲ್ಯ ಚಿಂತನೆಗೆ ಬೆಲೆ ಕೊಡುತ್ತಿಲ್ಲ. ಇದರ ಪರಿಣಾಮವೇ ಸಾಮಾಜಿಕ ಅಪರಾಧಗಳು ಜನಸಂಖ್ಯಾಸ್ಫೋಟ, ಜಾತಿಯತೆ ಸಮಸ್ಯೆಗಳು ಉಲ್ಬಣಗೊಳ್ಳಲು ಕಾರಣ.

ಇತ್ತೀಚಿನ ದಿನಗಳಲ್ಲಿ ಉದ್ಯೋಗದಾಸೆಯಿಂದ ಓದನ್ನು ಸ್ವೀಕರಿಸಲು ಇಚ್ಛಿಸುವವರ ಸಂಖ್ಯೆ ಹೆಚ್ಚುತ್ತಿದ್ದು ಪ್ರಸಿದ್ಧ ಖ್ಯಾತ ವಿಶ್ವವಿದ್ಯಾನಿಲಯಗಳ ಪದವಿಗೆ ಬೆಲೆ ದೊರಕುತ್ತಿಲ್ಲ. ಇದಕ್ಕೆ ಕಾರಣ ಅಲ್ಪಾವಧಿಯ ವಿವಿಧ ಬಗೆಯ ಕೋರ್ಸ್‌ಗಳನ್ನು ಒಳಗೊಂಡ ಕಂಪ್ಯೂಟರ್ ಬಗೆಗಿನ ತರಬೇತಿ ಕೇಂದ್ರಗಳು, ಅದರಲ್ಲೂ ಖಾಸಗಿ ಸಂಸ್ಥೆಗಳ ಸ್ಥಾಪನೆ ಇವು ಸೃಷ್ಟಿಸುವ ಹಲವು ತರಹದ ಉದ್ಯೋಗಗಳಿಂದ ಉನ್ನತಮಟ್ಟದ ನೈಜ ಬೆಲೆ ಸಿಗಲಾರದು ಮತ್ತು ಹೆಚ್ಚಿನ ರೀತಿಯಲ್ಲಿ ಇಂದಿನ ವಿದ್ಯಾರ್ಥಿಗಳು ಯುವಜನಾಂಗ ಪರೀಕ್ಷಾ ದೃಷ್ಟಿ ಯಿಂದ ಯಾಂತ್ರಿಕವಾಗಿ ಓದುವುದನ್ನು ಬಯಸುವು ದರಿಂದ ಅವರಲ್ಲಿ ವೈಚಾರಿಕ ಪ್ರಜ್ಞೆ ಕಡಿಮೆ ಯಾಗುತ್ತಿದೆ. ಶಿಕ್ಷಣ ನಿಜವಾಗಿ ಯುವ ಜನಾಂಗ ದಲ್ಲಿ ಅರಿವು

ಮೂಡಿಸಬೇಕು. ಆ ಮೂಲಕ ಸುಂದರ, ನಿರ್ಮಲ, ಸುಸಂಸ್ಕೃತ ಸಮಾಜ ಸ್ಥಾಪನೆಗೊಳ್ಳಬೇಕು. ಆಗ ರಾಷ್ಟ್ರದ ಅಭಿವೃದ್ಧಿಗೆ ಪೂರಕವಾದೀತು ಮತ್ತು ಸಮಾಜದ ಒಳಿತಿಗಾಗಿ ಯುವ ಜನಾಂಗ ಕ್ರಾಂತಿಕಾರಕ ಹೋರಾಟದಲ್ಲಿ ತೊಡಗಬೇಕು. ಆಗ ಮಾತ್ರ ಭವ್ಯ ಭಾರತದ ಭವಿಷ್ಯ ಉಜ್ವಲವಾಗಬಹುದು. ಈ ಧ್ಯೇಯ ಸಾಧನೆಗೆ ಉತ್ತಮ ಶಿಕ್ಷಣದ ಅವಶ್ಯಕತೆ ಇದೆ.

ವಿದ್ಯೆಯೆಂಬುದು ಕಳ್ಳರಿಂದ ಅಪಹರಿಸಲ್ಪಡುವುದಿಲ್ಲ, ಸರ್ಕಾರಕ್ಕೆ ತೆರಿಗೆ ರೂಪದಲ್ಲೂ ಕೊಡುವ ಹಾಗಿಲ್ಲ ಸಹೋದರರ ನಡುವೆ ಹಂಚಲ್ಪಡುವುದಿಲ್ಲ ಅದು ಭಾರವೂ ಇರುವುದಿಲ್ಲ. ಖರ್ಚು ಮಾಡಿದಷ್ಟು ಹೆಚ್ಚುತ್ತಿರುತ್ತದೆ. ಆದ್ದರಿಂದ ವಿದ್ಯೆಯೆಂಬುದು ಎಲ್ಲಾ ಸಂಪತ್ತಿಗಿಂತಲೂ "ಮಿಗಿಲಾದುದು"

## ನಗೆಹನಿಗಳು

1. ಟೀಚರ್ : ಅಮೇರಿಕಾದ ರಾಜಧಾನಿ ಯಾವುದು?
   ತಿಮ್ಮ : ನವದೆಹಲಿ
   ಟೀಚರ್ : ನಿನ್ನ ಉತ್ತರ ತಪ್ಪು
   ತಿಮ್ಮ : ಇಲ್ಲ ನಿಮ್ಮ ಪ್ರಶ್ನೆಯೇ ತಪ್ಪು, ನೀವು ಭಾರತದ ರಾಜಧಾನಿ ಕೇಳಬೇಕಾಗಿತ್ತು.

2. ತಿಮ್ಮ ಮತ್ತು ಗುಂಡ ಎಸ್‌ಎಸ್‌ಎಲ್‌ಸಿ ಎಕ್ಸಾಮಿನಲ್ಲಿ 3ನೇ ಸಲ ಕನ್ನಡ ಫೇಲಾದರು.
   ತಿಮ್ಮ – ಬಾ ನಾವಿಬ್ರೂ ಆತ್ಮಹತ್ಯೆ ಮಾಡಿಕೊಳ್ಳೋಣ
   ಗುಂಡ – ನಿಂಗೇನಾದ್ರೂ ಬುದ್ಧಿ ಇದಿಯೇ? ನಾವಿಬ್ರು ಆತ್ಮಹತ್ಯೆ ಮಾಡ್ಕೊಂಡ್ರೆ ಮತ್ತೆ ಅಂಗನವಾಡಿಯಿಂದ ಸ್ಟಾರ್ಟ್ ಮಾಡ್ಬೇಕುತ್ತೆ.

3. ಹೆಂಡತಿ – ರೀ ಐಶ್ವರ್ಯ ರೈಗೆ ಮಗು ಆಯ್ತಂತೆ, ಪೇಪರ್‌ನಲ್ಲಿ ಹಾಕಿದ್ದಾರೆ.
   ಗುಂಡ – ಅಯ್ಯೋ ಅವ್ರ್‌ಗೆ ಬುದ್ದಿನೇ ಇಲ್ಲ. ಮಗುನ ತೊಟ್ಟಲಲ್ಲಿ ಹಾಕೋದು ಬಿಟ್ಟು ಪೇಪರ್‌ನಲ್ಲಿ ಹಾಕಿದ್ದಾರೆ.

## ಆಸೆಯ ಕಿರು ನೋಟ

ಚೈತ್ರ ಎಂ.
ತೃತೀಯ ಬಿ.ಕಾಂ.

ಗಿಡಕ್ಕೆ ಮರವಾಗುವ ಆಸೆ
ಮರಕ್ಕೆ ನೆರಳು ಕೊಡುವ ಆಸೆ
ಮಗುವಿಗೆ ಆಟವಾಡುವ ಆಸೆ
ಮನುಷ್ಯನಿಗೆ ಸಂಪಾದನೆಯ ಆಸೆ
ಮಾನವೀಯತೆಗೆ ಎಲ್ಲರನ್ನು
ಮಾನವರನ್ನಾಗುವ ಆಸೆ

ವಿದ್ಯೆಯು ಬುದ್ಧಿಗೆ ಸ್ವಂತವಾಗುವ ಆಸೆ
ಬುದ್ಧಿಗೆ ಮತ್ತಷ್ಟು ತಿಳಿಯುವ ಆಸೆ
ಬುದ್ಧಿಗೆ ಬದುಕನ್ನು ಕಟ್ಟುವ ಆಸೆ
ಬದುಕಿಗೆ ಎಲ್ಲರನ್ನು ತಿಳಿಯುವ ಆಸೆ
ತಿಳಿದವರಿಗೆ ಎಲ್ಲರೂ ತನ್ನಂತಾಗುವಾಸೆ.

# ಪರನಿಂದೆಯ ಫಲ

ಪೂಜಾ ಎಂ.
ತೃತೀಯ ಬಿ.ಎ., ಹೆಚ್‌ಇಜಿ

ಒಂದು ಊರಿನಲ್ಲಿ ಒಬ್ಬ ಬಡವನಿದ್ದನು. ದೈವಭಕ್ತನಾದ ಅವನು ಧರ್ಮ ಶೀಲನೂ ಆಗಿದ್ದ. ಹೊಲ ಮನೆಯಿಲ್ಲದೆ ಗುಡಿಸಲಲ್ಲಿ ವಾಸವಾಗಿದ್ದು ಕೂಲಿ ಜೀವನ ನಡೆಸುತ್ತಿದ್ದನು. ಇಬ್ಬರು ಮಕ್ಕಳಿದ್ದು ಬಹಳ ಕಷ್ಟದ ಜೀವನ ನಡೆಸುತ್ತಿದ್ದನು.

ಆ ಬಡವನ ಗುಡಿಸಲ ಮುಂದೆ ಒಬ್ಬ ಶ್ರೀಮಂತ ವಾಸವಾಗಿದ್ದ. ಬಡವನನ್ನು ಅಣಕಿಸಿ, ಚುಚ್ಚಿ ಮಾತಾಡಿ ಪ್ರತಿನಿತ್ಯ ತೊಂದರೆ ಕೊಡುತ್ತಿದ್ದನು. ಇದರಿಂದ ನೊಂದು ಬೇಸತ್ತ ಬಡವ ಒಂದು ದಿನ ಮುಂಜಾನೆ ಹೆಂಡತಿ ಮಕ್ಕಳ ಜೊತೆ ಆ ಊರನ್ನು ಬಿಟ್ಟು ಹೊರನಡೆದ.

ಎಲ್ಲಿಗೆಂದು ಗುರಿಯಿಲ್ಲದ ಅವನ ಪಯಣ ದಿನವೆಲ್ಲಾ ಸಾಗಿತು. ಹಸಿವು ಬಾಯಾರಿಕೆಯಿಂದ ಮಕ್ಕಳು ಚೀರಾಡುತ್ತಿದ್ದರು. ಮುಂದೆ ನಡೆಯಲು ಶಕ್ತಿಯಿಲ್ಲ ದಟ್ಟವಾದ ಕಾಡು ಬೇರೆ, ಎಡವಿಬಿದ್ದ. ಮಕ್ಕಳನ್ನು ಸಂತೈಸಿದರೆ ಹಸಿವು ಇಂಗೀತೆ? ಅಯ್ಯೋ!! ದೇವರೆ, ಇದೆಂಥ ಪರೀಕ್ಷೆ? ನಾನೇನು ಪಾಪ ಮಾಡಿದೆ? ನನ್ನ ಕಷ್ಟಗಳಿಗೆ ಕೊನೆಯೇ ಇಲ್ಲವೇ? ಏನೂ ಅರಿಯದ ಆ ಕಂದಮ್ಮಗಳು ನನ್ನಿಂದಾಗಿ ಈ ನರಕ ಯಾತನೆಯನ್ನು ಅನುಭವಿಸ ಬೇಕಾಗಿ ಬಂತಲ್ಲ! ಎಂದು ಯೋಚಿಸುತ್ತಿದ್ದನು. ಅಷ್ಟರಲ್ಲಿ ಶಿಷ್ಟರಕ್ಷಕನಾದ ಆ ಭಗವಂತನು ಸನ್ಯಾಸಿ ವೇಷದಲ್ಲಿ ಬಂದು ಏನಪ್ಪಾ! ನೀನು ಯಾರು? ಏಕೆ ಇಷ್ಟು ಸಂಕಟ ಪಡುತ್ತಿದ್ದೀಯೆ? ಎಲ್ಲಿಗೆ ಹೋಗ ಬೇಕು ಎಂದು ಪ್ರಶ್ನಿಸಲು ಅವನು ಎಲ್ಲವನ್ನೂ ವಿಷದವಾಗಿ ಹೇಳಿಕೊಂಡನು.

ಬಡವನನ್ನು ಕುರಿತು ಆ ವ್ಯಕ್ತಿ "ನಿನ್ನನ್ನು ನೋಡಿದರೆ ಬಹಳ ಒಳ್ಳೆಯವನ ಹಾಗೆ ಕಾಣುತ್ತೀಯೆ? ನಿನಗೆ ಎರಡು ತೆಂಗಿನಕಾಯಿ ಗಳನ್ನು ಮಂತ್ರಿಸಿಕೊಡುತ್ತೇನೆ. ನೀನು ಏನು ಬೇಕೋ ಅದನ್ನು ಧ್ಯಾನಿಸಿಕೊಂಡು ಆ ಕಾಯಿಗಳನ್ನು ಒಡೆದರೆ ನಿನ್ನ ಇಷ್ಟಾರ್ಥಗಳು ಫಲಿಸುತ್ತವೆ' ಎಂದು ಹೇಳಿಕೊಟ್ಟನು. ಅಲ್ಲಿಂದ ಹಿಂತಿರುಗಿ ಊರಿಗೆ ಬಂದ ಅವನು ಮೊದಲು ನನಗೆ ದುಡಿಯುವ ಹೊಲಬೇಕೆಂದು ಧ್ಯಾನಿಸಿ ಮೊದಲ ಕಾಯಿಯನ್ನು ಒಡೆದನು ಬೇಡಿಕೆ ನೆರವೇರಿತು. ಸಂತೋಷಗೊಂಡ ಅವನು ಮತ್ತೆ ವಾಸಕ್ಕೆ ಒಳ್ಳೆಯ ಮನೆಬೇಕೆಂದು ಧ್ಯಾನಿಸಿ ಎರಡನೆಯ ತೆಂಗಿನಕಾಯಿಯನ್ನು ಒಡೆದಾಗ ಅದು ಫಲಿಸಿತು. ಕೊನೆಗೆ ಹಸಿವನ್ನು ನೀಗಿಸಲು ಆಹಾರ ಪದಾರ್ಥಗಳನ್ನು ನೀಡುವಂತೆ ಧ್ಯಾನಿಸುತ್ತಾ ಮೂರನೆಯ ಕಾಯಿಯನ್ನು ಹೊಡೆಯಲು ಅದೂ ಸಿದ್ಧಿಯಾಗಿ ಆ ಬಡವ ನೆಮ್ಮದಿಯಿಂದ ಜೀವನ ನಡೆಸುತ್ತಿದ್ದನು.

ಎದುರು ಮನೆಯ ಶ್ರೀಮಂತ ಬಡವನಲ್ಲಾದ ಬದಲಾವಣೆಯಿಂದ ಅಸೂಯೆಗೊಂಡು ತಾನೂ ಇವುಗಳನ್ನೆಲ್ಲಾ ಹೊಂದಬೇಕೆಂದು ಹೆಬ್ಬಯಕೆ ಯಿಂದ ಅವನನ್ನು ಕೇಳಿದನು. ಆಗ ಬಡವನು ತನ್ನೆಲ್ಲಾ ಕಥೆಯನ್ನು ವಿವರಿಸಲು ಆ ಶ್ರೀಮಂತ ತನ್ನ ಹೊಲ ಮನೆಯನ್ನು ಮಾರಿ ಬಂದ ಹಣವನ್ನು ಪಕ್ಕದ ಮನೆಯವರ ಹತ್ತಿರ ಕೊಟ್ಟು, "ಕೆಲವು ದಿನಗಳ ನಂತರ ಪಡೆದುಕೊಳ್ಳುತ್ತೇನೆ" ಎಂದು ಹೇಳಿ ಕಾಡಿಗೆ ಹೊರಟನು. ದಿನಗಟ್ಟಲೆ ನಡೆದರೂ ಯಾರ ಸುಳಿವೂ ಇಲ್ಲ. ಹಸಿವೂ ಬಾಯಾರಿಕೆಯಿಂದ ಬಳಲಿ ಶಕ್ತಿಯುಡುಗಿ ಗೋಳಾಡಿ ಕೊನೆಗೆ ಯಾರನ್ನೂ ಕಾಣದೆ ಜಿಗುಪ್ಸೆಯಿಂದ ಹಿಂತಿರುಗಿದ. ಇತ್ತ ಹಣ ಕೊಟ್ಟಿದ್ದ ಪಕ್ಕದ ಮನೆಯವನು ಪರಾರಿಯಾಗಿದ್ದು ಇರಲು ಮನೆಯಿಲ್ಲದೆ ದುಡಿಯಲು ಹೊಲವಿಲ್ಲದೆ ಇದ್ದುದನ್ನು ಕಳೆದುಕೊಂಡು ಭಿಕಾರಿಯಾಗಿ ಊರಿಂದೂರಿಗೆ ಅಲೆದಾಡಿ ಭಿಕ್ಷೆ ಬೇಡುವ ಸ್ಥಿತಿ ಬಂದಿತು.

ಈ ಕಥೆಯಿಂದ ತಿಳಿದು ಬರುವ ನೀತಿ ಏನೆಂದರೆ ಕಾಯಕ, ಧರ್ಮ, ನೀತಿ, ನಂಬಿಕೆ, ದಯೆ ಇವು ಮನುಷ್ಯನ ಜೀವನದಲ್ಲಿನ ಪಂಚ ಸೋಪಾನಗಳು, ಅವು ಸದಾ ನಂಬಿದವನನ್ನು ಕಾಪಾಡುತ್ತವೆ. ದುರಾಸೆ, ಹೊಟ್ಟೆಕಿಚ್ಚು, ನಿಂದನೆ ಇವು ಮಾನವನ ಹಿತಶತ್ರುಗಳಾಗಿದ್ದು ಜೀವನವನ್ನು ಸರ್ವನಾಶ ಮಾಡುತ್ತವೆ.

ಕೊನೆಯದಾಗಿ "ನಾವೂ ಬದುಕಬೇಕು. ಇತರರನ್ನು ಬದುಕಲು ಬಿಡಬೇಕು" ಹಾಗೂ ನಮಗಿರುವಷ್ಟರಲ್ಲೇ ತೃಪ್ತಿ ಪಡಬೇಕು.

# 21ರ ಮಗಳಿಗೆ ಅಪ್ಪಕೊಟ್ಟ ಜ್ಞಾನದೀಕ್ಷೆ!



ಮೇಘನಾ ಪಿ.
ದ್ವಿತೀಯ ಬಿ.ಎ., ಹೆಚ್‌ಇಪಿ

ಈ ವಾರದ (ಅಥವಾ ಯಾವುದೇ ವಾರದ) ದಿನಪತ್ರಿಕೆಗಳನ್ನೊಮ್ಮೆ ತಿರುವಿಹಾಕಿ! 2 ವಿಷಯಗಳು ಎದ್ದುಕಾಣುತ್ತವೆ. ಮೊದಲನೆಯದು ಎಲ್ಲೆಲ್ಲಿ ಕ್ರೈಮ್ ನಡೆದಿರುತ್ತದೋ, ಅಪಘಾತ/ಅನಾಹುತ ಸಂಭವಿಸಿ ರುತ್ತದೋ ಅಲ್ಲೆಲ್ಲ ಯುವಕರ ಪಾತ್ರ ಇದ್ದೇ ಇರುತ್ತದೆ. ಚಳವಳಿಯಿಂದ ಕ್ರಾಂತಿಯವರೆಗೆ ಭಯೋತ್ಪಾದನೆ ಯಿಂದ ಬುದ್ಧಿಗೇಡಿ ಅಪಘಾತಗಳವರೆಗೆ – ಎಲ್ಲಕ್ಕೂ ಯುವ ಜನತೆಯೇ ಕಾರಣ. ಸರಕು, ಸಾಧನ ಅಥವಾ ಸಂಪನ್ಮೂಲ! ಆ ವಯಸ್ಸಿನವರ ಅಗಾಧ ಶಕ್ತಿಯನ್ನು ಚಿತ್ತ –ಚಾಂಚಲ್ಯವನ್ನು ತಿದ್ದಿ ರೂಪಿಸಿಕೊಳ್ಳುವವರಿ ಗಿಂತಲೂ ಅನುಕೂಲಕ್ಕೆ ಬಳಸಿಕೊಳ್ಳುವವರೇ ಹೆಚ್ಚು ಹಾಗಾಗಿಯೇ ಈ ವಯಸ್ಸಿನವರಿಗೆ ಎಲ್ಲ ವಯಸ್ಸಿನವರ ಬಗ್ಗೆಯೂ ಸಿನಿಕತೆ, ಅಪನಂಬಿಕೆ.

ಎರಡನೇ ವಿಷಯ–ಪ್ರತಿಯೊಂದು ಪೀಳಿಗೆಯೂ ತನ್ನ ಮುಂದಿನ ಪೀಳಿಗೆಗೆ ಸಲಹೆ ಕೊಡಲು ತಿಣುಕಾಡುತ್ತಿರುತ್ತದೆ. ತಾನು ಮಾಡಿದ ತಪ್ಪುಗಳು ಪುನರಾವರ್ತನೆಗೊಳ್ಳದಂತೆ, ಹಗಲು ಕಂಡ ಬಾವಿಯಲ್ಲಿ ಇರುಳು ಬೀಳದಂತೆ ಎಡವದಂತೆ ಮುಂದೋಡುವುದು ಹೇಗೆ ಎಂದು ಸಲಹೆ ನೀಡುತ್ತಿರುತ್ತದೆ. ರಾಜಕಾರಣಿಗಳಿಂದ ಹಿಡಿದು ಅಂಕಣಕಾರರವರೆಗೆ ಎಲ್ಲರೂ ಯುವ ಪೀಳಿಗೆಗೆ ನಿತ್ಯವೂ ಕಿವಿಮಾತು ಹೇಳುತ್ತಲೇ ಇರುತ್ತಾರೆ.

ಉಮೇದು, ಆತ್ಮವಿಶ್ವಾಸ ತುಂಬಿರುವ ಆ ವಯಸ್ಸಿನವರ ಮೇಲೆ ಅಪೇಕ್ಷೆಗಳ ಮೂಟೆಯನ್ನು ಹೇರುತ್ತೇವೆ. ಅವರನ್ನು ನಮ್ಮಂತೆ ಆಗಿಸುವ ಯತ್ನ ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಇದರಲ್ಲಿ ಯಾರ ತಪ್ಪೇನು? ತಪ್ಪೇನೂ ಇಲ್ಲ – ಹಿಂದಿನ ಪೀಳಿಗೆಗಳ ತಮ್ಮ ಮುಂದಿನ ಪೀಳಿಗೆಗಳಿಗೆ ಸಲಹೆ ನೀಡುವುದು ಎಲ್ಲ ಕಾಲಮಾನಗಳಲ್ಲಿಯೂ ಇದ್ದದ್ದೇ. ಆದರೆ, ಇಂದು ಆ ಸಲಹೆಯ ಪ್ರಕಾರ ಸ್ವಲ್ಪ ಬದಲಾಗುತ್ತಿದೆಯೇ? ಬೋಧಿಸುವ ಬದಲು 'ಹೋಗಿ ನಿನ್ನದೆ ರೀತಿಯಲ್ಲಿ ಬದುಕು', ಬೋಧಿಸುವ ಬದಲು ತಿಳಿವಳಿಕೆ ಹೇಳುವ, ಬೈಯುವ ಬದಲು ಬೆನ್ನು ತಟ್ಟುವ ಪ್ರವೃತ್ತಿ ಬೆಳೆಯುತ್ತಿದೆಯೇ? ಅನುಸರಿಸಬೇಕಾದ ಮೌಲ್ಯಗಳಲ್ಲಿ ಬದಲಾವಣೆ ಇಲ್ಲವಾದರೂ, ಸಲಹೆಯ ವಾಚನಾ ಪ್ರಕಾರದಲ್ಲಿ ಬದಲಾವಣೆಯಾಗುತ್ತಿದೆಯೇ?

ಮೂಲತಃ ಹಿಂದಿ ಚಲನಚಿತ್ರ ಜಗತ್ತಿನವರಾದ ವಿಕ್ರಮ್‌ಭಟ್. ಹವ್ಯಾಸಿ ಕಥೆಗಾರನೂ ಹೌದು. ಈಚೆಗೆ ತಮ್ಮ ಮಗಳು ಕೃಷ್ಣಾಳ 21ನೇ ವರ್ಷದ ಹುಟ್ಟುಹಬ್ಬ ದಂದು ತಮ್ಮ ಎಲ್ಲ ಕಥೆಗಳೂ ಮತ್ತು ಜೀವನಾನು ಭವದ ಸಾರವನ್ನು ಮಗಳಿಗೆ ಸಲಹೆ ರೂಪದಲ್ಲಿ ಪಟ್ಟಿ ಮಾಡಿದರು.

- ಮೊದಲಿಗೆ ನೀನು ವಿಶಿಷ್ಟ ಮತ್ತು ಸುಂದರ ಎನ್ನುವುದು ಸದಾ ನೆನಪಿರಲಿ
- ದೇವರು ಎನ್ನುವುದು ಅದ್ಭುತವಾದ ಪರಿ ಕಲ್ಪನೆ. ಕೆಲವೊಮ್ಮೆ ಅದು ಕೆಲಸ ಮಾಡು ತ್ತದೆ! ಕೆಲವೊಮ್ಮೆ ಮಾಡುವುದಿಲ್ಲ! ನೀನು ದೇವರಲ್ಲಿ ನಂಬಿಕೆ ಇಡು. ಆದರೆ, ನಿನ್ನ ಹೋರಾಟಗಳನ್ನು ನೀನೇ ಮಾಡು.
- ಈ ಹೋರಾಟಗಳನ್ನು ಮಾಡುವುದಾ ದರೂ ಹೇಗೆ? ನೀನು ಮಾಡುವ ಆಯ್ಕೆಗಳ ಮೂಲಕ! ಏಕೆಂದರೆ, ನಮ್ಮ ಆಯ್ಕೆಗಳು ನಮ್ಮ ಭವಿಷ್ಯವನ್ನು ನಿರ್ಧರಿಸುತ್ತವೆ. ನಾವು ಮಾಡುವ ಆಯ್ಕೆಗಳ ಒಟ್ಟು ಮೊತ್ತವೇ ನಾವು! ಆದುದರಿಂದ, ನೀನು ಮಾಡುವ ಆಯ್ಕೆಯಲ್ಲಿ ವಿವೇಕವಿರಲಿ.
- ಅವಸರದಲ್ಲಿ ಮದುವೆಯಾಗಬೇಡ, ಬೇರಾರದ್ದೋ ಡೆಡ್‌ಲೈನ್‌ಗೋಸ್ಕರ ಮದುವೆ ಆಗಬೇಡ. ಈ ವಿಷಯದಲ್ಲಿ ನೀನೇ ನಿರ್ಧಾರ ತೆಗೆದುಕೊ.
- ನೀನು ಕದತಟ್ಟುವ ಮುನ್ನ ಅದು ತನ್ನಂತಾನೆ ತೆರೆದುಕೊಂಡರೆ ಆ ಬಾಗಿಲನ್ನು ಪ್ರವೇಶಿಸ ಬೇಡ. ಸಾಂಕೇತಿಕವಾಗಿ ಹೇಳುತ್ತಿದ್ದೇನೆ!

- ಮುಖಸ್ತುತಿ ಮಾಡುವವರ ಬಗ್ಗೆ ಜಾಗ್ರತೆ ಯಿಂದಿರು.
- ನೀನು ಸಂಪೂರ್ಣವಾಗಿ ಸ್ವಾವಲಂಬಿ ಯಾಗುತ್ತ ಶ್ರಮವಹಿಸಿ ದುಡಿ
- ವಯಸ್ಸಾಗುತ್ತಾ ಹೋದಂತೆ ಎಲ್ಲ ಕೆಟ್ಟ ಚಟಗಳಿಂದ ದೂರವಾಗು. ನಮ್ಮನ್ನು ನಾವು ಕೊಂದುಕೊಳ್ಳಲು ಕೆಟ್ಟ ಚಟಗಳು ಬೇಕಿಲ್ಲ!
- ನಿನ್ನ ಬಗ್ಗೆ ನಿನಗೆ ಅನುಕಂಪ ಬಾರದಿರಲಿ. ನನಗೇನಾದರೂ (ಕೆಟ್ಟದ್ದು) ಆದರೆ ಅದು ನೀನು ಆಗಲು ಬಿಟ್ಟಿದ್ದರಿಂದ ಮಾತ್ರ ಆಯಿತು ಎನ್ನುವ ಅರಿವಿರಲಿ.
- ನೀನು ಖ್ಯಾತಿಯನ್ನು ಬಯಸುವುದಾದರೆ ಮೊದಲು ನಿನ್ನನ್ನು ನೀನು ಪ್ರೀತಿಸುವುದನ್ನು ಕಲಿಯಬೇಕು.
- ಆರ್ಟ್ಆಫ್ ಲಿವಿಂಗ್/ಜೀವಿಸುವ ಕಲೆ ಎನ್ನುವಂಥದ್ದೇನೂ ಇಲ್ಲ. ಕಿತ್ತು ತಿನ್ನುವ ಪ್ರಪಂಚದಲ್ಲಿ ಅಂತಹ ಯಾವ ಕಲೆಯೂ ಇಲ್ಲ!
- ಆಧ್ಯಾತ್ಮವು ಒಂದು ವಿಧವಾದ ಪೇನ್‌ಕಿಲ್ಲರ್ / ನೋವುನಿವಾರಕ
- ನೀನು ಬದುಕಿರುವಾಗ ಏನನ್ನು ಯಾರಿಗೂ ಉಯಿಲ್/ವಿಲ್ ಮಾಡಿಬಿಡಬೇಡ. ಯಾರಿಗೆ ಎಂದರೆ ಯಾರಿಗೂ!
- ಪ್ರೀತಿ ಉಳಿಯುವುದಿಲ್ಲ. ಅದು ಕೆಟ್ಟ ಸುದ್ಧಿ. ಆದರೆ ಪ್ರೀತಿ ಮತ್ತೆ ಮತ್ತೆ ಹುಟ್ಟು ತ್ತದೆ. ಅದು ಒಳ್ಳೆಯ ಸುದ್ಧಿ.

ಇವುಗಳೆಲ್ಲವೂ ಪರಮಸತ್ಯಗಳಾಗಲೀ ಸರ್ವಕಾಲಿಕ ಯುಕ್ತಿಗಳಾಗಲೀ ಅಲ್ಲವೇನೋ! ಆದರೆ ಇವುಗಳಲ್ಲಿ ಆಳವಾದ ಆಲೋಚನೆಯಿದೆ. ಕೆಣಕುವ ಪರಿಪ್ರೇಕ್ಷೆಯಿದೆ. ಯೋಚಿಸುವ ಮನಸ್ಸನ್ನು ದುಡಿಯುವ ಶಕ್ತಿ ಇದೆ. ಇಂದಿನ ಯುವ ಪೀಳಿಗೆಗೆ ಬೇಕಿರುವುದು ಬಹುಶಃ ಅದೇ – ಬೆಳಕಿನೆಡೆಗೆ ತಳ್ಳುವ ಅವರ ಭಾಷೆಯಲ್ಲಿಯೇ ಇರುವ ಮುಕ್ತ ಆಲೋಚನೆಗಳು. ಬೋಧಿಸಲು ಕೂರದೆ ಅವರ ಹೆಗಲ ಮೇಲೆ ಕೈಹಾಕಿಕೊಡಬಹುದಾದ ಸ್ನೇಹಪೂರ್ವಕ ಸಲಹೆಗಳು.

- 'ನನಗೆ ಗೊತ್ತು. ನನ್ನನ್ನು ನಂಬು' ಎನ್ನುವ ವ್ಯಕ್ತಿಯನ್ನು ನಂಬಬೇಡ! ಯಾರಿಗೂ ಏನೂ ಖಚಿತವಾಗಿ ಗೊತ್ತಿರುವುದಿಲ್ಲ. ಅವರ ಜ್ಞಾನವೇನಿದ್ದರೂ ಅವರ ಅನುಭವಕ್ಕೇ ಸಂಬಂಧಿಸಿದ್ದು. ನೀನು ನಿನ್ನ ಅನುಭವಗಳಿಂದ ಕಲಿ.
- ಲೈಫ್ ಇಸ್ ನಾಟ್ ಫೇರ್, ಜೀವನ ನ್ಯಾಯಯುತವಾಗಿ ಇರುವುದಿಲ್ಲ. ನೀನು ಯಾವುದ್ಯಾವುದಕ್ಕೆಲ್ಲಾ ಅರ್ಹಳೋ ಅವೆಲ್ಲವೂ ನಿನಗೆ ಸಿಗುವುದಿಲ್ಲ. ನಿನಗೆ ಬೇಕಾದುದನ್ನು ನೀನು ನೆಗೋಷಿಯೇಷನ್/ಸಂಧಾನದ ಮೂಲಕ ಪಡೆಯಬೇಕಾಗುತ್ತದೆ.
- ನಿನ್ನ ಬಳಿ ರಹಸ್ಯಗಳಿರುತ್ತವೆ. ನೀನು ಅದನ್ನು ಯಾರಿಗಾದರೂ ಹೇಳಿದರೆ, ಒಂದಿಲ್ಲೊಂದು ದಿನ ಅದು ನಿನ್ನ ವಿರುದ್ಧ ಬಳಕೆಯಾಗುತ್ತದೆ.
- ಸೋಲು ಎನ್ನುವುದು ಅನಿವಾರ್ಯ. ಅದರಿಂದ ಕಲಿ. ನಿನಗೆ ಸೋಲೆಂಬುದು ಘಟನೆ ಇರಬಹುದು. ಆದರೆ, ಜಗತ್ತು ಸೋಲಿಗೆ ಯಾರನ್ನಾದರೂ ಹಿಡಿದು ದೂಷಿಸಿ ಶಿಕ್ಷಿಸಲು ಯತ್ನಿಸುತ್ತದೆ. ಅಂತಹ ದೋಷಣೆಯನ್ನು ವಿನಯದಿಂದ ಒಪ್ಪಿಕೊ.
- ಯಶಸ್ಸಿಗಿಂತ ದೊಡ್ಡ ಪ್ರತೀಕಾರ ಮತ್ತೊಂದಿಲ್ಲ. ಮಿಕ್ಕಿದೆಲ್ಲವೂ ಸೋತ ಕಾಮನೆಗಳ ಬಡಬಡಿಕೆ ಅಷ್ಟೇ!
- ಇನ್ನೊಬ್ಬರಲ್ಲಿ ನಿಷ್ಠೆಯನ್ನೂ ಕೃತಜ್ಞತೆಯನ್ನು ಹುಡುಕುವ ವ್ಯರ್ಥ ಪ್ರಯತ್ನ ಮಾಡಬೇಡ. ನಿನ್ನಲ್ಲಿ ನೀನು ಅದನ್ನು ಹುಡುಕಿ ಪಡೆದರೆ ಅದೇ ಅತಿದೊಡ್ಡ ಯಶಸ್ಸು!
- ಸಾಲ ಮಾಡಬೇಡ. ದಯುವಿಟ್ಟು ಕದಿಯಬೇಡ.
- ರಾಜಕೀಯ ಮಾಡಬೇಡ. ಜೀವನದಲ್ಲಿ ಎಲ್ಲಿಯೂ ರಾಜಕೀಯ ಮಾಡಬೇಡ. ಧೈರ್ಯ ಇಲ್ಲದವರು ಕಪಟಿಗಳಾಗಿರುತ್ತಾರೆ. ಯಾವ ಹೊತ್ತಿಗೂ ನೀನು ಧೈರ್ಯವನ್ನೇ ಆಯ್ದುಕೊ.

# ಹೆತ್ತ ತಾಯಿ ಹೊತ್ತ ನಾಡು



ಅಶ್ವಿನಿ ಎಸ್.
ತೃತೀಯ ಬಿ.ಎ., ಹೆಚ್.ಇ.ಜಿ

ನಮ್ಮನ್ನು ಒಂಬತ್ತು ತಿಂಗಳು ಹೆತ್ತು ಹೊತ್ತು ಸಾಕಿದವಳು ತಾಯಿ. ತಾಯಿ ಎಂದರೆ ನಮ್ಮೆಲ್ಲರಿಗೂ ಜನ್ಮಕೊಟ್ಟವಳು ಮಾತ್ರವಲ್ಲ ನಮ್ಮೆಲ್ಲರ ಭಾರವನ್ನು ಹೊತ್ತು ಕೊಂಡಿರುವ ಈ ನಾಡು ಸಹ ಅಂದರೆ ಈ ಭೂಮಿ ತಾಯಿಯು ನಮಗೆ ತಾಯಿ.

ನಮ್ಮೆಲ್ಲರನ್ನು ಹೊತ್ತು ಹೆತ್ತು ಸಾಕಿರುವವಳು ಒಂದು ಹೆಣ್ಣೆ ಅಲ್ಲವೆ. ಅವಳೇ ನಮ್ಮ ತಾಯಿ. ನಾವು ಮೊದಲು ಹುಟ್ಟಿದಾಗ ನಮಗೆ ಏನು ತಿಳಿದಿರುವುದಿಲ್ಲ. ಆಗ ನಮ್ಮ ಪಾಲನೆ ಪೋಷಣೆಯನ್ನು ಸರಿಯಾಗಿ ಮಾಡಿ ನಮ್ಮನ್ನು ದೊಡ್ಡವರನ್ನಾಗಿ ಮಾಡುವ ತಾಯಿ ನಮಗೆ ನಡೆಯಲು ಬರದೆ ಇರುವಾಗ ನಮ್ಮ ಕೈಹಿಡಿದು ನಡೆಸುವುದನ್ನು ನಡೆಯುವುದನ್ನು ಹೇಳಿ ಕೊಡುತ್ತಾಳೆ. ನನಗೆ ಯಾವ ಕಷ್ಟ ಬಂದರು ತನ್ನ ಮಕ್ಕಳಿಗೆ ಮುದ್ದಾಡುತ್ತಾ ತನ್ನ ಕಷ್ಟಗಳನ್ನು ಮರೆಯುತ್ತಾಳೆ. ಶಂಕರಾಚಾರ್ಯರು ಹೇಳಿರುವ ಹಾಗೆ "ಕೆಟ್ಟ ಮಕ್ಕಳು ಇದ್ದಾರೆ. ಆದರೆ ಕೆಟ್ಟ ತಾಯಿ ಎಂದಿಗೂ ಇರುವುದಿಲ್ಲ" ತನ್ನ ಮಕ್ಕಳ ಸಂತೋಷಕ್ಕಾಗಿ ತನ್ನ ಜೀವನವನ್ನು ಮುಡುಪಾಗಿಡು ವವಳೇ ತಾಯಿ.

ಮತ್ತೊಬ್ಬಳು ತಾಯಿ ಅಂದರೆ ಈ ಭೂಮಿತಾಯಿ ನಮ್ಮೆಲ್ಲರಿಗೂ ಇರಲು ಜಾಗ ಕೊಟ್ಟು ನಮ್ಮೆಲ್ಲರ ಭಾರವನ್ನು ಹೊತ್ತುಕೊಂಡಿರುವ ಈ ನಮ್ಮ ತಾಯಿ ಭೂಮಿತಾಯಿ.

ಮನುಷ್ಯರು ಎಷ್ಟು ಸ್ವಾರ್ಥಿಗಳೆಂದರೆ ತಮ್ಮ ಬಯಕೆಗಳನ್ನು ಈಡೇರಿಸಿಕೊಳ್ಳಲು ತಾಯಿಯನ್ನು ನಾಶ ಮಾಡುತ್ತಿದ್ದಾರೆ. ಅಂದರೆ ಆ ತಾಯಿಯ ಒಡಲೆಲ್ಲವನ್ನು ಕಸದ ತೊಟ್ಟಿಯನ್ನಾಗಿ ಮಾಡಿದ್ದಾರೆ. ಹೆತ್ತ ತಾಯಿ ಮತ್ತು ಹೊತ್ತ ನಾಡು ಸ್ವರ್ಗಕ್ಕಿಂತಲೂ ಮಿಗಿಲು. ಇವೆರಡು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಹೇಗೆಂದರೆ ನಮ್ಮೆಲ್ಲರ ಸೃಷ್ಟಿಗೆ ಕಾರಣವಾಗಿರುವವಳು ಆ ತಾಯಿ ಅಲ್ಲವೆ. ನಾವು ಯಾರ ಪ್ರೀತಿಯನ್ನು ಕಳೆದುಕೊಂಡರು ತಾಯಿಯ ಪ್ರೀತಿಯನ್ನು ಮಾತ್ರ ಎಂದಿಗೂ ಕಳೆದುಕೊಳ್ಳ ಬಾರದು. ಏಕೆಂದರೆ ಪ್ರೀತಿ ಮಾಡಿ ಕೈಕೊಡೋ ಪ್ರೇಮಿಗಳು ತುಂಬಾ ಜನ ಇದ್ದಾರೆ. ಫ್ರೆಂಡ್‌ಶಿಪ್ ಮಾಡಿ ಮರೆಯೋ ಜನ ಇದ್ದಾರೆ. ಆದರೆ ನಮ್ಮೆಲ್ಲರಿಗೂ ಜೀವ ಕೊಟ್ಟು ಜೀವನ ಕೊಡೋ ತಾಯಿ ಜನ್ಮಕ್ಕೆ ಒಬ್ಬಳೆ. ಆದ್ದರಿಂದ ಆ ತಾಯಿಯ ಪ್ರೀತಿಯನ್ನು ಎಂದಿಗೂ ಕಳೆದುಕೊಳ್ಳಬಾರದು. ತಂದೆ ಸತ್ತರೆ ಮಕ್ಕಳು ಅನಾಥರಾಗುವುದಿಲ್ಲ. ಆದರೆ ತಾಯಿ ಸತ್ತರೆ ಮಕ್ಕಳು ಅನಾಥರಾಗುತ್ತಾರೆ.

ನಾವು ಮೊದಲು ಹುಟ್ಟಿದಾಗ ನಮಗೆ ಮಾತನಾಡಲು ಬರುವುದಿಲ್ಲ. ಕಾಲ ಕ್ರಮೇಣ ನಾವು ಮಾತನಾಡಲು ಆರಂಭಿಸಿದಾಗ ನಮ್ಮ ಬಾಯಿಯಲ್ಲಿ ಮೊದಲು ಬರುವ ಪದ ಅಮ್ಮ. ನಾವು ಕೆಳಗೆ ಬಿದ್ದಾಗಲು ನಮ್ಮ ಬಾಯಿಯಲ್ಲಿ ಬರುವುದು ಅಮ್ಮ ಎನ್ನುವ ಪದಬಿಟ್ಟು ಬೇರೆ ಪದಗಳು ಬರುವುದಿಲ್ಲ. ನಮ್ಮೆಲ್ಲರಿಗೂ ಮನೆಯೇ ಮೊದಲ ಪಾಠಶಾಲೆ. ತಾಯಿಯೇ ಮೊದಲ ಗುರು. ನಮ್ಮೆಲ್ಲರಿಗೂ ಒಳ್ಳೆಯ ಆಚಾರ, ವಿಚಾರ, ನಡೆ, ನುಡಿ, ಸಂಸ್ಕೃತಿ ಇವೆಲ್ಲವನ್ನು ತಿಳಿಸಿಕೊಟ್ಟವಳು ತಾಯಿ ಅಮ್ಮ ಎಂದರೆ ಸಾವಿರ ಜನ್ಮವ ಕಳೆದರು ಸಾಲದು ಇವಳ ಋಣ ತೀರಿಸಲು. ಕೋಟಿ ಕೊಟ್ಟರು ಸಿಗದ ಮುತ್ತೆ ತಾಯಿ ಇವಳು ಮಕ್ಕಳು ಎಷ್ಟೇ ಕಷ್ಟ ಕೊಟ್ಟರು ನೊಂದುಕೊಳ್ಳದ ಕರುಣಾಮಯಿ. ಮಕ್ಕಳ ಹೃದಯದಲ್ಲಿ ತನ್ನ ಜೀವ ಕಾಣುವ ಮಹಾತಾಯಿ.

ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ
ಜೆ. ಎಸ್. ಎಸ್. ಮಹಿಳಾ ಕಾಲೇಜು
ಕೊಳ್ಳೇಗಾಲ-571440



ಮಕ್ಕಳಿಗೆ ತನ್ನ ಸರ್ವಸ್ವವನ್ನೇ ಮುಡುಪಾಗಿಡುವ ತ್ಯಾಗಮಯಿ. ಮಕ್ಕಳ ಆಸೆಗಳನ್ನು ಈಡೇರಿಸುವ ಜಗನ್ಮಾಯಿ ಇವಳೇ ತಾಯಿ. ಅಮ್ಮ ಎನ್ನುವ ಪದಕ್ಕಿಂತ ಮಿಗಲಾದ ಪದ ಮತ್ತೊಂದು ಇಲ್ಲ. ಮಕ್ಕಳು ಅಮ್ಮ ಎಂದು ಕರೆಯುವಾಗ ಅಮ್ಮನಿಗೆ ಆಗುವ ಸಂತೋಷ ಯಾರಿಗೂ ಆಗುವುದಿಲ್ಲ. ನಮ್ಮೆಲ್ಲರ ಬಾಳಿಗೆ ಅವಳೇ ದೈವ.

ಹೆತ್ತ ತಾಯಿ ಹೊತ್ತನಾಡು ಸ್ವರ್ಗ ಕ್ಕಿಂತಲು ಮಿಗಿಲು ಎಂದು ಮುಂಚೆಯೇ ಹೇಳಿರುವ ಹಾಗೆ ಅಂದರೆ ಅದು ಹೇಗೆಂದರೆ

ಮಾನಕ್ಕೂ ದೊಡ್ಡದು ಮಣ್ಣಿನ ಋಣ
ಪ್ರಾಣಕ್ಕೂ ದೊಡ್ಡದು ತಾಯಿಯ ಋಣ
ದಾನಕ್ಕೂ ದೊಡ್ಡದು ಅನ್ನದ ಋಣ
ಧ್ಯಾನಕ್ಕೂ ದೊಡ್ಡದು ಅಮ್ಮನ ಋಣ
ಹೂವಿಗೂ ಹಣ್ಣಿಗೂ ಭೂಮಿ ದೇವರು
ನೋವಿಗೂ ನಲುವಿಗೂ ತಾಯಿ ದೇವರು

ಇದೇ ತಾಯಿ ಮತ್ತು ಭೂಮಿ ತಾಯಿಗಿರುವ ವ್ಯತ್ಯಾಸ. ಇವರಿಬ್ಬರಲ್ಲಿ ಯಾರೊಬ್ಬರು ಕಡಿಮೆಯಿಲ್ಲ. ಅವರಿಬ್ಬರು ಸಮಾನರು.

ನಮ್ಮನ್ನು ಹೆತ್ತ ತಾಯಿ ಎಷ್ಟು ಪ್ರೀತಿಸುವಳೋ ನಮ್ಮನ್ನು ಹೊತ್ತಿರುವ ಈ ಭೂಮಿ ತಾಯಿಯು ಅಷ್ಟೇ ನಮ್ಮೆಲ್ಲರನ್ನು ಪ್ರೀತಿಸುತ್ತಾಳೆ. ಅವರಿಬ್ಬರ ಪ್ರೀತಿ ವಾತ್ಸಲ್ಯ ಮಮತೆಗಿಂತ ಮಿಗಿಲಾದದ್ದು ಯಾವುದು ಇಲ್ಲ. ಹಾಗೆಯೇ ಇವರಿಬ್ಬರಿಗಿಂತ ಮಿಗಿಲಾದವರೂ ಸಹ ಯಾರು ಇಲ್ಲ.

ಜನನಿ ಜನ್ಮ ಭೂಮಿಶ್ಚಃ ಸ್ವರ್ಗಾದಪಿ ಗರಿಯಸಿ ಎಂಬ ರಾಮಾಯಣದಲ್ಲಿ ಬಂದಿರುವ ಈ ಶ್ಲೋಕ ತಾಯಿ ಮತ್ತು ಭೂಮಿತಾಯಿಯ ಬಗ್ಗೆ ತಿಳಿಸುತ್ತದೆ. ಆ ತಾಯಿಯ ಶಕ್ತಿ, ನಿಷ್ಠೆ, ಪ್ರೀತಿ ಮಕ್ಕಳ ಬಗೆಗಿನ ಕಾಳಜಿ ಎಷ್ಟಿದೆ ಎಂಬುದು ಮುಖ್ಯ.

## ಬದುಕು–ಸಾವಿನ ನಡುವಿನ ಆಯ್ಕೆ (ಕವನ)

ಬದುಕಲು ಕಾರಣಗಳೇ ಇಲ್ಲದಿರುವಾಗ
ಸಾಯಲು ಸಾವಿರ ಕಾರಣಗಳು
ಮುಗುಳ್ನಗಲು ವಿಷಯವೇ ಇಲ್ಲದಿರುವಾಗ
ಸಾಲುಗಟ್ಟಿ ನಿಂತಿವೆ ವಿಷಯಗಳು ಕಣ್ಣೀರಿಗೆ
ಮನದ ಬೇಗುದಿಗೆ ಕಾರಣವೇ ಬೇಡ
ಇಲ್ಲದಿರುವುದೂ ನೋವ ನೀಡಬಹುದು

ಮತ್ತೆ ಮತ್ತೆ ಇರುವ ಇಲ್ಲದ
ವಿಷಯಗಳನ್ನೆಲ್ಲ ಮೆಲುಕು ಹಾಕಿ
ಅರ್ಥವಾಗದ ಹಳಹಳಿಕೆಗಳನ್ನೆಲ್ಲ
ಪ್ರಯತ್ನ ಪೂರ್ವಕವಾಗಿ ನೆನಪಿಸಿಕೊಂಡು
ಕೊರಗುವ ಪರಿಗೆ 'ಜೀವನ' ಎನ್ನಬೇಕೆ?

ಇಲ್ಲದ ಕಾರಣವನ್ನೇ ಸಾವಿಗಾಗಿ
ಆಹ್ವಾನಿಸಿಕೊಂಡು ಬದುಕನ್ನೇ
ನಿರ್ಲಿಪ್ತವಾಗಿ ಕೊನೆಗಾಣಿಸುವುದು
ಆ ಸಾವಿಗೂ ಶೋಭೆ
ತರಲಾರದೇನೋ..........

ಬದುಕು ಸಾವಿನ ನಡುವೆ
ಆಯ್ಕೆಯ ಪ್ರಶ್ನೆ ಬಂದಾಗಲಂತೂ
ಆಯ್ದುಕೊಳ್ಳಲು
ತಡಕಾಡುವುದಾದರೂ ಏಕೆ?
ಅದು 'ಬದುಕೇ' ಆಗಿರಲಿ.

# ವಿದ್ಯೆಯ ಮಹತ್ವ



ಕಾವ್ಯಶ್ರೀ ಎನ್.
ದ್ವಿತೀಯ ಬಿ.ಎ., ಎಚ್ಇಪಿ

ಆಳುತಿಹ ಭೂಪತಿಯನಾಳುವುದು ವಿದ್ಯೆ
ಧೀರತನವನು ಜಗಕೆ ಬೀರುವುದು ವಿದ್ಯೆ
ಚೋರರಪಹರಿಸಲಾರದ ಧನವು ವಿದ್ಯೆ
ಕಷ್ಟಕಾಲದಲ್ಲಿ ನಮ್ಮನ್ನು ಸಲಹುವುದು ವಿದ್ಯೆ
ಶೀಲವನು ಬೆಳಗಿ ಪರಿಪಾಲಿಸುವುದು ವಿದ್ಯೆ

ವಿದ್ಯೆಯನ್ನು ಕುರಿತು ನಾವು ವೇದಗಳ ಕಾಲದಿಂದಲೂ ತಿಳಿಯುತ್ತಿದ್ದೇವೆ. ವಿದ್ಯೆ ಶಾಶ್ವತಧನ, ಎಲ್ಲಾ ಸಂಪತ್ತುಗಳೂ ನಶ್ವರ, ಬೇಕಾದಾಗ ಬಂದು ಬೇಡವಾದಾಗ ಹೋಗಬಹುದು ಆದರೆ ವಿದ್ಯೆ ಒಮ್ಮೆ ಬಂದ ಮೇಲೆ ಎಂದೆಂದೂ ಹೋಗಲಾರದು. ವಿದ್ಯೆ ಎಂದಿಗೂ ನಿಧನವಾಗದ ಧನ. ಮಕ್ಕಳಿಗೆ ಹುಟ್ಟು ಗುಣವನ್ನು ಸರಿಯಾದ ಅಭ್ಯಾಸಗಳ ಮೂಲಕ ತರಬೇತಿ ನೀಡುವುದೇ ವಿದ್ಯೆ. ಸತತವಾಗಿ ಅನುಭವಗಳ ಪುನರ್‌ವಿಮರ್ಶೆ ಮಾಡುವ ಕಾರ್ಯವೇ ವಿದ್ಯೆ. ಇಡೀ ಸೃಷ್ಟಿಯೇ ನಾಶವಾದರೂ ವಿದ್ಯೆ ನಾಶವಾಗಲಾರದು. ವಿದ್ಯೆಗೆ ಸಮಾನ ವಾದದ್ದು ಲೋಕದಲ್ಲಿ ಬೇರೆ ಇಲ್ಲವೇ ಇಲ್ಲ. ಏಕೆಂದರೆ ವಿದ್ಯೆಯಿಂದ ಅಮೃತತ್ವ ಪ್ರಾಪ್ತಿ ಯಾಗುತ್ತದೆ. ವಿದ್ಯೆಯು ಮನುಷ್ಯನ ಎಲ್ಲಾ ಅನುಭವಗಳನ್ನು ಒಳಗೊಂಡಿರುತ್ತದೆ. ಮಾನವನಿಗೆ ರೂಪ, ಭೋಗ, ಯಶಸ್ಸು ಮತ್ತು ಸುಖ ಸಂಪತ್ತನ್ನು ಕೊಡುತ್ತದೆ. ವಿದ್ಯೆ ಗುರುವಿಗೂ ಗುರು. ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎಂದು ಹಿರಿಯರು ಹೇಳಿದ್ದಾರೆ. ಅದರಂತೆ ವಿದ್ಯೆ ಇಲ್ಲದ ಜನ ಪಶು ಸಮಾನರು. ಮನುಷ್ಯನ ಸಮಗ್ರ ಬೆಳವಣಿಗೆಯೇ ವಿದ್ಯೆ. ವಿದ್ಯೆ ವಿನಯವನ್ನು ಕೊಡುತ್ತದೆ. ವಿನಯದಿಂದ ಗೌರವ ಉಂಟಾಗುತ್ತದೆ. ಸತ್ಪಾತ್ರನಿಗೆ ಎಲ್ಲರೂ ಧನ ನೀಡುತ್ತಾರೆ. ಧನದಿಂದ ಧರ್ಮ, ಧರ್ಮದಿಂದ ಕೀರ್ತಿ, ಕೀರ್ತಿಯಿಂದ ಭಯಭಕ್ತಿ, ಭಕ್ತಿಯಿಂದ ಮುಕ್ತಿ, ಮುಕ್ತಿಯಿಂದ ಮೋಕ್ಷ ದೊರೆಯುತ್ತದೆ.

ಆಧ್ಯಾತ್ಮಿಕ, ಮಾನಸಿಕ, ಬೌದ್ಧಿಕ, ನೈತಿಕ ವಿಷಯಗಳಲ್ಲಿ ಪರಿಪೂರ್ಣವಾಗಿ ಚೈತನ್ಯವನ್ನು ವ್ಯಕ್ತಿಗಳಲ್ಲಿ ಸಿದ್ಧಗೊಳಿಸುವುದೇ ವಿದ್ಯೆಯ ಗುರಿ. ವ್ಯಕ್ತಿಯ ಜೀವನದಲ್ಲಿ ಸದಾಚಾರವನ್ನೂ, ಒಳ್ಳೆಯ ನಡವಳಿಕೆಯನ್ನು, ಸನ್ಮಾರ್ಗವನ್ನು ಹಾಕಿಕೊಡು ವುದು ವಿದ್ಯೆ. ನೈತಿಕ ಹಾಗೂ ಆಧ್ಯಾತ್ಮಿಕ ವಿಷಯಗ ಳಲ್ಲಿ ಸತ್ಪಾತ್ರವನ್ನು ವಹಿಸುವುದೇ ವಿದ್ಯೆಯ ಉದ್ದೇಶ.

ಶಾಂತಿಯುತ ಸಹ ಜೀವನವನ್ನು ನೆಲೆಗೊಳಿಸಲು ಅವಶ್ಯ ಇರುವ ಪರಸ್ಪರ ತಿಳುವಳಿಕೆ ಯನ್ನು ಬೆಳೆಸುವುದು ವಿದ್ಯೆ.

ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಕಾರಣೀಭೂತವಾದುದೇ ನಿಜವಾದ ವಿದ್ಯೆ. ಇಂದಿನ ವಿದ್ಯಾರ್ಥಿಯ ಆಲೋಚನಾಶಕ್ತಿಯನ್ನು ವೃದ್ಧಿಸು ವಲ್ಲಿ ವಿದ್ಯೆಯು ಪ್ರಮುಖ ಸ್ಥಾನ ಪಡೆದಿದೆ. ನಾವು ಕಲಿಯುವ ವಿಷಯಗಳಿಗೂ ಸಾಮಾಜಿಕ ಸಮಸ್ಯೆ ಗಳಿಗೂ ಸಾಮರಸ್ಯವನ್ನುಂಟು ಮಾಡುವುದು ವಿದ್ಯೆ. ವಿಶ್ವದ ಅನೇಕ ರಾಷ್ಟ್ರಗಳು ಶಿಕ್ಷಣ ಕ್ಷೇತ್ರದಲ್ಲಿ ತ್ವರಿತ ಬೆಳವಣಿಗೆಯನ್ನು ಪಡೆಯಲು ವಿದ್ಯೆಯೇ ಮೂಲಕಾರಣ.

**ಸರ್ವಜ್ಞ ಹೇಳಿದಂತೆ**

ವಿದ್ಯೆವುಳ್ಳವನ ಮುಖವು ।
ಮುದ್ದು ಬರುವಂತಿಕ್ಕು
ವಿದ್ಯೆ ಇಲ್ಲದವನ ಬರಿ ಮುಖವ
ಹಾಳೂರ। ಹದ್ದಿನಂತಿಕ್ಕು ಸರ್ವಜ್ಞ

ಅಲ್ಲದೇ

॥ ಗುರುಬ್ರಹ್ಮಃ ಗುರುವಿಷ್ಣು
ಗುರುದೇವೋ ಮಹೇಶ್ವರಃ

ಗುರುಸಾಕ್ಷಾತ್ ಪರಬ್ರಹ್ಮ
ತಸ್ಮೈಶ್ರೀ ಗುರವೇ ನಮಃ ॥

ಎಂಬಂತೆ ಶಿಕ್ಷಣ ಪದ್ಧತಿಯಲ್ಲಿ ಗುರುವು ಅತಿ ಪ್ರಭಾವಶಾಲಿಯಾದ ವ್ಯಕ್ತಿ. ಆತನಿಗೆ ಸಮಾಜದಲ್ಲಿಯೂ ವಿದ್ಯಾರ್ಥಿಗಳಲ್ಲಿಯೂ ಹಾಗೂ ತಂದೆ-ತಾಯಿಗಳಲ್ಲಿಯೂ ಗೌರವವಿದೆ. ಅಲ್ಲದೆ ಪೋಷಕರ ಮಾತಿಗಿಂತಲೂ, ಶಾಲಾ ಉಪಾಧ್ಯಾಯರ ಮಾತಿಗೆ ಬೆಲೆ ಅಧಿಕ. ಶಿಕ್ಷಕರು ವಿದ್ಯಾರ್ಥಿಗಳನ್ನು ತಿದ್ದಿ ತೀಡುವ ಮತ್ತು ಬೆಳೆಸಲು ಬಹಳ ಶ್ರಮಿಸುವವರು. ಅಧ್ಯಾಪಕ ಮತ್ತು ವಿದ್ಯಾರ್ಥಿಗಳ ನಡುವೆ ನಿಕಟವಾದ ಬಾಂಧವ್ಯವಿರುತ್ತದೆ. ವಿದ್ಯಾರ್ಥಿಗಳು ಯಾವಾಗಲೂ ಕ್ರಿಯಾತ್ಮಕ ಚಟುವಟಿಕೆಗಳ ಕಡೆಗೆ ಆಸಕ್ತಿ ತೋರಿಸಬೇಕು. ದೇಶದ ಹಾಗೂ ಸಮಾಜದ ಉನ್ನತಿಗೆ ಸಹಾಯಕವಾಗುವಂತಹ ವಿಚಾರ ಹಾಗೂ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು. ವಿದ್ಯಾರ್ಥಿಯು ಕಲಿಯುವ ಕಲೆ ಯಾವುದೇ ಆಗಿರಲಿ ಅಂದರೆ ನಾಟ್ಯಕಲೆ, ಚಿತ್ರಕಲೆ, ಸಂಗೀತಕಲೆ, ನಾಟಕ ರಂಗ, ವಾಕ್‌ಚಾತುರ್ಯ, ಜನಪದ ಶೈಲಿ, ಕ್ರೀಡಾರಂಗ, ವ್ಯಾಸಂಗ, ಲೌಕಿಕ, ಆಧ್ಯಾತ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ, ಮುಂತಾದ ಯಾವುದೇ ಅಂಶಗಳಲ್ಲಿ ತನ್ನದೇ ಆದ ವಿಶೇಷತೆಯನ್ನು ಪಡೆದುಕೊಳ್ಳುವ ಸಾಮರ್ಥ್ಯ ಉಂಟು ಮಾಡುವುದೇ ವಿದ್ಯೆ. ಆದ್ದರಿಂದಲೇ ವಿದ್ಯೆ ಕಲಿತವ ಜಗತ್ತಿನಲ್ಲಿ ಎಲ್ಲೆಂದರಲ್ಲಿ ನೆಮ್ಮದಿಯಿಂದ ಬದುಕಬಲ್ಲ. ಆ ಸಾಮರ್ಥ್ಯವನ್ನು ವಿದ್ಯೆ ಕಲ್ಪಿಸಿಕೊಡುತ್ತದೆ.

ವಿದ್ಯೆ ಆತ್ಮಶಕ್ತಿಯ ದಯಪಾಲಿಸುತ್ತದೆ. ಈ ಕಾರಣಕ್ಕಾಗಿ ನಮ್ಮ ಧಾರ್ಮಿಕ ಸಂಸ್ಥೆಗಳು, ವಿದ್ಯಾಭ್ಯಾಸದ ಕಡೆ ಹೆಚ್ಚು ಆದ್ಯತೆಯನ್ನು ಕೊಟ್ಟರೆ ಯಾವುದೇ ದೇಶ ಶೀಘ್ರಗತಿಯಲ್ಲಿ ಪ್ರಗತಿಯ ಸಾಧಿಸಬಲ್ಲದು.

ಈ ಹಿನ್ನಲೆಯಲ್ಲಿ ನೋಡಿದಾಗ "ವಿದ್ಯೆ ಸರ್ವಸ್ವಸಾಧನ" ಎಂಬ ಲೋಕ ಸೂಕ್ತಿಯ ಅರಿವು ನಮಗೆ ಉಂಟಾಗುತ್ತದೆ. ಅಂತೆಯೇ ದಾನದಾನಗಳಲ್ಲೆಲ್ಲ ವಿದ್ಯಾದಾನವೇ ಶ್ರೇಷ್ಠವಾದುದು ಎಂಬ ಮಾತು ಅಕ್ಷರಶಃ ಸತ್ಯ ಅಷ್ಟರಮಟ್ಟಿಗೆ ವಿದ್ಯೆ ಮಾನವನ ಜೀವನದಲ್ಲಿ ಮಹತ್ತರ ಪಾತ್ರವನ್ನು ವಹಿಸಿದೆ. ಅಷ್ಟೇ ಅಲ್ಲದೆ ಯಾರಿಂದಲೂ ಕಸಿದುಕೊಳ್ಳಲಾಗದ ಅಪೂರ್ವ ಸಂಪತ್ತು.

## ನನ್ನಳಲ ಕೇಳೆ ನನ್ನಮ್ಮ

ಅವ್ವ............ನಾ ಕಂಡ ಕನಸ್ಸೆಲ್ಲಾ ಚೂರಾಯ್ತಲ್ಲೆ
ಎದೆಯೊಳಗೆ ಏನೇನ ಆಸೆ
ತುಂಬಿಟ್ಟಿದೆ ನಲ್ಲೆ
ಆಸೆಯಲ್ಲಾ ನಿರಾಸೆಯಾಯಿತಲ್ಲೆ
ಹೆಣ್ಣಾಗಿ ಭೂಮೀಲಿ ಹುಟ್ಟಿದ್ದು ತಪ್ಪೆ?
ಅಲ್ಲ ಆ ದೇವ್ರು ಸೃಷ್ಟಿಸಿದ್ದೇ ತಪ್ಪೆ?
ನೀನೆ ಹೇಳು...

ನನ್ನಾಸೆ ಏನೆಂದು ಕೇಳದೆ
ನನ್ನ ಕನಸ್ಸನ್ನೆಲ್ಲಾ ಚೂರು ಮಾಡಿದರೆಲ್ಲೆ
ನಾನು ನಿನ್ನಂತೆ ಹೆಣ್ಣು ಕಾಣವ್ವ
ನನಗೂ ತನ್ನದೇ ಆಸೆ ಆಕಾಂಕ್ಷೆ ಇದೆ
ಯಾವುದನ್ನು ತಿಳಿಯದೇ ನನ್ನ
ಹಗಲು ಕಂಡ ಬಾವಿಗೆ
ಇರುಳು ತಳ್ಳಿದರಲ್ಲೇ...

ನಾ ನಿನ್ನ ಮಗಳಾಗಿ ಹುಟ್ಟಿದ್ದೆ ತಪ್ಪೆ?
ಮುದ್ದಾದ ಗಿಣಿಯಾಂಗೆ ಸಾಕಿ
ಕೊನೆಗೊಂದು ಗಿಡುಗನ ಕೈಗೆ ಕೊಟ್ಟೆ
ಬಾಳಲಿ ಸುಖ ಎಂಬ ವೀಣೆ
ಮರಳುಗಾಡಲ್ಲಿ ನೀರುಹುಡುಕಿದಾಂಗಾಯ್ತು ಕಾಣೆ
ಈ ನನ್ನ ಕಷ್ಟ ಜಗದಾಗಿನ
ಬ್ಯಾರೆ ಹೆಣ್ಣಿಗೆ ಬಾರದಿರಲವ್ವ
ನಾನುಂಡ ನೋವು ದುಃಖ
ಇನ್ಯಾರಿಗೂ ಬರದಿರಲಿ ಅವ್ವ......
ನಾ ಕಟ್ಟಿದ ಕನಸಿನ ಗೋಪುರ
ನೆಲೆ ಕಚ್ಚಿ ಹೋಯಿತಲ್ಲೆ
ನೀ ಕಟ್ಟಿದ ನೂರಾಸೆ
ನನಕಂದ ರಾಣ್ಯಾಗೆ ಮೆರಿಲಿಂತ
ಬಾಳಲ್ಲಿ ಆಕೆ ನಲಿಬೇಕಂತೆ
ಅದೀಗ ಹೊಳೆಯಾಗೆ ಹುಣಸೆ ತೇದಗಾಯ್ತಲ್ಲೆ......

# ಗಣಿತಜ್ಞ ವರಾಹಮಿಹಿರ



**ದೀಪು ಎಂ.**
ತೃತೀಯ ಬಿ.ಕಾಂ.

ವರಾಹಮಿಹಿರ ಭಾರತೀಯ ಶ್ರೇಷ್ಠ ಗಣಿತಜ್ಞ ಹಾಗೂ ಖಗೋಳಶಾಸ್ತ್ರಜ್ಞ, ಆವಂತಿ ದೇಶದ ಮಾಳವ ಎಂಬಲ್ಲಿ ಖಗೋಳಶಾಸ್ತ್ರಜ್ಞ ಆದಿತ್ಯದಾಸರ ಮಗನಾಗಿ ಜನಿಸಿದ. ಕಪಿತ್ತಕ ಎಂಬಲ್ಲಿ ವಿದ್ಯಾಭ್ಯಾಸ ಪಡೆದು ಯಶೋವರ್ಮನ ಆಸ್ಥಾನದ ನವರತ್ನ ಗಳಲ್ಲಿ ಒಬ್ಬನಾಗಿದ್ದ.

ವರಾಹಮಿಹಿರ ಕೊಟ್ಟಿರುವ ಪಂಚ ಸಿದ್ಧಾಂತಗಳಲ್ಲಿ "ಸೂರ್ಯ ಸಿದ್ಧಾಂತ" ಇಂದಿಗೂ ಖಗೋಳಶಾಸ್ತ್ರ ಅಭ್ಯಾಸ ಮಾಡುವವರಿಗೆ ಕೈಗನ್ನಡಿಯಾಗಿದೆ. ಪಂಚಾಂಗದಲ್ಲಿ ತಿಥಿ, ವಾರ, ನಕ್ಷತ್ರ, ಯೋಗ, ಕರಣ ಈ ಅಂಗಗಳ ಬಗ್ಗೆ ಮಾಹಿತಿ ನೀಡಿದವ ವರಾಹಮಿಹಿರ. ಆಕಾಶದಲ್ಲಿನ ಗ್ರಹಗಳ ಮತ್ತು ನಕ್ಷತ್ರಗಳ ಚಲನೆ ಬಗ್ಗೆ ಅಭ್ಯಾಸ ಮಾಡಲು ಹಾಗೂ ವೀಕ್ಷಣಾಲಯಗಳನ್ನು ನಿರ್ಮಿಸುವ ಬಗ್ಗೆ ವಿವರವಾದ ಮಾಹಿತಿಯು ವರಾಹಮಿಹಿರನ 'ಸೂರ್ಯ ಸಿದ್ಧಾಂತ'ದಲ್ಲಿ ದೊರೆಯುತ್ತವೆ.

'ಪಂಚ ಸಿದ್ಧಾಂತಿಕ' ಎಂಬುದು ಅವನ ಪ್ರಮುಖ ಸಿದ್ಧಾಂತ. ಇದು ಅನೇಕ ಖಗೋಳಶಾಸ್ತ್ರದ ತುಣುಕುಗಳನ್ನು ಹೊಂದಿದ ಸಿದ್ಧಾಂತ ಗ್ರಂಥ ವಾಗಿದೆ. 'ಬೃಹತ್ ಸಂಹಿತೆ' ಸಹ ವರಾಹಮಿಹಿರ ಅವನ ಕೊಡುಗೆಗಳಲ್ಲೊಂದು. ಇದನ್ನು ಬೃಹತ್ ವಿಶ್ವಕೋಶ ಎನ್ನಬಹುದು. ಇದು ಪಂಚಾಂಗ, ಭೂಗೋಳಶಾಸ್ತ್ರ, ಖಗೋಳಶಾಸ್ತ್ರ, ಸಸ್ಯ ಮತ್ತು ಪ್ರಾಣಿಶಾಸ್ತ್ರ, ಕಾಮಶಾಸ್ತ್ರ, ರತ್ನ ಶಾಸ್ತ್ರ, ವ್ಯವಸಾಯ, ಮೋಡ, ಮಳೆ, ಬೆಳೆಗಳ ಬೆಳವಣಿಗೆ, ಸುಗಂಧ ದ್ರವ್ಯಗಳ ತಯಾರಿಕೆ, ಮುತ್ತು, ರತ್ನ ಹಾಗೂ ಮದುವೆ, ಮುಂಜಿಯಂತಹ ಶುಭ ಕಾರ್ಯಗಳ ಜ್ಯೋತಿಷ್ಯಶಾಸ್ತ್ರಗಳು, ತ್ರಿಕೋನ ಮಿತಿಯ ಕೊಡುಗೆಗಳು ಈ ಗ್ರಂಥದಲ್ಲಿದೆ.

ಭೂಮಿಯ ಕುರಿತು ವರಾಹಮಿಹಿರನಿಗೆ ಸ್ಪಷ್ಟ ಅಭಿಪ್ರಾಯಗಳಿದ್ದವು

ಭೂಮಿಯು ಗೋಲಾಕಾರದಲ್ಲಿದ್ದು, ಪಂಚಭೂತಗಳಿಂದ ನಿರ್ಮಾಣಗೊಂಡಿದೆ. ಹಾಗೂ ಆಯಸ್ಕಾಂತ ಶಕ್ತಿ ಹೊಂದಿದ್ದು ಆಕಾಶದಲ್ಲಿ ಚೆಂಡಿನಂತೆ ತೇಲಾಡುತ್ತದೆ ಎಂದು ಹೇಳಿದ್ದಾರೆ. ಅಲ್ಲದೇ ಗ್ರಹಣಗಳು, ಭೂಕಂಪನಗಳ ಬಗ್ಗೆ ಸಾಕಷ್ಟು ಮಾಹಿತಿಯನ್ನು ನೀಡಿದ್ದಾರೆ. ವರಾಹಮಿಹಿರ ತಾನು ಕಂಡ ಸತ್ಯವನ್ನು ಹೇಳಿದ್ದಾನೆಯೇ ಹೊರತು ತಾನು ಓದಿದ ತತ್ವಗಳನ್ನಲ್ಲ. ಹಾಗಾಗಿ ಓದುಗನಿಗೆ ಎಲ್ಲೂ ತೊಡಕಾಗುವುದಿಲ್ಲ. ಇಂತಹ ಒಬ್ಬ ಮಹಾನ್ ಗಣಿತಜ್ಞ ಭಾರತೀಯ ಎಂಬುದೆ ನಮ್ಮ ಹೆಮ್ಮೆ.

## ಪ್ರೀತಿ

**ಮನದಾಳದ ಮಾತೆ ಪ್ರೀತಿ**
**ಮೌನದ ಆಳ ಪ್ರೀತಿ**
**ವಿಶ್ವಾಸದ ಮರ ಪ್ರೀತಿ**
**ಸ್ನೇಹದ ಹೆಸರು ಪ್ರೀತಿ**
**ಮರೆಯದ ನೆನಪೇ ಪ್ರೀತಿ**
**ಸುಂದರ ಕವನ ಪ್ರೀತಿ**
**ದಡವಿಲ್ಲದ ಸಮುದ್ರ ಪ್ರೀತಿ**
**ಮುಗಿಯದ ಕಥೆ ಪ್ರೀತಿ**
**ಪ್ರೀತಿ ಪ್ರೀತಿಗಾಗಿ ಪ್ರೀತಿಸುತ್ತದೆ.**

# ಭಾಷಣ ಕಲೆ ರೂಢಿಸಿಕೊಳ್ಳಿ



ಅಂಜು ಎಸ್.
ದ್ವಿತೀಯ ಬಿ.ಎ., ಹೆಚ್ಇಜಿ

### ಉತ್ತಮ ಭಾಷಣಕಾರ

ಭಾಷಣವೇನು ಯಾರೂ ಬೇಕಾದರೂ ಮಾಡಬಹುದು ವೇದಿಕೆ ಮೇಲೆ ನಿಂತು ಮಾತನಾಡುವುದು ಅತ್ಯಂತ ಸುಲಭದ ಕೆಲಸವೆಂಬುದು ಹಲವರ ಅಭಿಪ್ರಾಯ. ಆದರೆ ನಾಲ್ಕು ಜನರನ್ನುದ್ದೇಶಿಸಿ ಮಾತನಾಡುವುದು ಎಂದರೆ ಗೆಳೆಯರೋ ಅಥವಾ ಇನ್ನಾರದ್ದೋ ಜೊತೆ ಲೋಕಾಭಿರಾಮವಾಗಿ ಹರಟುವುದಲ್ಲ. ಹಾಗೆ ಹರಟುವುದು ಭಾಷಣವೂ ಅಲ್ಲ. ಭಾಷಣವೆಂದರೆ ಯಾವುದೋ ವಿಷಯದ ಬಗ್ಗೆ ಗಂಭೀರವಾಗಿ ಹಲವರನ್ನುದ್ದೇಶಿಸಿ ಮಾತನಾಡುವುದು. ಮಾತನಾಡುವ ವ್ಯಕ್ತಿಗೆ ಆ ವಿಷಯದ ಬಗ್ಗೆ ಆಳ ಜ್ಞಾನವಿರಬೇಕು. ಆದ್ದರಿಂದ ಭಾಷಣವೂ ಒಂದು ಕಲೆ. ಭಾಷಣಕಾರ ವೇದಿಕೆ ಮೇಲೆ ಹೇಗೆ ನಿಲ್ಲುತ್ತಾನೆ ಎಂಬುದರಿಂದ ಹಿಡಿದು ಭಾಷಣ ಆದಿ, ವಿಷಯ ಮತ್ತು ಭಾಷಣದ ಮೇಲೆ ಆತನಿಗಿರುವ ಹಿಡಿತ, ಜ್ಞಾನ, ಆತ್ಮವಿಶ್ವಾಸ, ನಿರರ್ಗಳ ಮಾತು. ಶಬ್ದಗಳ ಉಚ್ಚಾರ, ಧ್ವನಿ ಏರಿಳಿತ, ಸಮಯಪ್ರಜ್ಞೆ ಸಾಮಾನ್ಯ ಜ್ಞಾನ ಮಾತನಾಡುವಾಗ ಆತನ ಹಾವ-ಭಾವ ಹೀಗೆ ಪ್ರತಿಯೊಂದು ಗಣನೆಗೆ ಬರುತ್ತದೆ. ಇದು ಕೆಲವರಿಗೆ ಜನ್ಮತಃ ಬಂದರೆ, ಮತ್ತೆ ಕೆಲವರು ಹೆಚ್ಚೆಚ್ಚು ಓದಿ ಅರ್ಥೈಸಿಕೊಂಡು ಸತತ ಪರಿಶ್ರಮದ ಅಭ್ಯಾಸದ ಬಲದಿಂದ ತಮ್ಮದಾಗಿಸಿಕೊಳ್ಳುತ್ತಾರೆ.

### ಪರಿಣಾಮಕಾರಿ ಮಾತು

ಕೆಲವರಿಗೆ ವೇದಿಕೆ ಏರಿದಾಕ್ಷಣ ಒಂದು ರೀತಿಯ ಭಯ, ನಡುಕ, ಮಾತು ತೊದಲುವುದು, ಬೆವರುವುದು, ಹೆಚ್ಚು ಉಗುಳು ನುಂಗುವುದು, ಗಂಟಲು ಕಟ್ಟುವುದೆಲ್ಲ ಶುರುವಾಗುತ್ತದೆ. ಇದನ್ನೇ ಸ್ಟೇಜ್‌ಫಿಯರ್ ಎಂದು ಕರೆಯುತ್ತಾರೆ. ಇಂತಹವರು ಗುಂಪಿನಲ್ಲಿ ಮಾತನಾಡಲು ಸಹ ಹಿಂಜರಿಯುತ್ತಾರೆ. ಭಾಷಣಕಾರನಿಗೆ ಶೋತೃಗಳನ್ನು ತನ್ನ ಶಬ್ದಗಳಲ್ಲೇ ಸೆಳೆಯುವ ಶಕ್ತಿಯಿರಬೇಕು. ಆಗ ಜನ ಅವನು ಗಂಟೆಗಟ್ಟಲೆ ಮಾತನಾಡಿದರೂ ಬೇಸರಿಸಿಕೊಳ್ಳದೆ ಖುಷಿಯಿಂದ ಕೇಳುತ್ತಾರೆ. ಬದಲಾಗಿ ಸ್ಟೇಜ್ ಫಿಯರ್ ಇದ್ದು ವಿಷಯದ ಬಗೆಗೆ ಕಿಂಚಿತ್ತು ಜ್ಞಾನವಿಲ್ಲದೆ ಮಾತನಾಡಿದರೂ ನೀವು ಜನರನ್ನು ಆಕರ್ಷಿಸುವಲ್ಲಿ ವಿಫಲರಾದಿರಿ ಎಂದೇ ಅರ್ಥ. ಆದ್ದರಿಂದ ಭಾಷೆಯಿಂದ ಪ್ರಾರಂಭದಲ್ಲಿ ಅಗತ್ಯವೆನ್ನಿಸಿದಾಗ ಮಧ್ಯಭಾಗದಲ್ಲಿ ಅಥವಾ ಮುಕ್ತಾಯದ ಭಾಗದಲ್ಲಿ ಸೂಕ್ತವಾದ ಉಕ್ತಿಗಳು, ವಚನಗಳು ಹಾಗೂ ಚುಟಕುಗಳನ್ನು ಬಳಸಿಕೊಳ್ಳುವುದರ ಮೂಲಕ ಭಾಷಣವನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿಸಬಹುದು. ಕೆಲವು ನಿರ್ದಿಷ್ಟ ವಿಷಯಗಳಿಗೆ ಪ್ರಸ್ತುತವಾಗಿ ಕಣ್ಣೆದುರೆ ನಡೆಯುತ್ತಿರುವ ಘಟನೆಯನ್ನು ಉದಾಹರಣೆಯನ್ನಾಗಿ ನೀಡಿ ಹೇಳುವುದರಿಂದ ವಿಷಯವನ್ನು ಅರ್ಥೈಸಬಹುದು.

### ಕಲಿಯಿರಿ

- ಭಾಷಣವೂ ಒಂದು ಕಲೆ. ಅದನ್ನು ರೂಢಿಸಿಕೊಳ್ಳಿ
- ಹೆಚ್ಚೆಚ್ಚು ಓದಿ, ಅದನ್ನು ಆತ್ಮವಿಶ್ವಾಸದಿಂದ ತಪ್ಪಿಲ್ಲದಂತೆ ನಾಲ್ಕು ಜನರಿಗೆ ಹೇಳಲು ಪ್ರಯತ್ನಿಸಿ
- ಶಾಲೆ ಕಾಲೇಜು, ಸಂಘ-ಸಂಸ್ಥೆಗಳು ಏರ್ಪಡಿಸುವ ಚರ್ಚಾಸ್ಪರ್ಧೆ, ಭಾಷಣ ಸ್ಪರ್ಧೆಗಳಲ್ಲಿ ತಪ್ಪದೇ ಸ್ಪರ್ಧಿಸಿ.
- ಸಮಯಪ್ರಜ್ಞೆ ಸಾಮಾನ್ಯ ಜ್ಞಾನ ಬಹಳ ಮುಖ್ಯ ಎಂಬುದು ನೆನಪಿರಲಿ
- ಮಾತನಾಡುವಾಗಿನ ನಮ್ಮ ಹಾವ-ಭಾವ ನೋಡಿಕೊಳ್ಳಲು ಕನ್ನಡಿ ಎದುರು ನಿಂತು ಅಭ್ಯಾಸ ಮಾಡಿ.
- ಭಾಷೆ ಶಬ್ದಗಳ ಮೇಲೆ ಹಿಡಿತ, ಸ್ಪಷ್ಟ ಉಚ್ಚಾರಣೆ ಧ್ವನಿಯಲ್ಲಿ ಏರಿಳಿತವಿರಲಿ.
- ಭಾಷಣದ, ಆದಿ, ಅಂತ್ಯ ಭಾಗದಲ್ಲಿ ಸೂಕ್ತ ಉಕ್ತಿಗಳು ಚುಟಕು ಗಾದೆ ವಚನಗಳನ್ನು ಪ್ರಾಸಪದಗಳನ್ನು ಬಳಸಿ.

# ಸ್ವಾಮಿ ವಿವೇಕಾನಂದ



**ರಶ್ಮಿ ಡಿ.**
ತೃತೀಯ ಬಿ.ಎ., ಹೆಚ್‌ಇಪಿ

ಭಾರತದ ಅತ್ಯಂತ ಪ್ರಸಿದ್ಧ ಮತ್ತು ಪ್ರಭಾವ ಶಾಲಿ ತತ್ವಜ್ಞಾನಿಗಳಲ್ಲಿ ಒಬ್ಬರು. ನಿರ್ಭಯತೆ, ಆಶಾವಾದ ಮತ್ತು ಸಾಮಾಜಿಕ ಸಮಸ್ಯೆಗಳ ಬಗೆಗಿನ ವಿಶಾಲದೃಷ್ಟಿಯ ಸಂಕೇತವಾಗಿ ಅವರು ಪರಿಣಿತ ರಾಗಿದ್ದಾರೆ. ಸ್ವಾಮಿ ವಿವೇಕಾನಂದರ ಜನ್ಮ ದಿನವಾದ ಜನವರಿ 12ರಂದು ರಾಷ್ಟ್ರೀಯ ಯುವದಿನವೆಂದು ಆಚರಿಸಲಾಗುತ್ತದೆ.

ವಿವೇಕಾನಂದರ ಪೂರ್ಣ ಹೆಸರು ನರೇಂದ್ರನಾಥದತ್ತ. ಇವರು 1863 ಜನವರಿ 12ರಂದು ಕಲ್ಕತ್ತದಲ್ಲಿ ಜನಿಸಿದರು. ತಂದೆ ವಿಶ್ವನಾಥದತ್ತ. ತಾಯಿ ಭುವನೇಶ್ವರಿದೇವಿ. ಶ್ರೀ ರಾಮಕೃಷ್ಣ ಪರಮಹಂಸರ ಶಿಷ್ಯರಾದಮೇಲೆ ವಿವೇಕಾನಂದ ಎಂಬ ಹೆಸರನ್ನು ಪಡೆದರು. ಕಲ್ಕತ್ತದ ಸ್ಕಾಟಿಷ್ ಚರ್ಚ್ ಕಾಲೇಜಿನಲ್ಲಿ ತತ್ವಶಾಸ್ತ್ರ ಅಧ್ಯಯನ ಮಾಡಿದರು.

ನರೇಂದ್ರರಿಗೆ ರಾಮಕೃಷ್ಣರ ಮೊದಲ ಪರಿಚಯ ವಿಲಿಯವಮ್ ಹೆಸ್ಟಿಯವರ ತರಗತಿಯಲ್ಲಿ ಹೆಸ್ಟಿಯವರು ವಿಲಿಯಮ್ ವರ್ಡ್ಸ್‌ವರ್ತ್ ಅವರ "ದ ಎಕ್ಸ್‌ಕರ್ಶನ್" ಎಂಬ ಕವಿತೆಯಲ್ಲಿನ 'ಸಮಾಧಿ' ಪದವನ್ನು ವಿವರಿಸುವಾಗ ಸಮಾಧಿಯ ನಿಜವಾದ ಅರ್ಥ ತಿಳಿಯಲು ದಕ್ಷಿಣೇಶ್ವರದ ರಾಮಕೃಷ್ಣರ ನ್ನೊಮ್ಮೆ ಭೇಟಿ ನೀಡಿ ಎಂದು ಸಲಹೆ ಇತ್ತರು. ಇವರ ಸಲಹೆಯ ಮೇರೆಗೆ ಹಲವಾರು ವಿದ್ಯಾರ್ಥಿಗಳು ರಾಮಕೃಷ್ಣರನ್ನು ನೋಡಲು ಉತ್ಸುಕರಾದರು. ಅವರಲ್ಲಿ ನರೇಂದ್ರರು ಒಬ್ಬರು.

1881 ಇಸವಿ ನವೆಂಬರ್‌ನಲ್ಲಿ ಎಫ್.ಎ. (ಲಲಿತಕಲೆ) ಪರೀಕ್ಷೆ ಬರೆಯಲು ತಯಾರಿ ನಡೆಸುತ್ತಿದ್ದಾಗ ರಾಮಚಂದ್ರದತ್ತರು. ರಾಮಕೃಷ್ಣರು ಪ್ರವಚನ ನಡೆಸುತ್ತಿದ್ದರು. ಸುರೇಂದ್ರನಾಥ ಮಿತ್ರರ ಮನೆಗೆ ಕರೆದರು. ಅಲ್ಲಿ ರಾಮಕೃಷ್ಣರು ನರೇಂದ್ರನಿಗೆ ಹಾಡಲು ಕೇಳಿಕೊಂಡರು. ಅವರ ಗಾಯನ ಪ್ರತಿಭೆಯನ್ನು ಮೆಚ್ಚಿ ರಾಮಕೃಷ್ಣರು ನರೇಂದ್ರನನ್ನು ದಕ್ಷಿಣೇಶ್ವರಕ್ಕೆ ಬರಲು ಆಮಂತ್ರಿಸಿದರು. ಆದರೆ ನರೇಂದ್ರರು ಅವರ ಬಗ್ಗೆ ಉತ್ಸಾಹ ತೋರಿಸಲಿಲ್ಲ.

1882ರಲ್ಲಿ ನರೇಂದ್ರರು ತನ್ನ ಇಬ್ಬರು ಗೆಳೆಯರೊಂದಿಗೆ ರಾಮಕೃಷ್ಣರನ್ನು ಭೇಟಿಮಾಡಲು ದಕ್ಷಿಣೇಶ್ವರಕ್ಕೆ ಹೋದರು. ರಾಮಕೃಷ್ಣರ ಆ ಭೇಟಿ ಅವರ ಜೀವನಕ್ಕೆ ಮಹತ್ವದ ತಿರುವನ್ನ ಕೊಟ್ಟಿತು. ಆದರೂ ನರೇಂದ್ರರು ರಾಮಕೃಷ್ಣರನ್ನು ಗುರುಗಳನ್ನಾಗಿ ಒಪ್ಪಿಕೊಳ್ಳಲಿಲ್ಲ. ರಾಮಕೃಷ್ಣರ ಆಲೋಚನೆಗಳನ್ನು ಒಪ್ಪಿಕೊಳ್ಳದಿದ್ದರೂ ಅವರ ಮಗುವಿನಂಥ ವ್ಯಕ್ತಿತ್ವ ಅವರನ್ನು ಪದೇ ಪದೇ ದಕ್ಷಿಣೇಶ್ವರಕ್ಕೆ ಭೇಟಿ ನೀಡಲು ಪ್ರೇರೇಪಿಸಿತು. ಮೊದಮೊದಲಿಗೆ ರಾಮಕೃಷ್ಣರ ಭಾವಪರವಶತೆಯ ಮತ್ತು ದೂರದೃಷ್ಟಿಯನ್ನು ಕೇವಲ ಕಾಲ್ಪನಿಕ ಬರಿ ಭ್ರಮೆ ಎಂದು ಭಾವಿಸಿದ್ದರು.

1884 ಇಸವಿಯಲ್ಲಿ ಅನಿರೀಕ್ಷಿತವಾಗಿ ನರೇಂದ್ರರ ತಂದೆಯವರು ಇಹಲೋಕ ತ್ಯಜಿಸಿದರು. ಅವರ ಮರಣಾನಂತರ ಕುಟುಂಬ ದಿವಾಳಿಯಾಯಿತು. ಸಾಲಗಾರರ ಬಾಧೆ ಶುರುವಾಯಿತು. ಅವರ ಕುಟುಂಬದವರು ಪೂರ್ವಜರು ಮನೆಯಿಂದ ಹೊರಗೆ ಹಾಕಿದರು. ಅವರು ಕೆಲಸ ಹುಡುಕುವುದ ರಲ್ಲಿ ವಿಫಲರಾದಾಗ ದೇವರ ಅಸ್ತಿತ್ವದ ಬಗ್ಗೆಯೇ ಸಂದೇಹಪಟ್ಟರು. ಆದರೆ ರಾಮಕೃಷ್ಣರ ಸಾನಿಧ್ಯ ಅವರಿಗೆ ಸಾಂತ್ವನ ನೀಡುತ್ತಿತ್ತು.

ಒಂದು ದಿನ ನರೇಂದ್ರರು ಅವರ ಕುಟುಂಬದ ಅಭ್ಯುದಯಕ್ಕೋಸ್ಕರ ಕಾಳಿದೇವಿ ಯನ್ನು ಪ್ರಾರ್ಥಿ ಸುವಂತೆ ರಾಮಕೃಷ್ಣರನ್ನು ಕೇಳಿಕೊಂಡರು. ಅದಕ್ಕೆ ಅವರು ನೀನೊಬ್ಬನೇ ದೇವಸ್ಥಾನಕ್ಕೆ ಹೋಗಿ ಭಕ್ತಿಯಿಂದ ಪ್ರಾರ್ಥಿಸು ಎಂದು ಸಲಹೆ ನೀಡಿದರು.

# ಸೆಲ್ಫಿ ಮಾಯೆ



ಇ. ಗೀತಾಂಜಲಿ
ತೃತೀಯ ಬಿ.ಎ., ಹೆಚ್‌ಇಕೆ

ಈ ಆಧುನಿಕ ಜಗತ್ತಿನಲ್ಲಿ ಒಂದು ಹೊಸ ಟ್ರೆಂಡ್ ಬೆಳಕಿಗೆ ಬಂದಿದೆ. ಅದು ಯಾವುದು ಗೊತ್ತಾ! ನಿಮಗೆ ನನಗೆ ತಿಳಿದಿರುವಂತಹ ಸೆಲ್ಫಿ. ಈ ಸೆಲ್ಫಿ ಸ್ಮಾರ್ಟ್‌ಫೋನ್ ಬಂದ ಮೇಲಂತು ತುಂಬಾನೆ ಸೆಲ್ಫಿ ಹುಚ್ಚು ಹೆಚ್ಚಾಗಿದೆ. ಅದರಲ್ಲೂ ನಮ್ಮಂತಹ ಕಾಲೇಜಿನ ವಿದ್ಯಾರ್ಥಿ ವಿದ್ಯಾರ್ಥಿನಿ ಯರಿಗಂತು ಇದರ ಹುಚ್ಚು ತುಂಬಾನೆ ಹೆಚ್ಚಿದೆ. ಯಾವಾಗ, ಎಲ್ಲಿ, ಎಷ್ಟರ ಮಟ್ಟಿಗೆ ಈ ಸೆಲ್ಫಿ ಮಾಯೆ ಆವರಿಸಿದೆ ಅಂತ ಹೇಳಿದರೆ ನಿಂತರೆ, ಕೂತರೆ, ತಿಂಡಿ ತಿನ್ನುವಾಗ, ಊಟ ಮಾಡುವಾಗ, ಹರಟೆ ಹೊಡೆಯುವಾಗ ಕೆಲವೊಮ್ಮೆ ಮಲಗಿರುವಾಗಲೂ ಸಹ ಸೆಲ್ಫಿ ತೆಗೆದುಕೊಳ್ಳುವುದು ಕಂಡು ಬರುತ್ತಿದೆ.

ಈ ಸೆಲ್ಫಿ ಮಾಯೆ ಇತ್ತೀಚೆಗೆ ಬಂದಿರು ವುದಲ್ಲ. ಈ ಸ್ಮಾರ್ಟ್ ಫೋನ್ ಬಂದ ಮೇಲೆ ಹುಟ್ಟಿಕೊಂಡಿರುವಂತದ್ದು ಅಲ್ಲ. ಮತ್ತೆ ಈ ಸೆಲ್ಫಿಯನ್ನು ಅನ್ವೇಷಿಸಿದ್ದು 1980ರಲ್ಲಿಯೇ. "ಮಿನೋಲ್ತಾ" ಎಂಬ ಕ್ಯಾಮರಾ ಕಂಪನಿಗೆ ಕಾರ್ಯ ನಿರ್ವಹಿಸುತ್ತಿದ್ದ "ಹಿರೋಶೀ ಉಯ್ಯೈಡಾ" ಎಂಬುವ ವರು ಪ್ರಥಮ ಬಾರಿಗೆ ಇದನ್ನು ಕಂಡು ಹಿಡಿದರು. ಆಗ ಅದರ ಸ್ವರೂಪ ಬದಲಾಗಿತ್ತು ಅಷ್ಟೇ. ಅಷ್ಟಕ್ಕೂ ಹಿರೋಶಿ ಉಯ್ಯೈಡಾರವರು ಇದನ್ನು ಅನ್ವೇಷಣೆ ಏಕೆ ಮಾಡಿದರು ಎಂದರೆ ಒಂದು ದಿನ ಅವರು ಪ್ಯಾರಿಸ್‌ನ "ಲಾರ್" ಎಂಬ ವಸ್ತು ಸಂಗ್ರಹಾಲಯ ದಲ್ಲಿ ಕೆಲಸ ಮಾಡುತ್ತಿರುವಾಗ ಅಲ್ಲೊಂದು ಫೋಟೊ ಕ್ಲಿಕ್ಕಿಸಿಕೊಳ್ಳುವ ಆಸೆಯಾಯಿತು. ಅದಕ್ಕಾಗಿ ಒಬ್ಬ ಬಾಲಕನ ಕೈಗೆ ಅವರ ಕ್ಯಾಮರವನ್ನು ನೀಡಿ ಒಂದು ಫೋಟೊ ತೆಗಿ ಎಂದು ಹೇಳಿದಳು ಆ ಬಾಲಕ ಕ್ಯಾಮರವನ್ನು ನೋಡಿ ಹೆದರಿ ಓಡಿ ಹೋದನು. ಆಗಲೇ ಅವರಿಗೆ ಸೆಲ್ಫಿ ಯೋಚನೆ ಹೊಳೆದದ್ದು.

ನಂತರದ ದಿನಗಳಲ್ಲಿ ಈ ಯೋಚನೆಗೆ ರೂಪು ನೀಡಿದ ಹಿರೋಶೀ ಉಯ್ಯೈಡಾ, ಮೊದಲು ಎಕ್ಸ್‌ಟೆಂಡರ್ ಸ್ಟಿಕ್ ಅನ್ನು ಅನ್ವೇಷಣೆ ಮಾಡಿದರು. ಇದಕ್ಕೆ ಸಣ್ಣ ಕ್ಯಾಮೆರಾ ಲಗತ್ತಿಸಿ, ಕ್ಯಾಮೆರಾದ ಮುಂಭಾಗಕ್ಕೆ ಕನ್ನಡಿಯನ್ನು ಹಾಕಿದರು. ಈ ಕನ್ನಡಿಯಲ್ಲಿ ಸೆಲ್ಫಿ ತೆಗೆದುಕೊಳ್ಳುವವರ ಮುಖ ಕಾಣಿಸಲು ಸಹಾಯವಾಯಿತು.

ನಂತರದ ದಿನಗಳಲ್ಲಿ ಕೆನಡಾದ "ವೈನ್ ಫ್ರೋಮ್" ಎಂಬುವವರ ಹಿರೋಶಿ ಉಯ್ಯೈಡಾ ಕಂಡು ಹಿಡಿದ ಯಂತ್ರವನ್ನು ಸ್ವಲ್ಪ ಅಭಿವೃದ್ಧಿ ಪಡಿಸಿ ಅದಕ್ಕೆ ಹೊಸ ರೂಪನೀಡಿದರು ಎಂದು ತಿಳಿದು ಬರುತ್ತದೆ. ಅಂದ ಹಾಗೇ ಈ ಸೆಲ್ಫಿ ಮಾಯೆ ಈಗ ಭೂಮಿಯ ಮೇಲೆ ಮಾತ್ರವಲ್ಲದೆ ಮಂಗಳನ ಮೇಲೂ ಒಂದೆರಡು ವರ್ಷದ ಹಿಂದೆ ಕಾಲಿಟ್ಟಿತು. ನಾಸಾದ ಕ್ಯೂರಿಯಾಸಿಟಿ "ರೋವರ್" ಮಂಗಳ ಗ್ರಹದ ಮೌಂಟ್ ಶಾರ್ಪ ಪರ್ವತವನ್ನು ಕೊರೆದು ಅಲ್ಲಿನ ಪರಿಸರದ ವಸ್ತುಗಳನ್ನು ಸಂಗ್ರಹಿಸಿ ತನ್ನ ಪೋಟೊ ಸೆರೆಹಿಡಿದಿದೆ. ಇತ್ತೀಚೆಗೆ ಅಮೇರಿಕಾದ ಕಾಲೇಜೊಂದರಲ್ಲಿ "ಸೆಲ್ಫಿ" ತೆಗೆಯಲು ವಿಶೇಷ ತರಗತಿಗಳೇ ನಡೆಯುತ್ತಿದ್ದು ತಿಂಗಳಿಗೆ 10 ಸಾವಿರ ರೂಪಾಯಿ ಶುಲ್ಕವೂ ಇಟ್ಟಿದ್ದಾರಂತೆ. ಆ ಮಟ್ಟಿಗೆ 'ಸೆಲ್ಫಿ' ಎಲ್ಲರನ್ನೂ ಆವರಿಸಿದೆ.

ಈ ಸೆಲ್ಫಿ ಬಗ್ಗೆ ಒಂದು ಸಣ್ಣದಾದ ಮಾಹಿತಿ ಎಲ್ಲರಿಗೂ ಸಿಕ್ಕಿತು ಅಲ್ವಾ. ನಾನು ಮೊದಲೇ ಹೇಳಿದಾಗೆ ಕಾಲೇಜು ವಿದ್ಯಾರ್ಥಿನಿಯರಲ್ಲಿ ಹೇಗೆ ಸೆಲ್ಫಿ ಹಬ್ಬಿದೆ ಗೊತ್ತಾ! ಕಾಲೇಜಿನ ಮುಂದೆ ನಿಂತು ಸೆಲ್ಫಿ ತೆಗೆದುಕೊಳ್ಳೋದು, ಹಾಗೇ ಕ್ಯಾಂಪಸ್‌ನಲ್ಲಿ

ಅಂತು ಈ ಸೆಲ್ಫಿ ಬಹಳಾನೇ ಹೆಚ್ಚು, ಹಾಗೆ ನೋಡಿದ್ರೆ, ಕ್ಲಾಸ್‌ರೂಂನಲ್ಲಿ ಸೆಲ್ಫಿ, ಇಷ್ಟೆ ಅಲ್ಲಾ ಹೇಳುತ್ತಾ ಹೋದ್ರೆ ಹೆಚ್ಚಾಗುತ್ತೆ. ಈ ಮೊಬೈಲ್‌ನಲ್ಲಿ ಇಂಟರ್‌ನೆಟ್ ಹೇಗೆ ಅಚ್ಚುಮೆಚ್ಚಿನದಾಗಿದೆಯೋ ಅಷ್ಟೇ ಅಚ್ಚುಮೆಚ್ಚು ಈ ಸೆಲ್ಫಿ ಆಗಿದೆ.

ಮೊದಲು ಹೆಣ್ಣು ಮಕ್ಕಳು ದೇವಸ್ಥಾನಕ್ಕೆ ಆಗಿರಬಹುದು ಅಥವಾ ಪ್ರವಾಸ ತಾಣಗಳಿಗೆ ಆಗಿರಬಹುದು ದೇವರನ್ನು ನೋಡಲು ಹಾಗೇ ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸಿ ಬರಲು ಹೋಗುತ್ತಿದ್ದರು. ಆದರೆ ಈಗ ಸೆಲ್ಫಿ ತೆಗೆದುಕೊಳ್ಳೋಕೆ ಹೋಗ್ತಾರೆ. ಅಂದ್ರೆ ತಪ್ಪಾಗಲ್ಲ. ಒಂದು ದೇವಸ್ಥಾನಕ್ಕೆ ಹೋದಾಗ ಅಲ್ಲಿರುವ ದೇವರು ಯಾರು? ದೇವರ ಹೆಸರು ಏನು? ದೇವಸ್ಥಾನ ಹೇಗಿದೆ? ದೇವಾಲಯದ ಹಿಂದಿನ ಇತಿಹಾಸ ಏನು? ಎಂಬುದು ಈಗ ಇದು ಯಾವುದು ಇಲ್ಲ ಇದರ ಬದಲು ಈ ದೇವಾಲಯ ಚೆನ್ನಾಗಿದೇ ನಾನು ಇಲ್ಲಿ ಸೆಲ್ಫಿ ತೆಗೆದುಕೊಂಡು ನನ್ನ ವಾಟ್ಸ್‌ಆಫ್‌ಗೆ ಹಾಕ್ತಿನಿ ಅನ್ನೋ ಹುಡ್ಗೀರ ಸಂಖ್ಯೆ ಹೆಚ್ಚಾಗಿ ಬಿಟ್ಟಿದೆ. ಜೊತೆಗೆ ಒಂದು ಹೊಸ ಬಟ್ಟೆ ಹಾಕಿಕೊಳ್ಳುವಂತಿಲ್ಲ. ಆಗಲೇ "ನಾನು ಈ ಹೊಸ ಡ್ರೆಸ್‌ನಲ್ಲಿ ಸೆಲ್ಫಿ ತೆಗೆದುಕೊಂಡು ನನ್ನ ಮೊಬೈಲ್‌ನ ವಾಟ್ಸ್ ಆಫ್‌ನ ಡಿ.ಪಿ.ಗೆ "ಹಾಕ್ತೀನಿ" ಅನ್ನೋ ಹುಡ್ಗೀರ ಮನೋಭಾವ ಇಂದು ಈ ಸೆಲ್ಫಿಯಿಂದ ಹೆಚ್ಚಾಗಿದೆ ಅಂತ ಹೇಳಿದರೆ ಅದು ನಿಜವಾದ ಸತ್ಯದ ಸಂಗತಿ.

ಈ ಸ್ಮಾರ್ಟ್ ಫೋನ್ ಮಹಿಮೆ ಹೆಚ್ಚಾಗಿ ಹುಡ್ಗೀರು ಮಾತ್ರವಲ್ಲದೆ ಹುಡುಗರನ್ನು ಹಾಳು ಮಾಡಿದೆ. ಈ ಹುಡ್ಗುರು ಕೂಡ ಈ ಸೆಲ್ಫಿಗೆ ಬಲಿಯಾಗಿದ್ದಾರೆ. ಯಾರಾದರೂ ಒಬ್ಬ ಫ್ರೆಂಡ್‌ನ ಬರ್ತ್‌ಡೇ ಏನಾದರೂ ಸೆಲೆಬ್ರೇಟ್ ಮಾಡಿದರೆ ಸಾಕು ಅವರ ಸೆಲ್ಫಿಗಳನ್ನು ನೋಡಲು ಎರಡು ಕಣ್ಣು ಸಾಲೋದೆ ಇಲ್ಲ. ಹಾಗೇ ಯಾವ ಹುಡುಗನ ಸೆಲ್ಫಿ ನೋಡಿದ್ರು ಕೂಡ ಯಾವುದಾದರೊಂದು ಬೈಕ್ (ಅ)ಕಾರ್‌ನ ಪಕ್ಕದಲ್ಲಿ ನಿಂತುಕೊಂಡಿರುವುದೇ ಕಂಡು ಬರುತ್ತೆ. ಈಗಂತು ಈ ಸೆಲ್ಫಿ ಮಾಯೆ ಹೇಗಿದೆ ಅಂದ್ರೆ ಕಾಫಿಡೇಗೆ ಹೋದ್ರು ಸೆಲ್ಫಿ. ಬೈಕ್‌ನಲ್ಲಿ ಹೋಗಬೇಕಾದ್ರೆ ಮಧ್ಯ ಸಿಗ್ನಲ್ ಬಂದ್ರೆ ಅಲ್ಲೂ ಸೆಲ್ಫಿ. ಫಿಲಂಗೆ ಹೋಗಿ ಅಲ್ಲಿ ಇಂಟರ್‌ವಿವ್ ಬಿಟ್ಟಾಗ ಕೂಡ ಅಲ್ಲೂ ಸೆಲ್ಫಿ. ಹಾಗೆ ಎಲ್ಲಿ ನೋಡುದ್ರೂ ಸೆಲ್ಫಿ, ಸೆಲ್ಫಿ, ಸೆಲ್ಫಿ.

ಇದು ಇಷ್ಟೇ ಅಲ್ಲಾ ಯಾವ ಮದುವೆ ಮನೆ ನೋಡಿ ಅಲ್ಲಿ ಮಧುಮಗಳು ರೆಡಿ ಆಗಿದ್ದಾಳೋ ಇಲ್ವೋ ಗೊತ್ತಿಲ್ಲಾ ಆದ್ರೆ ಆ ಮಧುಮಗಳ ಫ್ರೆಂಡ್ಸ್ ಹೋಗಿರ್ತಾರಲ್ಲ ಅವರಂತು ರೆಡಿ ಆಗಿರ್ತಾರೆ ಅಲ್ವಾ ಅವರು ಸೆಲ್ಫಿಯನ್ನು ಬಿಟ್ಟು ಹೊರಗಡೆ ಬರೋದೆ ಇಲ್ಲಾ ಗೊತ್ತ. ಯಾವುದಾದರೂ ಟೂರ್‌ಗೆ ಫ್ಯಾಮಿಲಿ ಬಿಟ್ಟು ಫ್ರೆಂಡ್ಸ್ ಜೊತೆ ಏನಾದರೂ ಹೋದ್ರೆ ಅವರಿಗಂತು ಊಟನು ಬೇಡ, ತಿಂಡಿನು ಬೇಡ, ಬರೀ ಸೆಲ್ಫಿ ಇದ್ರೆ ಸಾಕು. ಹಾಗೇ ಅವರಲ್ಲಿ ಒಂದು "ಐವೋ ಸ್ಮಾರ್ಟ್ ಫೋನ್" ಏನಾದರೂ ಇದು ಬ್ಯಾಟರಿ ಹಂಡ್ರೆಡ್ ಪರ್‌ಸೆಂಟ್ ಇದ್ರೆ, ಆ ಚಾರ್ಜ್ ಮುಗಿಯೋವರೆಗೂ ಆ ಸೆಲ್ಫಿ ಹುಚ್ಚು ಅವರನ್ನು ಬಿಡೋದೆ ಇಲ್ಲ.

ಒಟ್ಟಾರೆಯಾಗಿ ನನ್ನ ಪ್ರಕಾರ ಈ ಸೆಲ್ಫಿ ಹುಚ್ಚು ಹುಡುಗರಿಗಿಂತ ಹುಡುಗಿಯರಲ್ಲಿ ಹೆಚ್ಚು ಕಂಡು ಬರುತ್ತಿದೆ. ಯಾಕೆಂದ್ರೆ ಹುಡ್ಗಿರಿಗೆ ತಮ್ಮದೇ ಆದಂತಹ ಸೌಂದರ್ಯ ಕಾಳಜಿ ಹೆಚ್ಚಾಗಿರುತ್ತೆ ಅಷ್ಟೇ ಅಲ್ಲದೆ ಬ್ಯೂಟಿ ಕೇರಿಂಗ್, ಮತ್ತೆ ಹೇರ್ ಸ್ಟೈಲ್, ಮೇಕಪ್ ಇನ್ನು ಮುಂತಾದರ ಬಗ್ಗೆ ಹೆಚ್ಚು ಗಮನ ಹರಿಸುತ್ತಾರೆ. ಅಷ್ಟೇ ಅಲ್ಲ, ಹುಡುಗರಿಗಿಂತ ಹುಡ್ಗೀರೆ ಕನ್ನಡಿ ನೋಡ್ಕೊಳ್ಳೋದು ತುಂಬಾನೆ ಹೆಚ್ಚು ಅಲ್ವಾ ಅದೇ ಮುಖ್ಯವಾದ ಕಾರಣ. ಒಂದು ಹುಡ್ಗಿ ಕನ್ನಡಿನ ದಿನಕ್ಕೆ ಎಷ್ಟು ಬಾರಿ ನೋಡಿ ಕೊಳ್ಳುತ್ತಿದ್ದಳೋ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಈಗ ಸೆಲ್ಫಿ ತೆಗೆದುಕೊಳ್ಳುತ್ತಿದ್ದಾಳೆ ಅಷ್ಟೇ.

# ಪ್ರಾಮಾಣಿಕತೆಯ ಪ್ರತಿಫಲ



**ಹೆಚ್.ಎಂ. ವಾಣಿಶ್ರೀ**
ತೃತೀಯ ಬಿ.ಎ., ಹೆಚ್ಇಜಿ

ನೊಬೆಲ್ ಪಾರಿತೋಷಕವನ್ನು ಪಡೆದ ಏಕಮೇವ ಭಾರತೀಯ ವಿಜ್ಞಾನಿ ಸರ್ ಸಿ.ವಿ. ರಾಮನ್ ಆಗ ಬೆಂಗಳೂರಿನಲ್ಲಿ ತಮ್ಮ ಸಂಶೋಧನಾ ಕೇಂದ್ರವನ್ನು ಸ್ಥಾಪಿಸುತ್ತಿದ್ದರು. ಆಗ ನಡೆದಂತಹ ಘಟನೆ ಇದು ಎಂದು ಹಿರಿಯರು ಹೇಳುತ್ತಾರೆ. ಇದರ ಹಿಂದಿರುವ ಆಶಯ ಬಹಳ ಮುಖ್ಯವಾದದ್ದು.

ತಮಗೆ ಸಂಶೋಧಕರು ಬೇಕೆಂದು ರಾಮನ್ ಪತ್ರಿಕೆಗೆ ಜಾಹೀರಾತು ನೀಡಿದ್ದರಂತೆ ಅದಕ್ಕೆ ಪ್ರತಿಯಾಗಿ ನೂರಾರು ಅರ್ಜಿಗಳು ಬಂದಿದ್ದವು. ಎಲ್ಲಾ ಅಭ್ಯರ್ಥಿಯಾಗಿ ಹಿರಿಯ ಸಂಶೋಧಕರು ಸಂದರ್ಶಿಸಿ ಕೇವಲ ಆರು ಜನರನ್ನು ಮಾತ್ರ ಕೊನೆಯ ಸಂದರ್ಶನಕ್ಕೆ ಆಯ್ಕೆ ಮಾಡಿದ್ದರು. ಇವರನ್ನು ಸರ್.ಸಿ.ವಿ.ರಾಮನ್‌ರವರೇ ಭೇಟಿ ಮಾಡುವವರಿದ್ದರು. ಆ ಎಲ್ಲ ಅಭ್ಯರ್ಥಿಗಳಿಗೂ ತುಂಬಾ ಸಂತೋಷ. ಕೆಲಸ ಸಿಗದಿದ್ದರೂ, ಪರವಾಗಿಲ್ಲ ನೊಬೆಲ್ ಪ್ರಶಸ್ತಿ ವಿಜೇತ ವಿಜ್ಞಾನಿಯನ್ನು ಭೇಟಿಯಾಗುವ ಅವರೊಂದಿಗೆ ಮಾತನಾಡುವ ಅವಕಾಶ ದೊರೆಕುತ್ತದಲ್ಲ ಎಂದು.

ರಾಮನ್ ಸಂದರ್ಶನ ಮುಗಿಸಿ ಮೂವರನ್ನು ಆರಿಸಿದರು. ಎಲ್ಲರಿಗೂ ಊರಿಗೆ ಹೋಗಿ ಬರುವ ಪ್ರಯಾಣ ಭತ್ಯೆಯನ್ನು ನೀಡಲು ಆದೇಶಿಸಿದರು. ಸಾಯಂಕಾಲ ಮನೆಗೆ ಹೊರಡಲು ಸಿದ್ಧರಾಗಿ ಹೊರಬಂದ ರಾಮನ್. ರಸ್ತೆಯ ಪಕ್ಕದಲ್ಲಿ ನಿಂತ ವ್ಯಕ್ತಿಯೊಬ್ಬನನ್ನು ಗಮನಿಸಿದರು. ಹೌದು ಇದೇ ವ್ಯಕ್ತಿ ಬೆಳಿಗ್ಗೆ ಸಂದರ್ಶನಕ್ಕೆ ಬಂದವರು. ಆದರೆ ಅವನು ಆಯ್ಕೆಯಾಗಿಲ್ಲ. ಬಹುಶಃ ಅವಕಾಶಕ್ಕಾಗಿ ಕೇಳಿಕೊಳ್ಳಲು ನಿಂತಿರಬೇಕು ಎಂದು ಕೊಂಡರು. ಆತ ಮುಂದೆ ಬಂದು ಸರ್ ಎಂದ. ಹುಬ್ಬೇರಿಸಿ "ಎಸ್" ಎಂದರು ರಾಮನ್. ಮಗೂ, ನೀನು ಸಂದರ್ಶನದಲ್ಲಿ ಆಯ್ಕೆಯಾಗಿಲ್ಲ. ಮುಂದಿನ ಸಾರಿ ಚೆನ್ನಾಗಿ ಓದಿ ಪ್ರಯತ್ನಿಸು ಎಂದು ಹೇಳಿ ಮುಂದಡಿಯಿಟ್ಟರು. ಆಗ ಆತ ಹೇಳಿದ, ಸರ್ ನಾನು ಅದಕ್ಕಾಗಿ ನಿಂತಿಲ್ಲ. ನನಗೆ ತಮ್ಮ ಆಫೀಸಿನಲ್ಲಿ ಭತ್ಯೆ ನೀಡಿದ್ದಾರೆ. ಆದರೆ ತಪ್ಪಾಗಿ ಏಳು ರೂಪಾಯಿ ಹೆಚ್ಚು ಕೊಟ್ಟಿದ್ದಾರೆ. ನಾನು ಅವರಿಗೆ ಹೇಳಿದಾಗ "ಅಕೌಂಟನ್ನು ಮುಚ್ಚಿಯಾಯಿತು. ನೀವೇ ಇಟ್ಟುಕೊಳ್ಳಿ" ಎಂದರು. ನನಗೆ ಈ ಹೆಚ್ಚಿನ ಹಣ ಬೇಡ ಸರ್. ಹಾಗಾದರೆ ಆ ಏಳು ರೂಪಾಯಿ ಕೊಡು ಎಂದು ಕೈಚಾಚಿ ಅದನ್ನು ಪಡೆದುಕೊಂಡು ಜೇಬಿನಲ್ಲಿ ಹಾಕಿಕೊಂಡು ಮುಂದೆ ನಡೆದರು. ಎರಡು ಹೆಜ್ಜೆ ಹೋದ ಮೇಲೆ ತಿರುಗಿ, "ಇಲ್ಲಿ ನೋಡು ನಾಳೆ ಬೆಳಗ್ಗೆ ನನ್ನನ್ನು ಹತ್ತು ಗಂಟೆಗೆ ಬಂದು ಕಾಣು" ಎಂದರು. ಆತನಿಗೆ ಏನೂ ತೋಚಲಿಲ್ಲ ಮರುದಿನ ಅವನ ಕೊಠಡಿಗೆ ಹೋದಾಗ ರಾಮನ್ ಹೇಳಿದರು. "ಮಗೂ, ನೀನು ಭೌತಶಾಸ್ತ್ರದ ಪರೀಕ್ಷೆಯಲ್ಲಿ ಜಯಶಾಲಿಯಾದೆ. ಅದೇ ಮುಖ್ಯ. ನಾನು ನಿನಗಾಗಿ ಇನ್ನೊಂದು ಹುದ್ದೆ ಸೃಷ್ಟಿಸಿದ್ದೇನೆ. ಅದಕ್ಕೆ ನೀನು ಸೇರಿಕೋ" ಎಂದು ಆರ್ಡರ್ ಕೊಟ್ಟರು. ಆ ಹುಡುಗ ದೊಡ್ಡ ವಿಜ್ಞಾನಿಯಾಗಿ ಖ್ಯಾತನಾದ. ಮುಂದೆ ಅವನೊಂದು ಲೇಖನ ಬರೆದ "ನನ್ನ ಜೀವನದ ಗತಿಯನ್ನು ಬದಲಿಸಿದ ಏಳು ರೂಪಾಯಿಗಳು"

(Seven rupees that changed the coutse of my life) "ಪ್ರಾಮಾಣಿಕತೆ ಜೀವನದ ಗತಿಯನ್ನು ಬದಲಿಸುತ್ತದೆ".

## ಆ ಹೂಗಳ ನಗುವಿಗೆ ಕಾರಣ ನೀನೆ?



ವಿನುತ ಎಸ್.
ದ್ವಿತೀಯ ಬಿ.ಕಾಂ.

ತುಂಬಾ ವರ್ಷಗಳ ಹಿಂದೆ ಒಂದೂರಲ್ಲಿ ಒಬ್ಬ ಮಹಿಳೆ ಇದ್ದಳು. ಆಕೆ ಏಕಾಂಗಿ ಆದ್ದರಿಂದ ನಿತ್ಯದ ಕೆಲಸಗಳನ್ನು ಆಕೆಯೇ ಮಾಡಿಕೊಳ್ಳ ಬೇಕಿತ್ತು. ಅವಳ ಹತ್ತು ಹಲವು ಕೆಲಸಗಳಲ್ಲಿ ಪ್ರತಿದಿನ ನೀರು ತರುವುದು ಒಂದು ಕೆಲಸವಾಗಿತ್ತು.

ಆಕೆ ಊರ ಹೊರಗಿನ ಕೆರೆಯಿಂದ ನೀರು ತರಬೇಕಿತ್ತು. ಕೆರೆಯಿಂದ ಅವಳ ಮನೆಯವರೆಗೂ ರಸ್ತೆ ಒಂದು ಬದಿಯಲ್ಲಿ ಹೂವಿನ ಗಿಡಗಳು ಬೆಳೆದಿದ್ದವು. ಎರಡು ಮಣ್ಣಿನ ಬಿಂದಿಗೆಗಳಲ್ಲಿ ನಿತ್ಯವೂ ನೀರು ತರುತ್ತಿದ್ದರು. ಹೀಗಿರುವಾಗ ಒಂದು ದಿನ ಒಂದು ಬಿಂದಿಗೆ ತೂತಾಗಿ, ನೀರು ಸೋರತೊಡಗಿತು. ಕೆರೆಯಿಂದ ನೀರು ತುಂಬಿಕೊಂಡು ಮನೆ ತಲುಪವಷ್ಟರಲ್ಲಿ ತೂತಾಗಿದ್ದ ಬಿಂದಿಗೆಯಿಂದ ಅರ್ಧದಷ್ಟು ನೀರು ಸೋರಿ ಹೋಗುತ್ತಿತ್ತು. ಪರಿಣಾಮ, ಎರಡು ಬಿಂದಿಗೆಯಲ್ಲಿ ನೀರು ತಂದರೂ ಮನೆ ತಲುಪಿದಾಗ ಉಳಿಯುತ್ತಿದ್ದುದು ಒಂದೂವರೆ ಬಿಂದಿಗೆ ನೀರು ಮಾತ್ರ.

ಹೀಗೆ ಒಂದು ವರ್ಷ ಕಳೆಯಿತು. ತೂತಾಗಿದ್ದ ಬಿಂದಿಗೆಯನ್ನು ಆ ಮಹಿಳೆ ಬದಲಿಸಲಿಲ್ಲ. ರಿಪೇರಿಗೂ ಒಯ್ಯಲಿಲ್ಲ. ಆದರೆ ಬಿರುಕು ಬಿಟ್ಟ ಬಿಂದಿಗೆ ಸೋರುವುದನ್ನು ಕಂಡು ಚೆನ್ನಾಗಿದ್ದ ಮತ್ತೊಂದು ಬಿಂದಿಗೆ 'ನೋಡು ನಾನು ಈಗಲೂ ಎಷ್ಟು ಚೆನ್ನಾಗಿದ್ದೇನೆ. ಕೆರೆಯಿಂದ ಬಿಂದಿಗೆಯ ತುಂಬ ನೀರು ತರುತ್ತೇನೆ. ಆ ಮೂಲಕ ಒಡತಿಗೆ ನೆರವಾಗುತ್ತೇನೆ. ನೀನು ಸೋರುತ್ತೀಯ, ಕೆಲಸಕ್ಕೆ ಬಾರದವನು ನಿನ್ನಿಂದ ಸಿಗುವುದು ಅರ್ಧ ಬಿಂದಿಗೆ ನೀರಷ್ಟೆ ಎಂದು ಅಣಕಿಸುತ್ತಿತ್ತು. ಈ ಮಾತು ಕೇಳಿದಾಗಲೆಲ್ಲ ಸೋರುವ ಬಿಂದಿಗೆಗೆ ತುಂಬಾ ದುಃಖವಾಗುತ್ತಿತ್ತು.

ಕೆರೆಯಿಂದ ಒಂದೂವರೆ ಬಿಂದಿಗೆ ನೀರು ತರುವ ಕೆಲಸ ಎರಡನೇ ವರ್ಷವೂ ಮುಂದುವರೆ ಯಿತು. ತೂತಾಗಿದ್ದ ಬಿಂದಿಗೆ ಪ್ರತಿ ದಿನ ಅವಮಾನ ಅನುಭವಿಸುತ್ತಿತ್ತು. ಜತೆಗೆ ಸಹಚರನ ನಿಂದನೆ ಬೇರೆ, ಹೀಗೆ ಹೆಜ್ಜೆ ಹೆಜ್ಜೆಗೂ ಅವಮಾನ ಎದುರಿಸು ತ್ತಿದ್ದ ಬಿಂದಿಗೆಯಲ್ಲಿ ಒಂದು ದಿನ ಸ್ವಾಭಿಮಾನ ಎಚ್ಚರವಾಯಿತು. ತಾನು ಸೋರುತ್ತಿದ್ದರು. ತನ್ನನ್ನು ಬದಲಿಸಿದ ಒಡತಿಯ ಬಳಿ ತನ್ನ ಅಳಲು ತೋಡಿಕೊಳ್ಳಲು ನಿರ್ಧರಿಸಿತು.

ಎಂದಿನಂತೆ ಒಂದು ದಿನ ನೀರು ತುಂಬಿ ಕೊಂಡು ಬರುವಾಗ ಒಡೆದು ಹೋಗಿದ್ದ ಬಿಂದಿಗೆ ಮಾತನಾಡಿ 'ಒಡತಿಯೇ, ನಿನ್ನಲ್ಲಿ ಒಂದು ವಿನಂತಿ, ನೀನದನು ಈಡೇರಿಸಬೇಕು' ಎಂದು ಕೋರಿ ಹೀಗೆಂದಿತು.: 'ಒಡತಿಯೇ ಕೇಳು, ನಾನು ತುಂಬಾ ದಿನಗಳಿಂದ ಸೋರುತ್ತಿದ್ದೇನೆ. ನಿನ್ನ ಮನೆಗೆ ಅರ್ಧ ಬಿಂದಿಗೆ ನೀರು ಸಾಗಿಸಲಷ್ಟೆ ನಾನು ಯೋಗ್ಯ ಉಳಿದಂತೆ ನಾನು ಅಯೋಗ್ಯ ಎಂದು ನನಗೆ ತಿಳಿದಿದೆ. ನನ್ನ ಸಹಚರನೂ ಆಗಾಗ ಅದನ್ನು ನೆನಪಿಸಿ ಅಣಕಿಸುತ್ತಾನೆ. ಅಷ್ಟೇ ಅಲ್ಲ ಊರ ಜನರ ಅಭಿಪ್ರಾಯವೂ ಅದೇ ಆಗಿದೆ. ಹೀಗಿದ್ದರೂ ನೀನೇಕೆ ನನ್ನನ್ನು ಬಿಟ್ಟು ಬೇರೆ ಬಿಂದಿಗೆ ಕೊಳ್ಳುತ್ತಿಲ್ಲ? ನಾನೊಬ್ಬ ಕೆಲಸಕ್ಕೆ ಬಾರದವನು. ನನ್ನನ್ನು ಬದಲಿಸಿ, ಈ ಅವಮಾನದಿಂದ ಮುಕ್ತ ಗೊಳಿಸು' ಎಂದು ಬೇಡಿಕೊಂಡ ಬಿಂದಿಗೆಯ ಮೊರೆ ಆಲಿಸಿದ ಒಡತಿ ನಗುತ್ತಲೇ ಹೇಳಿದಳು.

'ಹುಚ್ಚಪ್ಪ ಯಾರೋ ಹೇಳಿದರು ಅಂದಮಾತ್ರಕ್ಕೆ ನೀನು ಕೆಲಸಕ್ಕೆ ಬಾರದವನು ಅಯೋಗ್ಯನು ಆಗಿಬಿಡುವುದಿಲ್ಲ. ನಿನ್ನ ಸಹಚರ ಹಾಗೂ ಜನರು ನಿನ್ನ ಒಂದು ಮುಖವನ್ನು ಮಾತ್ರ ನೋಡಿದ್ದಾರೆ. ಅದಕ್ಕಾಗಿಯೇ ಅವರು ನಿನ್ನಿಂದ ಯಾವುದೇ ಉಪಯೋಗವಿಲ್ಲ ಎನ್ನುತ್ತಿದ್ದಾರೆ. ಆದರೆ ಪ್ರತಿದಿನ ನಾನು ನಡೆದುಬರುವ ಹಾದಿಯ ಎಡ ಬದಿಯಲ್ಲಿ ನೋಡು ಅಲ್ಲಿ ಎಷ್ಟೊಂದು ಸುಂದರ ಹೂವಿನ ಗಿಡಗಳು ಬೆಳೆದು ನಿಂತಿವೆ. ಅರಳಿವೆ, ಅವೆಲ್ಲ ನಗಲು ಕಾರಣ ನೀನೇ'.

'ನೀನು ಸೋರುವುದನ್ನು ಮೊದಲ ದಿನವೇ ನಾನು ಗಮನಿಸಿದೆ. ಅದಕ್ಕಾಗೇ ನಿನ್ನನ್ನು ಹೊತ್ತುಕೊಳ್ಳುವ ಎಡಬದಿಯಲ್ಲಿ ಹೂವಿನ ಗಿಡಗಳನ್ನು ನೆಟ್ಟು ಬೆಳೆಸಿದೆ. ಇವೇ ಗಿಡಗಳಲ್ಲಿ ಅರಳಿದ ಹೂವುಗಳು ಪ್ರತಿದಿನ ನನ್ನ ಮನೆಯನ್ನು ಅಲಂಕರಿಸುತ್ತವೆ. ದೇವರ ಪೂಜೆಗೆ ಸಲ್ಲುತ್ತವೆ. ಮೇಜಿನ ಮೇಲಿನ ಹೂಜಿಯಲ್ಲಿರುವುದೂ ನಿನ್ನ ಸಹಾಯದಿಂದ ಬೆಳೆದ ಹೂವುಗಳಿಗೆ ನಿನ್ನಿಂದ ಇಷ್ಟೊಂದು ಉಪಯೋಗವಿರುವಾಗ ನಾನೇಕೆ ನಿನ್ನ ಸೋರುವ ಬಿಂದಿಗೆ ಬದಲಿಸಲಿ? ಹೇಗೆ ನಿನ್ನನ್ನು ನಿಷ್ಪ್ರಯೋಜಕ ಎಂದು ಹೇಳಲಿ? ಎಂದು ಪ್ರಶ್ನಿಸಿದಳು.

ಆಗ ಸೋರುವ ಬಿಂದಿಗೆಗೆ ತನ್ನ ಬಗ್ಗೆ ಅಭಿಮಾನ ಮೂಡಿತ್ತು. ತಾನು ಅಯೋಗ್ಯನಲ್ಲ ಎಂದು ಅರಿವಾಯಿತು. ಮುಂದೆ ಜನ ಏನೇ ಹೇಳಿದರೂ ಆ ಬಿಂದಿಗೆಗೆ ಎಂದೂ ತನ್ನ ಬಗ್ಗೆ ಕೀಳರಿಮೆ ಮೂಡಲಿಲ್ಲ. ಜೊತೆಗೆ ತನ್ನ ಒಡತಿಯ ಬಗ್ಗೆ ಗೌರವ ಹೆಚ್ಚಾಯಿತು.

## ಮರೆಯಲಾಗದ ನೆನಹು

ನಿನ್ನ ಮರೆಸುವ ಯಾವ ಸಂಗಾತಿಗಳೂ ನನಗೆ ಬೇಡ.
ಹಾಗೆ ಮರೆವು ಬಂದದ್ದೇ ಆದರೆ ಮರಣವೇ ಸಂಭವಿಸಲಿ
ನಿನ್ನ ಅಡಿಯಲ್ಲಿ ಈ ಮಳೆ ಈ ಮಿಂಚು
ಈ ಮಣ್ಣು ವಾಸನೆಯ ಘಮಲು ಸುಖದ ಅಮಲು
ನಿನ್ನ ಇರವನ್ನು ಮತ್ತು ಸಿಹಿಯಾಗಿಸುವ ಈ ತುಟಿಯ
ಮೇಲಿನ ಜೇನಹನಿ ಅಲ್ಲೆಲ್ಲೋ ಕೇಳಿಸು ನಿನ್ನ ದನಿಗಾಗಿಯೇ
ಮರುಹುಟ್ಟು ಪಡೆಯುವ ಹರೆಯ ಉರಿಯ ಬೆಂಕಿಯ
ಶಾಖಕ್ಕೆ ಬೆಂದ ಇರುಳು ಅರೆಮುಚ್ಚದ ನನ್ನ ಕಣ್ಣ
ರೆಪ್ಪೆಯನ್ನೊಮ್ಮೆ ತೀಡಿ ನೋಡು ನೆನಪುಗಳಲ್ಲಿ ಒಂದೊಂದು ಬಿಂದುವಾಗಿ
ಕಣ್ಣೀರಾಗಿ ಕೆನ್ನೆಯ ಮೇಲೆ ಇಷ್ಟಿಷ್ಟೇ ಆಗಿ
ಜಾರಿಬೀಳುವಾಗಲೂ ಅಂದುಕೊಳ್ಳುತ್ತೇನೆ ಗೆಳೆಯಾ..........
ನಿನ್ನ ಮರೆಯುವುದಾದರೆ ಸಾವೇ ಮೇಲೆಂದು.......

# ಮಾತೃ ಋಣ ತೀರಿಸಲು ಸಾಧ್ಯವೇ?



ಹೆಚ್.ಎಂ. ವಾಣೀಶ್ರೀ
ತೃತೀಯ ಬಿ.ಎ., ಹೆಚ್ಇಜಿ

ನಾನು ನಿನ್ನ ಗರ್ಭದಲ್ಲಿದ್ದಾಗ ನಿನಗೆ ಕೊಟ್ಟ ಕಷ್ಟಗಳು ಒಂದೇ? ಎರಡೇ? ಆದರೂ ಅದನ್ನು ನೀನು ಪ್ರೀತಿಯಿಂದ ಸಹಿಸಿಕೊಂಡು ನನ್ನನ್ನು ಹೆತ್ತು ಹೊತ್ತು, ಸಲಹಿದೆ. ಆ ಋಣ ಪರಿಹಾರಕ್ಕಾಗಿ ಅಮ್ಮ ನಾನೀಗ ನಿನಗೆ ನಮಸ್ಕರಿಸುತ್ತೇನೆ.

ಅಮ್ಮ, ನಾನು ಈ ಬಾಹ್ಯ ಪ್ರಪಂಚಕ್ಕೆ ಬರುವ ತನಕ ನೀನುಂಡ ನೋವಿಗೆ ಮಿತಿಯುಂಟೆ? ನನ್ನಿಂದ ನಿನಗೆ ಆದ ದುಃಖವೇನು ಸ್ವಲ್ಪವೇ? ಆ ಎಲ್ಲಾ ಶೋಕ ತಾಪಗಳನ್ನು ನಸುನಗುತ್ತಾ ಎದುರಿಸಿ ನುಂಗಿಕೊಂಡವಳು ನೀನು. ಆ ಋಣ ಸಂದಾಯಕ್ಕಾಗಿ ಓ ತಾಯಿ ನಿನಗೆ ನನ್ನ ಪ್ರಣಾಮಗಳು. ಪ್ರಸವ ಕಾಲದಲ್ಲಿ ನೀನದೆಂಥ ವೇದನೆಯನ್ನನುಭವಿಸಿದೆ, ಆ ನೋವಿನ ಪರಿವೆ ನಿನಗಿದ್ದರೂ ನವಮಾಸಗಳ ತನಕ ಗರ್ಭಕೋಶದಲ್ಲಿ ನೀನು ನನ್ನನ್ನು ನಲಿವಿನಿಂದ ಕಾಪಾಡಿದೆ. ಪ್ರೇಮವೇ ಮೈವೆತ್ತಂತಿರುವ ಓ ಅಮ್ಮ ನಿನಗೆ ನನ್ನ ಶಿರಸಾಷ್ಟಾಂಗ ನಮಸ್ಕಾರಗಳು.

ತಿಂಗಳು ತುಂಬಿ ಬಂದಂತೆ ನಾನು ನಿನಗೀಯುತ್ತಿದ್ದ ನೋವು ಹೆಚ್ಚುತ್ತಿದ್ದರೂ, ಕೆಲವೊಮ್ಮೆ ಅದನ್ನು ತಾಳಲಾರದೆ ಕಣ್ಣೀರು ಹಾಕಿದ್ದರೂ, ಅದನ್ನೆಲ್ಲಾ ಮೌನವಾಗಿಯೇ ಸಹಿಸಿದವಳು ನೀನು. ಘನವೆತ್ತ ಮೂರ್ತಿಯೂ, ಪ್ರೀತಿಯ ಸಾಗರವೂ ಆದ ಓ ನನ್ನಮ್ಮ ಈ ಜನ್ಮದಲ್ಲಿ ನಿನ್ನ ಋಣ ತೀರಿಸಲು ಸಾಧ್ಯವೇ?

ಜನನವಾದ ನಂತರ ನೀನು ಪಟ್ಟ ಪಾಡೇನು ಕಡಿಮೆಯೇ? ಹಗಲು-ರಾತ್ರಿ ಎನ್ನದೆ ಅಮೃತ ಸದೃಶವಾದ ನಿನ್ನ ಎದೆ ಹಾಲನ್ನು ನನಗಾಗಿ ಧಾರೆ ಎರೆದೆ. ನೀನು ಸಹನೆಯ ಶರಧಿ ಆದ ನನ್ನಮ್ಮಾ ನಿನ್ನ ಋಣವನ್ನು ಹೇಗೆ ತೀರಿಸಲಿ?

ಅಮ್ಮಾ ನಿನ್ನ ಮಡಿಲಿನಲ್ಲಿ ಬೆಳೆದ ಕಂದನಾದ ನಾನು ಚಿಕ್ಕವನಿದ್ದಾಗ ಮಲ-ಮೂತ್ರಗಳಿಂದ ಹಾಸಿಗೆಯೆನ್ನೆಲ್ಲಾ ಹೊಲಸು ಮಾಡುತ್ತಿದ್ದೆ. ಆದರೆ ನೀನು ಆ ಕುರಿತು ಒಂದು ದಿನವಾದರೂ ಹೇಸಿಗೆ ಪಟ್ಟಿದ್ದುಂಟೇ? ನೀನು ನೆಲದ ಮೇಲೆ ಮಲಗಿದರೂ ನನ್ನನ್ನು ಬೆಚ್ಚಗಿರಿಸುತ್ತಿದ್ದೆ. ನೀನು ವಾತ್ಸಲ್ಯದಗಣಿ. ಕಣ್ಣಿಗೆ ಕಾಣುವ ಮಹಾನ್ ಶಕ್ತಿಯನ್ನು ಮಳೆ-ಚಳಿ, ಬಿಸಿಲುಗಳಿಂದಾಗಿ ವಾತಾ ವರಣದಲ್ಲಿ ಉಂಟಾದ ವೈಪರಿತ್ಯದಿಂದ ಬಾಣಂತಿ ಯಾದ ನಿನ್ನ ಆರೋಗ್ಯದಲ್ಲಿ ಏರುಪೇರಾದುದ್ದುಂಟು. ಆದರಿಂದಾಗಿ ಎಷ್ಟೋ ಬಾರಿ ನಾನು ಜ್ವರದಿಂದ ನರಳಿದ್ದುಂಟು. ಚಳಿಯಿಂದ ನಡುಗಿದ್ದುಂಟು. ಆದರೂ ಅವನ್ನೆಲ್ಲ ನೀನು ನನಗಾಗಿ ಸಹಿಸಿಕೊಂಡೆ. ಕಿಂಚಿತ್ತು ಔದಾಸೀನ್ಯ ತೋರದೆ ನನ್ನನ್ನು ರಕ್ಷಿಸಿದೆ. ಅಮ್ಮ, ನಿನ್ನ ಆ ಮಹಿಮೆ ಅಪಾರ.

ಚಿಕ್ಕವನಾಗಿದ್ದಾಗ ನಾನದೆಷ್ಟೋ ತುಂಟತನದಿಂದ ವರ್ತಿಸಿದ್ದೆ! ಎಷ್ಟೋ ಬಾರಿ ನನ್ನ ಬಾಲ ಲೀಲೆಗಳಿಂದ ನಿನ್ನ ದೇಹಕ್ಕೆ ನೋವಾಗುವಂತೆ ಮಾಡಿದ್ದೆ. ನಿನಗೆ ಮಾನಸಿಕ ಹಿಂಸೆಯನ್ನು ಕೊಟ್ಟಿದ್ದೆ. ಅವನ್ನೆಲ್ಲಾ ನುಂಗಿದ ಪ್ರೇಮದ ಕಡಲಾದ ಓ ಅಮ್ಮಾ ನಿನ್ನ ಪಾದಾರವಿಂದಗಳಿಗೆ ನನ್ನ ಶಿರವನಿಡುವೆನಮ್ಮಾ.

ಬಾಲ್ಯದಲ್ಲಿ ಎಷ್ಟೋ ಬಾರಿ ನಿನ್ನನ್ನು ನಾನು ಕಾಲಿನಿಂದ ತುಳಿದು ವೇದಿಸಿದ್ದುಂಟು. ನಿನ್ನ ಮನಸ್ಸಿಗೆ ನೋವಾಗುವಂತೆ ವರ್ತಿಸಿದ್ದುಂಟು. ಆದರೆ ಕರುಣಾಮಯಿಯಾಗಿ ನೀನು ಮುದ್ದಿನಿಂದಲೇ ನನ್ನನ್ನು ತಿದ್ದಿತೀಡಿದೆ, ನಿನ್ನ ಆ ಋಣವನ್ನು ನಾನು ಹೇಗೆ ತೀರಿಸಲಿ? ನೀನು ಕೊಟ್ಟ ಜನ್ಮವನ್ನು ಹೇಗೆ ಸಾರ್ಥಕ ಪಡಿಸಿಕೊಳ್ಳಲಿ?

ಬಾಲ್ಯದ ಆ ದಿನಗಳಲ್ಲಿ ನೀನು ಉಪವಾಸವಿದ್ದು ನನ್ನ ಹೊಟ್ಟೆ ತುಂಬಿಸಿದ್ದೆ. ಆದರೂ ನೀನು ಆ ಬಗ್ಗೆ

ಕೊರಗಿದ್ದುಂಟೆ? ನೋವಿನಿಂದ ನುಡಿದ್ದುದ್ದುಂಟೇ? ಓ ವಾತ್ಸಲ್ಯದ ವಾರಿಧಿಯೇ, ನಾನೀಗ ನಿನ್ನ ಕೋಮಲ ವಾದ ಪಾದಪದ್ಮಗಳಿಗೆ ತಲೆಬಾಗುವೆ.

ಮಗುವಾದ ನನ್ನ ಆರೋಗ್ಯ ಚೆನ್ನಾಗಿರ ಬೇಕೆಂದು ನೀನು ಎಷ್ಟೋ ಬಾರಿ ತುಂಬಾ ಕಹಿ ಯಾದ ಮಾತ್ರೆ ಔಷಧಿಗಳನ್ನು ತಿಂದು ಕಟ್ಟುನಿಟ್ಟಿನ ಪಥ್ಯಪಾನ ಮಾಡಿಲ್ಲವೇ? ನನ್ನ ಮೇಲೆ ಅದೆಂಥ ಕಾಳಜಿ ನಿನಗೆ! ಈ ನಿನ್ನ ತ್ಯಾಗ ಸೇವೆಯನ್ನು ನೆನೆದು ಈ ಜನ್ಮದಲ್ಲಿ ನಿನ್ನ ಋಣ ತೀರಿಸಲು ಸಾಧ್ಯವೆನಮ್ಮ? ಸಣ್ಣವನಾಗಿದ್ದಾಗ ನನಗೆ ಬಂದ ರೋಗ–ರುಜಿನಗಳು ಒಂದೆರೆಡೆ? ಆಗೆಲ್ಲಾ ನೀನು ನನಗಾಗಿ ಕಣ್ಣೀರು ಸುರಿಸಿದೆ. ಹರಕೆ ಹೊತ್ತೆ. ಎಲ್ಲೆಲ್ಲೋ ಹೋಗಿ ಔಷಧಿ ತಂದು ಕುಡಿಸಿದೆ. ಅನ್ನ, ನೀರು, ನಿದ್ರೆ ಬಿಟ್ಟು ನನಗಾಗಿ ಪರಿತಪಿಸಿದೆ. ನನ್ನ ಬಾಲ್ಯದ ದಿನಗಳಲ್ಲಿ ಅದೇಷ್ಟೋ ಬಾರಿ "ಹಸಿವು–ಹಸಿವು" ಎಂದು ನಿನ್ನ ಬಳಿ ಓಡಿಬರುತ್ತಿದ್ದೆ. ಆಗೆಲ್ಲ ನೀನು ಶುಚಿ–ರುಚಿಯಾದ ಊಟವನ್ನು ಹೊಟ್ಟೆ ತುಂಬಾ ಬಡಿಸಿದವಳು. ನನ್ನ ಸಂತಸ ಕಂಡು ನಲಿದ ವಳು. ಅಂಥ ಔದಾರ್ಯದ ನಿಧಿ ಆದ ಓ ತಾಯೇ ನಿನ್ನಡಿಗೆ ನನ್ನ ಕೋಟಿ ಕೋಟಿ ಪ್ರಣಾಮಗಳು.

ನಿನ್ನ ಹೊಟ್ಟೆಯಲ್ಲಿ ಇದ್ದಾಗಿನಿಂದ ಬೆಳೆದು ದೊಡ್ಡವನಾಗುವವರೆಗೂ ನಾನು ನಿನಗೆ ಕೊಟ್ಟ ಕಷ್ಟವೇನು ಸ್ವಲ್ಪವೇ? ನಿನ್ನ ಆ ಋಣದ ನಿವಾರಣೆ ಗಾಗಿ ನಾನು ನನ್ನ ದೇಹದ ಯಾವ ಭಾಗದಿಂದ ನಿನಗೆ ಪಾದುಕೆ ಮಾಡಿತೊಡಿಸಿ ನಿನ್ನ ಋಣ ತೀರಿಸಲಿ?

ಸಾಹಿತ್ಯ ದೀಪ
ಕಡಲಿನಾಳದ ಕತ್ತಲ ಒಡಲಲ್ಲಿ
ಅಡಗಿರುವುದೆಷ್ಟೋ ರತ್ನಗಳು
ದಟ್ಟರಣ್ಯದ ನಟ್ಟನಡುವೆ
ತುಂಬಿರುವುದೆಷ್ಟೋ ಕಾನನದ ಕುಸುಮಗಳು

ಕಡಲಿನ ರತ್ನ ಧರಿಸುವರಾರು, ಕತ್ತಲ ಕಡಲಿನ ಒಡಲಿನಿಂದ ಹೊರತೆಗೆದು? ಕಾನನ ಕುಸುಮದ ಸುಗಂಧವನ್ನು ಸವಿಯುವರಾರು ನಟ್ಟ ನಡುವಿನ ಕಾನನದ ಕುಸುಮಗಳನ್ನು, ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿ ಅಡಗಿರುವ ರತ್ನಗಳು, ಕನ್ನಡ ಭಾಷೆಯ ಕಾನನದಿ ತುಂಬಿರುವ ಕಾವ್ಯ ಕುಸುಮಗಳು.

## ಸ್ನೇಹ

ಯಾರೋ ಕೊಟ್ಟ ನೋವನ್ನು
ಎರಡುದಿನದಲ್ಲಿ ಮರೆಯಬಹುದು
ಆದರೆ, ನಾವು ಯಾರನ್ನು ಜೀವಕ್ಕಿಂತ
ಹೆಚ್ಚಾಗಿ ನೆನಪಿಸುತ್ತೇವೋ
ಅವರು ಕೊಟ್ಟ ನೋವು
ಜೀವನ ಪೂರ್ತಿ ಮರೆಯೋಕೆ
ಆಗಲ್ಲಾ, ಅಲ್ವಾ ಸ್ನೇಹಿತರೆ

ಮನಸೆಂಬ ಮಂದಿರದಲ್ಲಿ
ಕನಸೆಂಬ ಸಾಗರದ
ನೆನಪೆಂಬ ಅಲೆಗಳಲ್ಲಿ
ಚಿರಕಾಲ ಮಿನುಗುತ್ತಿರಲಿ
ನಮ್ಮ ಈ ಅಮರ ಸ್ನೇಹ
ನಗುವಿನ ಹಿಂದಿನ ನೋವನ್ನು
ಮೌನದ ಹಿಂದಿನ ಮಾತನ್ನು



ಅರ್ಥ ಮಾಡಿಕೊಳ್ಳ ಬಲ್ಲವರೇ
ನಿಜವಾದ ಗೆಳೆಯರು

ಬದುಕು ಎಂದರೆ ನದಿಯ ಹಾಗೆ
ಕೊನೆ ಇಲ್ಲದ ಪಯಣ
ಯಾವುದು ನಮ್ಮ ಜೊತೆ
ಶಾಶ್ವತವಾಗಿ ಉಳಿಯುವುದಿಲ್ಲ
ಉಳಿಯುವುದು ಒಂದೇ
ಹೃದಯ ತಟ್ಟಿದ ನೆನಪುಗಳು ಮಾತ್ರ

# ಇಚ್ಛಾಶಕ್ತಿ ದೊಡ್ಡದು



ದೀಪ ಸಿ.
ತೃತೀಯ ಬಿ.ಎ., ಹೆಚ್‌ಇಕೆ

ಒಬ್ಬ ಮನುಷ್ಯ ಜಗತ್ತಿನಲ್ಲಿ ಏನನ್ನಾದರೂ ಸಾಧಿಸುತ್ತಾನೆ ಎಂದರೆ ಹಾಗೇ ಜಗತ್ತಿನಲ್ಲಿ ಮನುಷ್ಯನಿಂದ ಏನಾದರೂ ಸಾಧನೆ ಆಗಿದೆ ಎಂದರೆ ಅದು ಆತ್ಮವಿಶ್ವಾಸದಿಂದಲೇ.

ಬರೀ ಕನಸ್ಸು ಕಂಡರೆ ಸಾಲದು. ಆ ಕನಸ್ಸನ್ನು ನನಸಾಗಿಸುವ ಆತ್ಮವಿಶ್ವಾಸ ಇರಬೇಕು. ಆಗಮಾತ್ರ ಕನಸು ನನಸಾಗಿಸಿ ಪರಿವರ್ತನೆಗೊಳ್ಳುವುದು. ಒಬ್ಬ ವಿದ್ಯಾರ್ಥಿ ಓದಿ ಒಂದು ಉನ್ನತ ಸಾಧನೆಯ ಮಟ್ಟಕ್ಕೆ ತಲುಪಿ ಯಶಸ್ಸು ಗಳಿಸಲು ಇಚ್ಛಾಶಕ್ತಿಬೇಕು.

ಸೋಲು ಎಂಬುದು ನೂರು ಇದ್ದರು. ಆತ್ಮ ವಿಶ್ವಾಸ ಎಂಬ ಛಲ ಹೊಂದಿದರೆ ಗೆಲುವೆಂಬ ಯಶಸ್ಸಿನ ತಿಮಿಂಗಲ ಸೋಲು ಎಂಬ ಮೀನುಗಳನ್ನು ನುಂಗಿಹಾಕುತ್ತದೆ.

ಜಗತ್ತಿನಲ್ಲಿ ಮಹಾನ್ ವ್ಯಕ್ತಿಗಳಾಗಿ ಹುಟ್ಟಿದವರು ಯಾರು? ಯಾರು ಇಲ್ಲ. ಆದರೆ ದೊಡ್ಡ ದೊಡ್ಡ ಸವಾಲುಗಳನ್ನು ಎದುರಿಸಿ ಸಾಮಾನ್ಯ ವ್ಯಕ್ತಿಗಳಾಗಿದ್ದವರು ಮಹಾನ್ ವ್ಯಕ್ತಿಗಳಾದುದು ಆತ್ಮ ವಿಶ್ವಾಸ ಅಥವಾ ಇಚ್ಛಾಶಕ್ತಿ ಎಂಬ ಆಯುಧದಿಂದ ಮಾತ್ರ.

ಒಬ್ಬ ವೀರ ಯೋಧ ಇಪ್ಪತ್ತು ಸಾವಿರದ ಐನೂರು ಅಡಿ ಎತ್ತರದಲ್ಲಿ, ಮೈನಸ್ 55–60 ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶದಲ್ಲಿ ಇಪ್ಪತ್ತೈದು ಅಡಿ ಹಿಮದ ಕೆಳಗೆ ಸಿಕ್ಕಿ ಹಾಕಿಕೊಂಡಿದ್ದ ಹನುಮಂತಪ್ಪರವರು ತನ್ನ ಇಚ್ಛಾಶಕ್ತಿಯಿಂದ ಬದುಕಿದರು.

ಎರಡುನೂರು ವರ್ಷಗಳ ಹಿಂದೆ ಚೀನಾದಲ್ಲಿ ಸಂಭವಿಸಿದ ಭೂಕಂಪದಿಂದ 70000ಕ್ಕೂ ಹೆಚ್ಚು ಜನ ಮರಣ ಹೊಂದಿದ್ದರು. ಪರಿಹಾರ ಕಾರ್ಯಾಚರಣೆಯಲ್ಲ ಸ್ವಚ್ಛಗೊಳಿಸುವುದಷ್ಟೇ ಕೆಲಸ ಎಂದು ಮನೆಗಳ ಅವಶೇಷಗಳನ್ನು ಎತ್ತಿಹಾಕುವಾಗ, ಒಬ್ಬ ವ್ಯಕ್ತಿ ಜೀವಂತ ಎದ್ದು ಬಂದ. ಭೂಕಂಪ ಸಂಭವಿಸಿ ಆಗಲೇ ಎಂಟತ್ತು ದಿನ ಕಳೆದು ಹೋಗಿತ್ತು. ಊಟ, ನೀರು, ಬೆಳಕು, ಮಲಗಲು ಜಾಗ ಏನು ಇಲ್ಲದಿದ್ದರೂ ಆತ ಬದುಕಿದ್ದು ಮಾತ್ರ ತನ್ನ ಆತ್ಮವಿಶ್ವಾಸ ಇಚ್ಛಾಶಕ್ತಿಯಿಂದಲೇ ಹೊರತು, ಮತ್ತೆಯಾವುದರಿಂದಲ್ಲ.

ಮೆಕ್ಸಿಕೋದ ಪಕ್ಕದಲ್ಲಿ ವರ್ಷಗಳ ಹಿಂದೆ ನೌಕಾಯಾನ ಕೈಕೊಂಡ ವ್ಯಕ್ತಿಯೊಬ್ಬ ಕಡಲ ಮಧ್ಯದಲ್ಲಿ ತನ್ನ ದೋಣಿ ಕೆಟ್ಟು ಬಳಿಕ ಹಲವು ವರ್ಷಗಳ ನಂತರ ದಡ ಸೇರಿದ. ಕೆಲವೇ ದಿನಗಳಲ್ಲಿ ದಡ ಸೇರಬೇಕೆಂಬ ಯೋಚನೆಯೊಂದಿಗೆ ಸಮುದ್ರಕ್ಕಿಳಿದವನಿಗೆ ದೋಣಿ ಕೆಟ್ಟು ಬಳಿಕ ಕಟ್ಟಿಕೊಂಡು ಹೋಗಿದ್ದ ಆಹಾರ ಮುಗಿದು ಹೋಯಿತು. ತಿನ್ನಲು ಆಹಾರವಿಲ್ಲ, ವೈದ್ಯೋಪಚಾರದ ಮಾತೇ ಇಲ್ಲ. ಗಾಳಿಗೆ ತೇಲುತ್ತ ತೇಲುತ್ತಲೇ ಅವನ ಕೆಟ್ಟ ನಾವೆ ದಡ ಸೇರಿದಾಗ ಅವನು ನಿಶ್ಶಕ್ತನಾಗಿದ್ದ, ನಿರ್ಜಲೀಕರಣದ ಸಮಸ್ಯೆಗೊಳಗಾಗಿದ್ದನಾದರೂ ಅವನು ಬದುಕಿದ್ದ! ಅದಕ್ಕೆ ಅವನು ಕೊಟ್ಟ ಕಾರಣವೆಂದರೆ, ತಲುಪಲೇಬೇಕೆಂಬ ಆತ್ಮವಿಶ್ವಾಸ. ಅವನಿಗೆ ನೀರಡಿಕೆ, ಹಸಿವಾದಾಗ ಸಿಕ್ಕಷ್ಟು ಆಮೆಗಳ ತಿಂದು ಬದುಕಿದ್ದನು.

ಆಕೆಯ ಹೆಸರು ಮ್ಯಾಗ್ನಿಫಿಸಂಟಾಮೇರಿ ಹಾಗಂತ ಹೆಸರಿಟ್ಟಿದ್ದು ಯಾರೋ?! ಆಕೆಯ ಸಾಧನೆಗಳೆಲ್ಲವೂ ಹಾಗೆ ಇವೇ! ಆಕೆ ನಮ್ಮೆದುರಿಗಿರುವ ಪ್ರೇರಣೆಯ ಚಿಲುಮೆ! ಎಂಥ ಸಂದರ್ಭದಲ್ಲೂ ಮುರಿಯದ ಆತ್ಮ ವಿಶ್ವಾಸದ ಯಾವ ಒತ್ತಡದಲ್ಲೂ ಬಗ್ಗದ ಛಲಗಾರ್ತಿಯಾದ ಆಕೆ ನಿಜಕ್ಕೂ ಅನ್ ಬ್ರೇಕಬಲ್!

ಯಶಸ್ಸಿನ ಸಿದ್ಧದಾರಿಯಲ್ಲೂ ನಡೆಯಲಾಗದೆ ಒದ್ದಾಡುವವರ ಮಧ್ಯೆ, ಸೋಲುಗಳನ್ನೇ ಗೆಲುವಿನ ಶಿಖರ ತಲುಪಲುಬೇಕಾದ ಸೋಪಾನ 'ವಾಗಿಸಿಕೊಂಡಾಕೆ 5 ಬಾರಿ ವಿಶ್ವಬಾಕ್ಸಿಂಗ್ ಚಾಂಪಿಯನ್ ಲಂಡನ್ ಒಲಿಂಪಿಕ್ಸ್ ಪದಕ ವಿಜೇತೆ! ಆಕೆ ನಮ್ಮೆಲ್ಲರಿಗೂ ಚಿರಪರಿಚಿತೆ. ಮೇರಿ ಕೋಮ್! ಗಿಮಿಕ್ ವಿವಾದಗಳಿಂದ ಸುದ್ದಿಯಾಗುವ ಜನರೇ ಹೆಚ್ಚಿರುವ ಈ ಕಾಲದಲ್ಲಿ ನಿಜವಾದ ಸಾಧನೆಯಿಂದ ದೇಶಾದ್ಯಾಂತ ಸುದ್ದಿಯಾಗಿರುವ ಈ ನೈಜ ಚಾಂಪಿಯನ್ ನಮ್ಮೆಲ್ಲರ ಹೆಮ್ಮೆ.

ಆತ್ಮವಿಶ್ವಾಸದ ಸಹಕಾರವಿಲ್ಲದೇ ಯಾವುದು ಸಾಧ್ಯವಾಗುತ್ತಿರಲಿಲ್ಲ ಎನ್ನುತ್ತಾರೆ ಮೇರಿ ಕೋಮ್ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹದಿನೈದಕ್ಕೂ ಹೆಚ್ಚು ಪದಕಗಳನ್ನು ಗೆದ್ದಿರುವ ಮೇರಿಯ ಸಾಧನೆಗೆ ಪದ್ಮಭೂಷಣ, ಪದ್ಮಶ್ರೀ, ರಾಜೀವ್‌ಗಾಂಧೀ ಖೇಲ್ ರತ್ನ, ಅರ್ಜುನ ಪ್ರಶಸ್ತಿಗಳಲ್ಲದೇ 2007ರಲ್ಲಿ ಲಿಮ್ಕಾಬುಕ್ ಆಫ್ ರೆಕಾರ್ಡ್ಸ್‌ನ ವರ್ಷದ ವ್ಯಕ್ತಿಯಾಗಿ ಆಯ್ಕೆ 2009ರಲ್ಲಿ ಮಹಿಳಾ ಬಾಕ್ಸಿಂಗ್ ಅಸೋಶಿಯೇಷನ್‌ನಿಂದ ಆಯ್ಕೆ ಪಟ್ಟಿಯಲ್ಲಿ ಮುಂದುವರೆಯುತ್ತಿದ್ದಾರೆ.

ಅಸಾಧ್ಯವಾದುದನ್ನು ಸಾಧಿಸುವ ಆತ್ಮವಿಶ್ವಾಸ ಹೊಂದಿದ್ದರೆ ಅಸಾಧ್ಯ ಎಂಬುದೇ ಇಲ್ಲ.

ಈ ಮೇಲಿನ ಸಂದರ್ಭಗಳಿಂದ ನಮಗೆ ಮನವರಿಕೆಯಾಗುವುದು ಬಹಳಷ್ಟು ಸಲ ನಮ್ಮ ಸಾವು-ಬದುಕುಗಳು ನಮ್ಮ ಇಚ್ಛಾಶಕ್ತಿಯನ್ನೇ ಅವಲಂಭಿಸಿರುತ್ತವೆ. ಹಾಗೆಂದು ಇಚ್ಛಾಶಕ್ತಿಯಿಂದ ನಾವು ಅಮರರಾಗುತ್ತೇವೆಂದು ಅರ್ಥವಲ್ಲ. ಬದಲಿಗೆ ಸಾಯಬಹುದಾದ ಸಂದರ್ಭದಲ್ಲೂ ಬದುಕಿದ್ದು ಸಾಧಿಸಬೇಕು ಎಂಬುದನ್ನು ಅದು ಸಾಬೀತು ಪಡಿಸುತ್ತದೆ. ಆದ್ದರಿಂದಲೇ ಈ ಜಗತ್ತಿನಲ್ಲಿ ಅಸಾಧ್ಯವಾದುದು ಯಾವುದೂ ಇಲ್ಲ ಎಂದು ಅನುಭವಿಗಳು ಹೇಳುವುದು.

ಊಟ, ನೀರು, ನಿದ್ರೆಯಿಲ್ಲದೆ ವರ್ಷಗಟ್ಟಲೆ ತಪಸ್ಸು ಮಾಡಿ ತಮಗೆ ಬೇಕಾದ ಶಕ್ತಿ, ಸಿದ್ಧಿ, ವರವನ್ನು ನಮ್ಮ ಋಷಿಮುನಿಗಳು ಪಡೆದದ್ದು ಈ ಇಚ್ಛಾಶಕ್ತಿಯಿಂದಲೇ. ಆತ್ಮವಿಶ್ವಾಸಯಿದ್ದರೆ ಒಂದು ಸ್ಪರ್ಧಾತ್ಮಕ ಪರಿಕ್ಷೆಯಲ್ಲಿ ಯಶಸ್ಸು ಪಡೆಯುವುದು ನೀರು ಕುಡಿದಷ್ಟೇ ಸುಲಭ.

ಜಿಮ್ನಾಸ್ಟಿಕ್, ರಬ್ಬರಿನ ಗೊಂಚಲನ್ನು ನಮ್ಮ ಕೈಯಲ್ಲಿ ಕೊಟ್ಟರೂ ಬಗ್ಗಿಸಲು ಅಸಾಧ್ಯವಾದ ಭಂಗಿಗಳನ್ನು ಲೀಲಾಜಾಲವಾಗಿ ಮಾಡುವ ಆ ತರುಣ, ತರುಣಿಯರ ದೇಹದ ಬಳುಕುವ ಸಾಮರ್ಥ್ಯ ನೋಡಿ ಪ್ರತಿ ಬಾರಿಯೂ ಬೆಕ್ಕಸಬೆರಗಾಗುತ್ತೇವೆ. ಅಸಾಧ್ಯವಾದುದನ್ನು ಸಾಧ್ಯವಾಗಿಸುವ ಇಂತಹ ಸಾಧನೆಗಳ ಗುಟ್ಟು ಆತ್ಮ ವಿಶ್ವಾಸ, ಛಲ, ಇಚ್ಛಾಶಕ್ತಿ ಆಯುಧ.

ಇಪ್ಪತೊಂಭತ್ತನೇ ವಯಸ್ಸಿಗೆ ನೃತ್ಯಾಭ್ಯಾಸ ಪ್ರಾರಂಭಿಸಿ "ರುಕ್ಮಿಣಿದೇವಿ ಅರುಂಡೇಲ್" ತನ್ನ ಆತ್ಮವಿಶ್ವಾಸ, ಶಿಸ್ತಿನಿಂದ ಮಾಡಿದ ಅಧ್ಯಯನದಿಂದ ಭರತನಾಟ್ಯವನ್ನು ಜಗತ್ಪ್ರಸಿದ್ಧಗೊಳಿಸಿದ್ದು.

ಅಷ್ಟೆಲ್ಲಾ ಏಕೆ, ನಮ್ಮ ಎಪಿಜೆ ಅಬ್ದುಲ್ ಕಲಾಂ ಕೂಡ ತಮ್ಮ ಆತ್ಮವಿಶ್ವಾಸದ ಬಲದಿಂದ ಛಲದಿಂದ ಕ್ಷಿಪಣಿಯ ಜನಕನಾಗಿ, ವಿಜ್ಞಾನಿಯಾಗಿ ಕೊನೆಗೆ ರಾಷ್ಟ್ರಪತಿಯಾಗಿದ್ದು ಕೂಡ ಅದರಿಂದಲೇ.

ಆದ್ದರಿಂದ ಪ್ರತಿಯೊಬ್ಬರಲ್ಲೂ ಸಾಮರ್ಥ್ಯ ವಿದೆ. ಕಲೆ ಇದೆ ಅದನ್ನು ತಿಳಿದು ಆತ್ಮವಿಶ್ವಾಸದಿಂದ, ಛಲದಿಂದ ಸಾಮರ್ಥ್ಯವನ್ನು ಹೊರಹೊಮ್ಮಿಸಿ ಮುನ್ನಡೆಸಿ ಅಸಾಧ್ಯವಾದನ್ನು ಸಾಧಿಸಿ ಎಲ್ಲಾರು ಛಲಗಾರರಾಗಿ ದೇಶದ ಮುನ್ನಡೆಗೆ ಬಾಗಿಯೋಗೋಣ ಬನ್ನಿ..........

# ಜೀವನದ ಅರ್ಥ.........



ನೀಲಾಂಬಿಕ ಎಸ್.
ತೃತೀಯ ಬಿ.ಎ. ಹೆಚ್ಇಪಿ

ಜೀವನದ ಅರ್ಥವೇನು? ಉದ್ದೇಶ ಏನು? ಎನ್ನುವುದು ಪ್ರತಿಯೊಬ್ಬರ ಬದುಕಿನಲ್ಲಿ ಒಂದಲ್ಲ–ಒಂದು ದಿನ ಕಾಣಿಸಿಕೊಳ್ಳುವ ಪ್ರಶ್ನೆ. ಇದೇ ಪ್ರಶ್ನೆಯೊಂದಿಗೆ ಯುವಕನೊಬ್ಬ ಬದುಕಿನ ಅರ್ಥ ತಿಳಿಯಬೇಕೆಂಬ ಜಿಜ್ಞಾಸೆಯಿಂದ ಮನೆ ಬಿಟ್ಟು ಎಲ್ಲೆಡೆ ತಿರುಗಿದ. ಅನೇಕ ಸಾಧು–ಸಂತ, ಮಹಾತ್ಮರನ್ನು ಭೇಟಿಯಾದ ಎಲ್ಲಿ ಹೋದರೂ ಆತನಿಗೆ ಸರಿಯಾದ ಉತ್ತರ ಸಿಗದೇ ಇದ್ದಾಗ, ಕೊನೆಗೆ ಭೇಟಿಯಾದ ಸಾಧು ಒಬ್ಬ ಹೇಳುತ್ತಾನೆ. "ಎಲ್ಲಿ ಹೋದರೂ ಯಾವುದೇ ಜಪ, ತಪ, ಮೌನ, ಧ್ಯಾನ ಯಾವುದೂ ಉಪಯೋಗವಾಗುವುದಿಲ್ಲ. ನೀನು ಊರಿಗೆ ಹೋಗು, ಹೋಗುವ ದಾರಿಯಲ್ಲಿ ಮೂರು ಜನ ನಿನಗೆ ಸಿಗುತ್ತಾರೆ. ಅವರು ನಿನಗೆ ಜೀವನದ ಅರ್ಥವನ್ನು ತಿಳಿಸಿಕೊಡುತ್ತಾರೆ" ಅಂದ.

ಹೋಗುವಾಗ ಮೊದಲು ಸಿಕ್ಕಿರುವ ಓರ್ವ ಬಡಗಿ, ಆತನನ್ನು ನೋಡಿ "ಸಾಧುಗಳು ಜೀವನದ ಅರ್ಥವನ್ನು ನಿನ್ನಿಂದ ಕೇಳುವುದಕ್ಕೆ ಹೇಳಿದ್ದಾರೆ" ಅಂದಾಗ ಆತ ಹೇಳುತ್ತಾನೆ. "ನಾನೊಬ್ಬ ಬಡಗಿ, ನನಗೇನು ಗೊತ್ತು ಜೀವನದ ಅರ್ಥ? ನಾನು ಮರದಿಂದ ಮೇಜು, ಕುರ್ಚಿ ಇತ್ಯಾದಿ ಮಾಡುವುದಷ್ಟೆ ನನ್ನ ಕೆಲಸ" ಅನ್ನುತ್ತಾನೆ. ಅಲ್ಲಿಂದ ಮುಂದೆ ಹೋದಾಗ ಕಮ್ಮಾರನೊಬ್ಬ ಸಿಕ್ಕಿ, ಅವನಲ್ಲೂ ಅದೇ ಪ್ರಶ್ನೆ ಕೇಳುತ್ತಾನೆ. "ನಾನೊಬ್ಬ ಕಮ್ಮಾರ, ಕಬ್ಬಿಣ ಕಾಯಿಸಿ ತಂತಿ ಮಾಡುವುದಷ್ಟೇ ನನ್ನ ಕೆಲಸ. ಜೊತೆಗೆ ಗಾಲಿ, ಕೀಲು ಎಲ್ಲಾ ಮಾಡುತ್ತೇನೆ. ಆ ಕೆಲಸದ ಬಗ್ಗೆ ಬೇಕಿದ್ದರೆ ಹೇಳಬಲ್ಲೆ" ಅನ್ನುತ್ತಾನೆ. ಇನ್ನಷ್ಟು ದೂರ ಹೋಗುವಾಗ ಮೂರನೆಯ ವ್ಯಕ್ತಿಯೊಬ್ಬ ಮರಕ್ಕೆ ತಂತಿ ಜೋಡಿಸುತ್ತಾ ಪಿಟೀಲು ತಯಾರಿಸುತ್ತಿದ್ದ. ಆತನಲ್ಲಿ ಪ್ರಶ್ನಿಸೋಣವೆಂದರೆ ಆತ ಇವನ ಕಡೆ ತಿರುಗಿಯೂ ನೋಡದೆ, ತನ್ನ ಕೆಲಸ ಮುಂದುವರಿಸಿದ. ಆಗ ಈ ಯುವಕನಿಗೆ ಬೇಸರವಾಯ್ತು". "ಸ್ವಾಮೀಜಿಯವರು ಏನೋ ಸುಳ್ಳು ಹೇಳಿ ತನ್ನನ್ನು ಕಳುಹಿಸಿಬಿಟ್ಟಿದ್ದಾರೆ. ನನ್ನ ಪ್ರಶ್ನೆಗೆ ಉತ್ತರವೇ ಸಿಕ್ಕಿಲ್ಲ" ಅನ್ನುತ್ತಾ ಬೇಸರದಿಂದ ಮನೆಗೆ ಬಂದು ಮಲಗಿದರೆ ದೂರದಿಂದ ಸುಮಧುರನಾದ ತೇಲಿ ಬರುತ್ತಾ ಇತ್ತು. ಈಗ ಹೊರಗೆ ಬಂದು ನೋಡಿದರೆ ಹುಡುಗನೊಬ್ಬ ಮರದಡಿಯಲ್ಲಿ ಪಿಟೀಲು ನುಡಿಸುತ್ತಾ ತನ್ಮಯನಾಗಿದ್ದರೆ, ಸುತ್ತ ಮುತ್ತ ಜನ ನಿಂತು ಮಂತ್ರಮುಗ್ಧರಾಗಿ ಈ ನಾದಕ್ಕೆ ತಲೆ ಆಡಿಸುತ್ತಿದ್ದರು. ಈಗ ಹುಡಗನಿಗೆ ಸಾಧು ಹೇಳಿದ ಮಾತಿನ ಆಂತರ್ಯದ ಅರಿವಾಯಿತು. "ಬದುಕೆಂದರೆ ಇದೇ, ನಿರ್ಜೀವವಾಗಿದ್ದ ಮರ, ತಂತಿಯನ್ನು ಬಡಗಿ ಕಮ್ಮಾರ ಸರಿಯಾದ ಕಡೆ ಜೋಡಿಸಿದರೆ ತನ್ನ ನಾದದಿಂದ ಹುಡುಗ ಅದಕ್ಕೆ ಜೀವ ತುಂಬಿದ್ದಾನೆ. ಈ ನಾದ ಹೊಮ್ಮಿಸೋ ಕಲೆ ನಮ್ಮ ಅಂತರಾಳದಿಂದ ಬಂದಾಗ ಬದುಕಿ ಗೊಂದು ಅರ್ಥ, ಒಂದು ಸಾರ್ಥಕತೆ ಎಂದು.

ಅದು ಯಾವುದೇ ಕೆಲಸವಾಗಿರಲಿ, ಅದನ್ನು ಕಲಾತ್ಮಕವಾಗಿ ಮಾಡಿದಾಗ, ಅದಕ್ಕೊಂದು ಸಾರ್ಥಕತೆ ಬರುತ್ತದೆ. ಶಾಲೆ, ಕಟ್ಟೆ, ಪುಸ್ತಕಗಳು ನಿರ್ಜೀವ.

ಆದರೆ ಓರ್ವ ಒಳ್ಳೆ ಅಧ್ಯಾಪಕ ತನ್ನ ಬುದ್ಧಿ ಶಕ್ತಿಯಿಂದ ಮಕ್ಕಳ ಮನಸ್ಸು, ಬುದ್ಧಿಗಳಲ್ಲಿ ಒಳ್ಳೆಯ ವಿಚಾರಗಳನ್ನು ಯೋಚನೆಗಳನ್ನು ತುಂಬಿ, ಅವರನ್ನು ಶ್ರೇಷ್ಠವ್ಯಕ್ತಿಗಳನ್ನಾಗಿ ಪರಿವರ್ತಿಸಲು ಸಾಧ್ಯವಾಗುತ್ತದೆ.

ಹಾಗೇ ಜೀವನಕ್ಕೆ ಅದರದೇ ಆದ ಅರ್ಥ ಇರುವುದಿಲ್ಲ. ಆದರೆ ಜೀವನವನ್ನು ಅರ್ಥ ಪೂರ್ಣವಾಗಿಸುವ ಶಕ್ತಿಯನ್ನು ದೇವರು ಕೊಟ್ಟಿದ್ದಾನೆ.

ಅದೇ ನಮ್ಮ ಸಾಧನೆ. ಒಂದೇ ಜನ್ಮದಲ್ಲಿ ಕೆಲವರು ಬಹಳಷ್ಟನ್ನು ಸಾಧಿಸಿ, ಸಿಕ್ಕಿದ ಅವಕಾಶಗಳನ್ನು ಚೆನ್ನಾಗಿ ಬಳಸಿ, ದೊಡ್ಡ ಸಾಧನೆಯನ್ನೇ ಮಾಡುತ್ತಾರೆ. ಕೆಲವರು ತಮ್ಮ ಅಲ್ಪ ಸಾಮರ್ಥ್ಯ ಅವಕಾಶವನ್ನು ಬಳಸಿ, ತಮ್ಮ ಕೈಲಾದ ಸಾಧನೆಯನ್ನು ಮಾಡುತ್ತಾರೆ. ಸೂರ್ಯನ ಶಕ್ತಿಯೂ ಬೆಳಕನ್ನು ಕೊಡುವಂತಹದು. ಚಿಕ್ಕ ಹಣತೆಯೂ ಬೆಳಕನ್ನು ಕೊಟ್ಟು ಸುತ್ತಮುತ್ತ ಬೆಳಕಾಗಿಸಬಲ್ಲದು. ಮನೆ ಬೆಳಗಿಸಲು ದೀಪದ ಬೆಳಕೂ ಸಾಕಾಗುತ್ತದೆ. ಸಮಾಜಕ್ಕೆ ಬೆಳಕಾಗದಿದ್ದರೆ ಬಿಡಿ, ಮನೆ ಬೆಳಗಿಸೋ ದೀಪವಾದರೂ ಆಗೋಣ..........

## ಅವಳೇ ಅಮ್ಮ

ನೀನು ನನ್ನ ಜೀವಕ್ಕೆ ಉಸಿರುಕೊಟ್ಟ ದೇವತೆ
ನನಗೆ ಪ್ರೀತಿ ಸಹನೆಯಿಂದ ಬದುಕುವ ಪಾಠ ಕಲಿಸಿದ ಮಾತೆ
ಜಗತ್ತಿನಲ್ಲಿ ಬೇರೆ ಯಾರು ಕೊಡಲಾರದು ತಾಯಿಯ ಮಮತೆ
ನೀ ಸದಾ ನಗುತ್ತಿದ್ದರೆ ಬರಲಾರದು ನನಗೆ ಯಾವುದೇ ಕೊರತೆ
ಅಮ್ಮ ನಿನ್ನ ಪಾದಕ್ಕೆ ಸಮರ್ಪಿಸುವೆ ಈ ನನ್ನ ಪುಟ್ಟ ಕವಿತೆ

ಒಂದು ತಾಯಿ ಹತ್ತು ಮಕ್ಕಳನ್ನ ಸಾಕ್ತಾಳೆ
ಆದರೆ ಹತ್ತು ಮಕ್ಕಳು ಒಂದು ತಾಯಿನಾ
ಸಾಕೋಕೆ ಯೋಚನೆ ಮಾಡ್ತಾರೆ
ಬದುಕು ಎಷ್ಟು ನಿಗೂಢ ಅಲ್ವಾ?
ಆದ್ರೆ ಇದು ಸತ್ಯ ಅಲ್ವ ಸ್ನೇಹಿತೆ
ಅಮ್ಮನ ಪ್ರೀತಿನಾ ಮರೆಯಬೇಡ



# ಬದಲಿಸಿ ಕೊಳ್ಳೋಣ ನಮ್ಮ ಆಲೋಚನೆಗಳನ್ನ!



ಉಮಾ ಎನ್.
ಪ್ರಥಮ ಬಿ.ಕಾಂ.

ಮಾನವನ ಜೀವನದಲ್ಲಿ ಯೋಜನೆ ಆತನ ಯೋಚನೆಗಳನ್ನು ಯಶಸ್ವಿಗೊಳಿಸಲು ಆತ ಮಾಡುವ ಕ್ರಿಯೆ. ಯೋಜನೆಯೆಂದರೆ ಆತನ ಕೆಲಸ-ಕಾರ್ಯ ಗಳಲ್ಲಿ ಪರಿಪೂರ್ಣತೆ ಅಥವಾ ಯಶಸ್ಸನ್ನು ಗಳಿಸಿಕೊಳ್ಳುವ ಆತ ನಾನಾ ವಿಧವಾದ ಯೋಜನೆಗಳನ್ನು ಮಾಡುತ್ತಾನೆ. ಅವು ಸಕಾರಾತ್ಮಕ ಅಥವಾ ನಕಾರಾತ್ಮಕ ಯೋಜನೆಗಳಿರಬಹುದು.

ನಾವು ಯಾವಾಗಲೂ ಒಳ್ಳೆಯ ಯೋಚನೆಗಳ ನ್ನು ಮಾಡಿದರೆ ಅದರ ಫಲವೂ ಕೂಡ ಉತ್ತಮ ವಾಗಿರುತ್ತದೆ ಹಾಗೇ ಕೆಟ್ಟ ಯೋಚನೆಗಳು ತಮ್ಮ ತನವನ್ನು ಕುಗ್ಗಿಸಿ, ಕೀಳರಿಮೆ ಎಂಬ ಭಾವನೆಗೆ ನೂಕುವುದರಲ್ಲಿ ಸಂಶಯವಿಲ್ಲ. ಆದ್ದರಿಂದ ಆರೋಗ್ಯದಾಯಕ ಯೋಜನೆಗಳಿಂದ ಯಾವಾ ಗಲೂ ಒಳ್ಳೆಯ ಅನುಭವಗಳ ಮಾಲೆ ನಮ್ಮ ದಾಗುತ್ತದೆ. ಇದನ್ನೆಲ್ಲ ನೋಡುತ್ತಿದ್ದರೆ ನನಗೆ ಒಂದು ಸಣ್ಣ ಕಥೆ ನೆನಪಾಗುತ್ತದೆ.

ಒಬ್ಬ ಬ್ರಾಹ್ಮಣನು ಕಾಡಿನಲ್ಲಿ ವಾಸವಾಗಿದ್ದನು, ಆತ ಮರ ಕಡಿಯುವ ವೃತ್ತಿಯನ್ನು ದೇವರ ಕಾರ್ಯ ಎಂದು ಪಾಲಿಸುತ್ತಿದ್ದನು. ಅಂದರೆ ಆತ ಕಾಯಕವೇ ಕೈಲಾಸವೆಂಬಂತೆ ನನ್ನ ಕೆಲಸದಲ್ಲಿ ತೊಡಗುತ್ತಿದ್ದನು. ಒಂದು ದಿನ ಆತ ಕಾಡಿನ ದಾರಿಯಲ್ಲಿ ಬರುವಾಗ ಒಂದು ನರಿ ಬಹಳ ನೋವುಂಟಾಗಿ ಮರದ ಕೆಳಗೆ ಕುಳಿತಿತ್ತು. ಅದಕ್ಕೆ ಸಿಂಹ ಬೇಟೆಯಾಡಿ ಆಹಾರವನ್ನು ನೀಡುತ್ತಿತ್ತು. ಇದನ್ನು ಕಂಡ ಬ್ರಾಹ್ಮಣ ಏನೂ ಕೆಲಸವಿಲ್ಲದೆ ಗಾಯಗೊಂಡಿರುವ ಈ ನರಿಗೆ ದೇವರು ಯಾಕೆ ಆಹಾರವನ್ನು ಅದಕ್ಕೆ ದೊರಕಿಸುತ್ತಿದ್ದಾನೆಂದು ದೇವರ ಮೇಲೆ ಕೋಪಗೊಂಡು ಅದನ್ನ ಅವನ ಬಳಿಯೇ ಕೇಳಬೇಕೆಂದು ಮನೆಗೆ ಬಂದು ಶಿವಲಿಂಗದ ಬಳಿ ಕುಳಿತನು. ಆತ ಮಹಾ ಶಿವಭಕ್ತ ಮುಂಜಾನೆ ದೇವರಿಗೆ ಭೋಜನವಿಟ್ಟು ಬಹಳ ಭಕ್ತಿಯಿಂದ ಪೂಜಿಸುತ್ತಿದ್ದರಿಂದ ಆತನಿಗೆ ತಾನು ಈ ರೀತಿ ಸೇವೆ ಮಾಡಿದರು. ನನಗೆ ಆತ ಯಾವ ದಿನವು ಏನನ್ನು ನೀಡಲಿಲ್ಲವೆಂದು ಮನಸ್ಸಿನಲ್ಲಿ ಶಪಿಸುತ್ತಾ ಭಗವಂತನನ್ನು ಬೇಡಿಕೊಂಡ. ಶಿವ ಪ್ರತ್ಯಕ್ಷನಾಗಿ ಭಕ್ತ ನೀನು ನನ್ನನ್ನು ಯಾಕೆ ಶಪಿಸುತ್ತಿರುವೆ ನಿನ್ನ ಪೂಜೆ ಇಲ್ಲದೆ ಕಂಗಾಲಾಗಿದ್ದೇನೆ ಏನು ನಿನ್ನ ಕೋರಿಕೆ ಎಂದ.

ಬ್ರಾಹ್ಮಣ, ಭಗವಂತ ನಾನು ನಿನಗೆ ಅಷ್ಟು ಕಷ್ಟಪಟ್ಟು ಮರಕಡಿದು ಅದನ್ನು ಮಾರಾಟ ಮಾಡಿ ಬಂದ ಹಣದಿಂದ ನಿನಗೆ ಬಗೆ-ಬಗೆಯ ಭೋಜನವನ್ನ ನೀಡುತ್ತಿದ್ದರು. ನಿನಗೆ ಕರುಣೆ ಇಲ್ಲದೆ ನನಗೆ ಮತ್ತಷ್ಟು ತೊಂದರೆಯನ್ನೇ ನೀಡುತ್ತಿರುವೆ. ಆದರೆ ಆ ನರಿ ಸಾವಿಗೆ ಹತ್ತಿರವಾಗುತ್ತಿದೆ. ಅದಕ್ಕೆ ಆಹಾರವನ್ನ ನೀಡುತ್ತಿರುವೆ ಎಂದು ಪ್ರಶ್ನಿಸಿದನು. ದೇವರು ಅದಕ್ಕೆ ಅಯ್ಯೋ ಭಕ್ತನೇ ನಿರುಪಯುಕ್ತ ವಾಗಿರುವ ನರಿಯನ್ನ ನೋಡುವ ಬದಲು ಅದಕ್ಕೆ ಬೇಟೆಯಾಡಿ ನೀಡುತ್ತಿರುವ ಸಿಂಹವನ್ನು ನೀನೇಕೆ ನೋಡಲಿಲ್ಲ ಎಂದನು. ನರಿ ಅಸಹಾಯಕ ಸ್ಥಿತಿಯಲ್ಲಿದೆ. ಆದರೆ ಅದನ್ನ ರಕ್ಷಿಸುತ್ತಿರುವ ಸಿಂಹದ ರೀತಿ ನೀನಾಗು ಎಂದು ಭಗವಂತ ಮಾಯವಾದನು. ಆಗ ಬ್ರಾಹ್ಮಣ ತನ್ನ ತಪ್ಪಿನ ಅರಿವಾಗಿ ನಾನು ಸಂಕುಚಿತ ಮನಸ್ಸಿನಿಂದ ನರಿಯನ್ನೇ ದೃಷ್ಟಿಸಿ ನೋಡಿದೆ. ಆದರೆ ಸಿಂಹದ ಮನೋಭಿಲಾಷೆಯನ್ನು ತಿಳಿಯದೆಹೋದೆ ಎಂದು ತನ್ನನ್ನು ತಾನೇ ಜರಿದುಕೊಂಡು ತನ್ನನ್ನ ಅರಿವಿನ ಸಾಗರಕ್ಕೆ ತಂದ ಭಗವಂತನಿಗೆ ನಮಿಸಿದನು.

ಈ ರೀತಿ ನಾವು ಯಾವುದೇ ಕೆಲಸವನ್ನು, ವಸ್ತುವನ್ನು, ವಾಸ್ತವ ಸ್ಥಿತಿಯನ್ನು ಬಹಳ ಸೂಕ್ತವಾಗಿ ಅವಲೋಕಿಸಿದರೆ ನಮ್ಮ ಮನೋಭಾವನೆ ಮನೋಜ್ಞ ವಾಗಿರುತ್ತದೆ. ಮೆದುಳು ಯೋಚನೆಗಳನ್ನ ಹಿಡಿದಿಟ್ಟು ಕೊಳ್ಳುವ ಪಂಜರವಲ್ಲ ಅದೊಂದು ಉದ್ಯಾನ ಅಲ್ಲ, ಒಳ್ಳೆಯದರ ಫಸಲು ಪಡೆಯಬೇಕೆಂದರೆ ಉತ್ತಮ ಹವ್ಯಾಸಗಳ ಬಿತ್ತನೆ ಆಗಬೇಕು "ಒಳ್ಳೆಯದೇ ಕೈಗೊಳ್ಳಿರಿ ಒಳ್ಳೆಯದನ್ನೇ ಆಲೋಚಿಸಿರಿ"

ಉತ್ತಮ ಆಲೋಚನೆ ಪರಿಪೂರ್ಣ ವ್ಯಕ್ತಿತ್ವಕ್ಕೆ ನಾಂದಿ ಹಾಡುತ್ತದೆ.

# ಶಾಲೆಯಲ್ಲೇ ಮಗುವಿನ ಸಮಾಜ



ಯಶೋದ ಸಿ.
ದ್ವಿತೀಯ ಬಿ.ಎ. ಹೆಚ್‌ಇಪಿ

ಮಾನವ ಮೂಲತಃ ಸಂಘಜೀವಿ. ಸಮೂಹದಲ್ಲಿ ಜೀವಿಸುವುದು, ಗುಂಪಿನಲ್ಲಿ ಒಂದಾಗುವುದು ಇವು ಸಹಜ ಲಕ್ಷಣಗಳು. ಹೀಗೆ ಸಮೂಹದಲ್ಲಿ ಒಂದಾಗಿ ಅದರ ನಿಯಮ, ರೀತಿ, ನೀತಿ, ಸಂಸ್ಕೃತಿಗಳನ್ನು ಅರಿತು ಬಾಳುವುದು ಮತ್ತು ಇತರರನ್ನು ಬಾಳಗೊಡುವುದು "ಸಾಮಾಜೀಕರಣ" ಎನ್ನಿಸಿಕೊಳ್ಳುತ್ತದೆ.

"ಸಾಮಾಜೀಕರಣ" ಒಂದು ಬಹುಮುಖ ಪ್ರಕ್ರಿಯೆ. ಇದು ಜನ್ಮ ಜಾತವಾಗಿ ಬರುವ ಗುಣದಲ್ಲಿ, ಕುಟುಂಬ ಸಂಬಂಧಿಗಳು, ಗೆಳೆಯರ ಬಳಗ, ತರಗತಿ, ಶಾಲೆ, ಸಮಾಜ, ಪರಿಸರ ಸಂಘ, ಸಂಸ್ಥೆಗಳ ಒಡನಾಟದಲ್ಲಿ ನಡೆಸುವ ಅಂತರಾನುಕ್ರಿಯೆಯಿಂದ ಒಂದು ಮಗು 'ಸಾಮಾಜೀಕೃತ'ಗೊಳ್ಳುತ್ತದೆ. ಕುಟುಂಬ ಸಾಮಾಜೀಕರಣದ ಮೊದಲ ನಿಯೋಗವೆನಿಸಿದರೂ ಮಗುವಿನ ನಿಜವಾದ ವ್ಯಕ್ತಿತ್ವ ರೂಪುಗೊಳ್ಳುವುದು. ಅದು ಬಹುಮುಖ ಸಾಮಾಜಿಕ ಆಯಾಮವನ್ನು ರೂಢಿಸಿಕೊಳ್ಳುವುದು ಶಾಲೆಯಲ್ಲಿ.

ಮಗು ಶಾಲೆಯ ಸಂಘಟಿತ ವಾತಾವರಣದಲ್ಲಿ ಔಪಚಾರಿಕ ಶಿಕ್ಷಣವನ್ನು ಆರಂಭಿಸುವ ಮೊದಲು ಕುಟುಂಬ ವ್ಯಾಪ್ತಿಯಲ್ಲಿ ನಿಗದಿತ ಪ್ರಮಾಣದ "ಸಾಮಾಜೀಕರಣ" ಹೊಂದಿರುತ್ತದೆ.

ಇಲ್ಲಿ ಸಾವಾಜೀಕರಣ ವೈಯುಕ್ತಿಕ, ಕೌಟುಂಬಿಕ ಸಂಬಂಧಗಳನ್ನು ಅರಿಯುವುದಕ್ಕೆ ಸೀಮಿತ ವಾಗಿರುತ್ತದೆ. ಆದರೆ, ಮಗು ಶಾಲೆಗೆ ಕಾಲಿಟ್ಟ ನಂತರ ಸಮಾಜಕ್ಕೆ, ಪೂರ್ಣ ಪ್ರಮಾಣದ ಸಾಮಾಜೀಕರಣಕ್ಕೆ ತೆರೆದುಕೊಳ್ಳುತ್ತದೆ.

"ಕುಟುಂಬ ಸಾಮಾಜೀಕರಣದ ಮೊದಲ ನಿಯೋಗವೆನಿಸಿದರೂ ಮಗುವಿನ ನಿಜವಾದ ವ್ಯಕ್ತಿತ್ವ ರೂಪಗೊಳ್ಳುವುದು ಅದು ಬಹುಮುಖಿ. ಸಾಮಾಜಿಕ ಆಯಾಮವನ್ನು ರೂಢಿಸಿಕೊಳ್ಳುವುದು ಶಾಲೆಯಲ್ಲಿ. ಮಗು ಶಾಲೆಗೆ ಕಾಲಿಟ್ಟ ನಂತರ ಸಮಾಜಕ್ಕೆ ಪೂರ್ಣ ಪ್ರಮಾಣದ ಸಾಮಾಜೀಕರಣಕ್ಕೆ ತೆರೆದುಕೊಳ್ಳುತ್ತದೆ.

**ಶಾಲೆಯಲ್ಲಿ "ಸಾಮಾಜೀಕರಣ"**

- ಮಗು ಶಾಲೆಯಲ್ಲಿ ಕೌಟುಂಬಿಕ ಸಂಬಂಧಗಳನ್ನು ಮೀರಿ, ಸಹಪಾಠಿಗಳು, ಶಿಕ್ಷಕರು, ಹಿರಿಯ–ಕಿರಿಯ ಸ್ನೇಹಿತರು, ಶಾಲಾ ಸಿಬ್ಬಂದಿ ಶಿಕ್ಷಣಾಧಿಕಾರಿಗಳು ಹೀಗೆ ಹಲವು ಜನರೊಂದಿಗೆ ಬೆರೆಯುತ್ತದೆ.
- ಶಾಲೆಯ ಚಟುವಟಿಕೆ, ವೇಳಾಪಟ್ಟಿಯಂತೆ ಪಠ್ಯ, ಪಠ್ಯೇತರ ಹಾಗೂ ಸಹಪಠ್ಯ ಚಟುವಟಿಕೆಗಳ ಮೂಲಕ ಆರಂಭವಾಗಿ ಮಗುವಿನಲ್ಲಿ ಮೂಲ ಜ್ಞಾನಾತ್ಮಕ, ಭಾವನಾತ್ಮಕ, ಚಲನಾತ್ಮಕ, ಭಾಷಾ ಸಾಮರ್ಥ್ಯ, ಗಣಿತೀಯ ಕೌಶಲ, ಬುದ್ಧಿ ಶಕ್ತಿ ಕೌಶಲಗಳನ್ನು ಬೆಳೆಸಲಾಗುತ್ತದೆ.
- ಶಾಲೆಯಲ್ಲಿಯೇ ಮಗುವಿಗೆ ಲಿಂಗ ವಿಭಿನ್ನತೆ ಹಾಗೂ ಅದಕ್ಕೆ ಸಂಬಂಧಿಸಿದ ಜವಾಬ್ದಾರಿಗಳ ಸ್ಪಷ್ಟ ಅರಿವು ಉಂಟಾಗುತ್ತದೆ. ಮಗುವಿನ ಮಾನಸಿಕ ಪರಿಧಿ ಹೆಚ್ಚಿ ಸಮಾಜದಲ್ಲಿ ತನ್ನ ಪಾತ್ರವೇನು? ಎಂದು ಅರಿಯಲು ಪ್ರಯತ್ನಿಸುತ್ತದೆ.
- ಶಾಲೆ ವರ್ತನೆಗೆ ಶಿಸ್ತಿನ ಚೌಕಟ್ಟನ್ನು ಹಾಕಿ, ಮಗುವಿನಲ್ಲಿ ಮೌಲ್ಯಗಳು, ನೈತಿಕತೆಯ ಅರಿವನ್ನು ಉಂಟು ಮಾಡುತ್ತದೆ. ಮಗು ಶಿಸ್ತು, ಸಂಯಮ, ಬದ್ಧತೆಯಿಂದ ನಡೆದುಕೊಳ್ಳಲು, ಅಪೇಕ್ಷಿತ ಮನೋಧೋರಣೆ, ಹವ್ಯಾಸಗಳನ್ನು ರೂಢಿಸಲು ಇದು ಪೂರಕವಾಗಿರುತ್ತದೆ.
- ವಸ್ತು, ವಿಷಯ, ವಿಚಾರಗಳ ಹಂಚಿಕೆಯ ಪರಿಕಲ್ಪನೆಯನ್ನು ಮಗು ಕಲಿಯುವುದು ಶಾಲೆಯಲ್ಲಿಯೇ, ತಾನು ತಂದಿರುವ ತಿಂಡಿ, ಬರೆದಿರುವ ನೋಟ್ಸ್, ಪೆನ್ನು, ಪೆನ್ಸಿಲ್, ನೀರು, ಕೊಡೆ... ಇತ್ಯಾದಿ ವಸ್ತುಗಳನ್ನು ತನ್ನ ಭಾವನೆ, ಅಭಿಪ್ರಾಯಗಳನ್ನು ತನ್ನ ಸಹಪಾಠಿಗಳೊಂದಿಗೆ, ಶಿಕ್ಷಕರೊಂದಿಗೆ ಹಂಚಿ ಕೊಳ್ಳುವ ಮೂಲಕ ಸಹಕಾರ, ಸಹಬಾಳ್ವೆ, ಸಮನ್ವಯ ಗುಣಗಳನ್ನು ಬೆಳೆಸಿಕೊಳ್ಳುತ್ತದೆ.

- ರಾಷ್ಟ್ರೀಯ ಹಾಗೂ ಧಾರ್ಮಿಕ ಹಬ್ಬಗಳ ಆಚರಣೆಯ ಮೂಲಕ ಮಕ್ಕಳಲ್ಲಿ ವೈವಿಧ್ಯದಲ್ಲಿ ಏಕತೆ, ಸಾಮರಸ್ಯ, ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಶಾಲೆವೃದ್ಧಿಸುತ್ತದೆ.
- ಶಾಲೆ ಸಂಘಟಿಸುವ ಪಠ್ಯ, ಪಠ್ಯೇತರ ಸಹಪಠ್ಯ ಚಟುವಟಿಕೆಗಳು, ಶಿಬಿರ, ಪ್ರವಾಸ, ವನಭೋಜನ, ಸಭೆ, ಸಮಾರಂಭ, ಉತ್ಸವ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಸ್ಪರ್ಧೆಗಳು........ ಇತ್ಯಾದಿ ಸಾಮುದಾಯಿಕ ಚಟುವಟಿಕೆಗಳಲ್ಲಿ ಮಗು ಪಾಲ್ಗೊಳ್ಳುವ ಮೂಲಕ ಸಾಮಾಜಿಕ ವ್ಯವಸ್ಥೆಯನ್ನು ಅರಿತುಕೊಳ್ಳಲು ತಾನೂ ಕೂಡ ಸಮಾಜದ ಒಂದು ಭಾಗ ಎಂದು ಪರಿಭಾವಿಸಿ, ತನ್ನ ತನ ಗುರುತಿಸಿಕೊಳ್ಳಲು, ತನ್ನತನವನ್ನು ಅಭಿವ್ಯಕ್ತಿಸಲು ಸಮರ್ಥವಾಗುತ್ತದೆ. ತನ್ನತನ ಅರಿತುಕೊಳ್ಳುವುದು, ಅಭಿವ್ಯಕ್ತಿಸುವುದು ಮಗುವಿನ ವ್ಯಕ್ತಿತ್ವಕ್ಕೆ ಬುನಾದಿಯಾಗುತ್ತದೆ.

ಹೀಗೆ ಸಾಮಾಜೀಕರಣದ ವಿವಿಧ ಆಯಾಮಗಳ ಕಲಿಯುವಿಕೆ, ಅರಿಯುವಿಕೆ, ರೂಢಿಸಿಕೊಳ್ಳುವಿಕೆಯಲ್ಲಿ ಮಗು, ಬಾಲ್ಯಾವಸ್ಥೆ, ಕೌಮಾರ್ಯಾವಸ್ಥೆಯನ್ನು ದಾಟಿ ಪ್ರೌಢಾವಸ್ಥೆಗೆ ಕಾಲಿಡುವವರೆಗೆ ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳ ಮೂಲಕ ಮುಂದುವರಿಯುತ್ತದೆ. ಮಗು ಪ್ರೌಢಾವಸ್ಥೆ ತಲುಪಿ ತನ್ನ ಜೀವನಕ್ಕೆ ಸಂಬಂಧಿಸಿದ ನಿರ್ಣಯ, ಆಯ್ಕೆಗಳಲ್ಲಿ ಸ್ವಾವಲಂಬಿಯಾದಾಗ ಸಾಮಾಜೀಕರಣ ಪ್ರಕ್ರಿಯೆ ಪೂರ್ಣವಾ ದಂತಾಗುತ್ತದೆ.

**ಪೋಷಕರು, ಶಿಕ್ಷಕರ ಪಾತ್ರವೇನು?**

ಮಗುವಿನ ವ್ಯಕ್ತಿತ್ವ ರೂಪಿಸುವ ಜವಾಬ್ದಾರಿ ಪೋಷಕರು (ಕುಟುಂಬ) ಹಾಗೂ ಶಿಕ್ಷಕರು (ಶಾಲೆ) ಇಬ್ಬರಿಗೂ ಸೇರಿದೆ. ಮಗು ಚಟುವಟಿಕೆಯುತ ವಾಗಿರುವ ದಿನದ ಹೆಚ್ಚಿನ ಅವಧಿಯನ್ನು ಮನೆಗಿಂತ ಹೆಚ್ಚಾಗಿ ಪೋಷಕರು ಮಗುವಿನ ಜೊತೆ ಶಾಲಾ ಸಂಬಂಧಿತ ವಿಷಯಗಳನ್ನೇ ಚರ್ಚಿ ಸುತ್ತಾರೆ. ನಂತರವೂ ಹೋಂವರ್ಕ್ ರೂಪದಲ್ಲಿ ಶಾಲಾ ಚಟುವಟಿಕೆಯೇ ಮುಂದುವರಿಯುತ್ತದೆ. ಹೀಗಾಗಿ, ಪೋಷಕರಿಗಿಂತಲೂ ಶಿಕ್ಷಕರ ಮೇಲೆಯೇ ಮಗುವಿನ ಜವಾಬ್ದಾರಿ ತುಸು ಹೆಚ್ಚು ಎಂದು ಹೇಳಬಹುದು.

- ಮಗುವು ಸಾಮಾಜೀಕರಣ ಹೊಂದುವ ನಿಟ್ಟಿನಲ್ಲಿ ಪೋಷಕರು, ಶಿಕ್ಷಕರು ವಿಧಿಸುವ ಅತಿಯಾದ ನಿರ್ಬಂಧಗಳು ಅಡ್ಡಿಯಾಗಬಾರದು. ಕೋಣೆಯ ಕೂಸು ಕೊಳೆಯುತ್ತದೆ ಎಂಬುದು ನೆನಪಿರಲಿ.
- ಮಗುವನ್ನು ಇತರ ಮಕ್ಕಳೊಂದಿಗೆ ಬೆರೆಯಲು, ಅವರೊಡನೆ ಆಟವಾಡಲು, ಊಟ ಮಾಡಲು, ಅಧ್ಯಯನ ಮಾಡಲು ಅನುವು ಮಾಡಿಕೊಡಬೇಕು.
- ಸಾಧ್ಯವಾದಷ್ಟು ಮಕ್ಕಳನ್ನು ಟಿವಿ, ಮೊಬೈಲ್, ಕಂಪ್ಯೂಟರ್‌ಗಳಿಂದ ದೂರವಿಟ್ಟು ಹೊರಗಡೆ ಸುತ್ತಾಡಿಸಬೇಕು. ಸುತ್ತಲಿನ ಪರಿಸರ, ಸ್ಥಳಗಳನ್ನು ಪರಿಚಯಿಸಿಕೊಳ್ಳಲು ಅವಕಾಶ ಮಾಡಿಕೊಡಬೇಕು.
- ಧಾರ್ಮಿಕತೆ, ಜಾತಿಯ ಕಟ್ಟಳೆ ಮೀರಿ ಮಕ್ಕಳಿಗೆ ಸಾಮರಸ್ಯ ಸಮನ್ವಯತೆಯ ಪಾಠ ಕಲಿಸಬೇಕು.
- ರಾಷ್ಟ್ರೀಯ ದಿನಾಚರಣೆಗಳಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಿ ಮಕ್ಕಳಲ್ಲಿ ರಾಷ್ಟ್ರೀಯತೆ, ರಾಷ್ಟ್ರಭಕ್ತಿಯನ್ನು ಬೆಳೆಸಬೇಕು.
- ಸಾಮುದಾಯಿಕ ಚಟುವಟಿಕೆಗಳು, ಸಮಾಜ ಸೇವೆಯಲ್ಲಿ ಪಾಲ್ಗೊಳ್ಳಲು ಮಗುವಿಗೆ ಅವಕಾಶ ಒದಗಿಸಬೇಕು. ಇದರಿಂದ ಮಗುವಿನಲ್ಲಿ ಸಾಮಾಜಿಕ ಜವಾಬ್ದಾರಿಯ ಅರಿವು ಮೂಡುತ್ತದೆ.
- ಶಿಕ್ಷಕರು ಹಾಗು ಪೋಷಕರು ಮಗುವಿಗೆ, ಬಾಲ್ಯಾವಸ್ಥೆ,ಕೌಮಾರ್ಯಾವಸ್ಥೆಯಲ್ಲಿಆಯಾ ವಯೋಮಾನಕ್ಕೆ ಅನುಗುಣವಾದ ಉತ್ತಮ ಮಾರ್ಗದರ್ಶನ ನೀಡಿ, ಸ್ವಯಂ ಮಾದರಿಯಾಗಿ ಮಕ್ಕಳನ್ನು ಸಾಮಾಜೀಕೃತಗೊಳಿಸಬೇಕು.
- ಮಗುವಿನಲ್ಲಿ ಸಮಸ್ಯಾತ್ಮಕ ವರ್ತನೆ ಕಂಡುಬಂದರೆ, ಶಿಕ್ಷಕರು, ಪೋಷಕರು ಮಗುವಿನ ಜೊತೆ ಸಮಾಲೋಚನೆ ನಡೆಸಿ, ಸಮಸ್ಯೆ ಪರಿಹರಿಸಲು ಆದ್ಯತೆ ನೀಡಬೇಕು. ಅಗತ್ಯಬಿದ್ದರೆ, ಆಪ್ತಸಮಾಲೋಚಕರು, ಮನೋವೈದ್ಯರ ನೆರವು ಪಡೆಯಬೇಕು.

## ತುಡಿತ-ಮಿಡಿತ

ತೇಜಸ್ವಿನಿ ಎಂ.
ಪ್ರಥಮ ಬಿ.ಎ., ಹೆಚ್‌ಇಪಿ

**ಭ್ರೂಣದೊಳಗಿನ ಮಾತು...........**

ನನಗೂ ಕಣ್ಣು ತೆರೆಯಲು ಬಿಡಿ

ಜಗತ್ತು ಸುಂದರವಷ್ಟೇ ಅಲ್ಲ. ಕ್ರೂರ ಕೂಡ ಯಾಕೆ ಗೊತ್ತಾ? ಅಲ್ಲಿ ತುಂಬ ಜನರಿಗೆ ಹೆಣ್ಣುಮಗು ಹುಟ್ಟುವುದು ಇಷ್ಟವೇ ಇಲ್ಲ. ಅಪ್ಪ, ಅಜ್ಜಿ, ತಾತ ಇವರ್‍ಯಾರಿಗೂ ಮನೆಯಲ್ಲಿ ಹೆಣ್ಣು ಕೂಸು ಹುಟ್ಟೋದೇ ಬೇಡ. ಅಮ್ಮನ ಹೊಟ್ಟೆಯಲ್ಲಿರುವ ಮಗು ಯಾವುದು ಅಂತ ಪರೀಕ್ಷೆ ಮಾಡಿಸುತ್ತಾರಂತೆ ಗಂಡಾದರೆ ಬಚಾವ್! ಹೆಣ್ಣಾಗಿದ್ದರೆ ಅಮ್ಮನ ಹೊಟ್ಟೆಯಲ್ಲೇ ಸಾಯಿಸಿಬಿಡುತ್ತಾರಂತೆ. ನನ್ನ ದುರಾದೃಷ್ಟ ನಾನೂ ಹೆಣ್ಣೇ......! ಅಯ್ಯೋ.....! ಹಾಗಿದ್ದರೆ ನನ್ನನ್ನೂ ಸಾಯಿಸಿ ಬಿಡುತ್ತಾರಾ? ನನ್ನಪ್ಪ ಅಷ್ಟೊಂದು ಕ್ರೂರಿಯೇ.....?

ಜಗತ್ತು ಎಷ್ಟೊಂದು ಸುಂದರವಾಗಿದೆಯಂತೆ! ಅಮ್ಮ ಹೇಳುವುದನ್ನು ನಾನೂ ಕೇಳಿಸಿಕೊಂಡಿದ್ದೇನೆ. ಹಸಿರು, ಹಳ್ಳ-ಕೊಳ್ಳ, ಕಾಡು-ಬೆಟ್ಟ, ನದಿ ಜೊತೆಗೆ ದೊಡ್ಡ ದೊಡ್ಡ ನಗರ, ಪಟ್ಟಣ, ಬೆರಗು-ಬೆಡಗು ಇದೆಲ್ಲವನ್ನೂ ನೀವೆಲ್ಲಾ ನೋಡುತ್ತಿದ್ದೀರಿ. ಎಲ್ಲದರ ಅಂದ ಸವಿಯುತ್ತಾ ಅಪ್ಪ-ಅಮ್ಮ, ಅಣ್ಣ-ಅಕ್ಕ ಸೇರಿದಂತೆ ಮನೆಯ ಎಲ್ಲರೊಡನೆ ಇರಬೇಕು ಅಂತ ಆಸೆ. ಅಪ್ಪ, ಅಣ್ಣ, ಅಕ್ಕ, ಅಜ್ಜಿ, ಅಲ್ಲದೆ ಮನೆಯಲ್ಲಿ ಇನ್ನೂ ಯಾರ್‍ಯಾರಿದ್ದಾರೋ ನನಗೆ ಗೊತ್ತಿಲ್ಲ. ಇವರೆಲ್ಲರನ್ನೂ ಕಾಣುವ ಸಮಯ ಬರೋದು ಯಾವಾಗ ಎಂದು ನಾನೂ ಕಾಯುತ್ತಿದ್ದೇನೆ. ಎಲ್ಲರನ್ನೂ ಮುದ್ದಿಸಿ, ಮುದ್ದಿಸಿಕೊಂಡು, ಕಾಡಿ-ಬೇಡಿ, ಗೋಳಾಡಿಸಿ, ರಂಪವಾಡಿ ಬೆಳೆಯುವ ದಿನಗಳಿಗಾಗಿ ಕಾಯುತ್ತಿದ್ದೇನೆ.

ಅಮ್ಮನ ಹೊಟ್ಟೆಯಲ್ಲಿ ಇದ್ದಾಗಿನಿಂದ ದಿನ ಎಣಿಸುತ್ತಿದ್ದೇನೆ. ಇಲ್ಲಿನ ವಾಸ ಒಂಬತ್ತೇ ತಿಂಗಳಂತೆ. ಆಮೇಲೆ ನಿನ್ನೊಂದಿಗೆ ಖುಷಿಯಾಗಿರಬಹುದು. ನೀನು ಹೇಳಿದ್ದು ನನಗೆ, ನಾನು ಹೇಳಿದ್ದು ನಿನಗೆ ಕೇಳಿಸದಂತೆ ಬದುಕುವಂತಿಲ್ಲ. ಒಂದೊಂದು ವಾರದ ಬೆಳವಣಿಗೆಯಲ್ಲೂ ಕನಸು ಕಾಣುತ್ತಿದ್ದೇನೆ. ನನ್ನನ್ನು ಬೆಚ್ಚನೆಯ ಗೂಡಲ್ಲಿ ಕಾಪಾಡುತ್ತಾ ತಾನು ತಿಂದ ಆಹಾರದಲ್ಲೇ ನನ್ನನ್ನೂ ಬೆಳೆಸುತ್ತಿರುವ ನಿನ್ನನ್ನು ನೋಡಲು ಕಾಯುತ್ತಿದ್ದೇನೆ. ಈ ಕತ್ತಲೆಯ ಜಗತ್ತಿನಿಂದ ಹೊರಬಂದು ನೀವೆಲ್ಲ ಇರುವ ಬೆಳಕಿನ ಆ ಲೋಕಕ್ಕೆ ನಾನೂ ಬರಬೇಕು.

**ಅಮ್ಮನ ಭಯ**

ಒಂಬತ್ತು ತಿಂಗಳು ಕಳೆದೊಡನೆ ಇಲ್ಲಿಗೆ ಬಂದು ಬಿಡುತ್ತೀಯಾ. ಜಗತ್ತು ನೀನಂದುಕೊಂಡಷ್ಟು ಸುಂದರವಾಗಿಲ್ಲ ಎನ್ನುತ್ತೀರೇನೋ ನೀವು ಯಾವುದೋ ಒಂದು ದಿನ ಅದು ನನ್ನ ಅನುಭವಕ್ಕೂ ಬಂತು. ಏಕೆ ಗೊತ್ತಾ? ಅಮ್ಮ ಈಗೀಗ ಗಾಬರಿಯಾಗಿರುತ್ತಾಳೆ. ಭಯಪಟ್ಟು ಕೊಳ್ಳುತ್ತಾಳೆ. ಇದೂ ಹೆಚ್ಚಾದರೆ ಏನು ಮಾಡೋದು? ಟೆಸ್ಟ್ ಮಾಡ್ಸೋಣ ಅಂತ ಎಲ್ಲ ಬಲವಂತ ಮಾಡ್ತಿದ್ದಾರೆ. ಹೆಣ್ಣು ಅಂತ ಗೊತ್ತಾದ್ರೆ ಖಂಡಿತ ಉಳಿಸೋಲ್ಲ. ಇದು ಕಾನೂನಿಗೆ ವಿರುದ್ಧ ಅಂತ ಹೇಳಿದ್ರೂ ಯಾರೂ ಕೇಳೋದಿಲ್ಲ. ದುಡ್ಡಿದೆಯಲ್ಲ ಏನೂ ಬೇಕಾದರೂ ಮಾಡಬಹುದು ಅಂತ ಅಮ್ಮ ಹೇಳ್ತಾ ಇದ್ದಿದ್ದು ನನ್ನ ಕಿವಿಗೂ ಬಿದ್ದಿದೆ. ಆದರೆ ಯಾರೊಂದಿಗೆ ಹೇಳ್ತಿದ್ದು ಅಂತ ನನಗೂ ಗೊತ್ತಿಲ್ಲ. ಪಾಪ ಅಮ್ಮ ನನಗಾಗಿ ಅದೆಷ್ಟು ಕಷ್ಟ ಅನುಭವಿ

ಸುತ್ತಾಳೆ. ಅವಳಷ್ಟೇ ಕಷ್ಟ ಅಪಾಯ ನನಗೂ ಇದೆ.

ಅಮ್ಮನ ಹೊಟ್ಟೆ ಸೀಳಿ ಚಾಕು ಬಂದು ನನ್ನನ್ನು ಚುಚ್ಚಿದಂಥ ಕನಸಿನ ಭಯದಿಂದ ಅಳುತ್ತೇನೆ. ಆದರೆ ನಾನು ಅತ್ತರೂ, ಕೈಕಾಲು ಬಡಿದರೂ ರಚ್ಚೆ ಹಿಡಿದರೂ ಯಾರಿಗೂ ಕೇಳಿಸುವುದಿಲ್ಲ. ಜೀವದ ಜೀವವಾಗಿ ನನ್ನನ್ನು ಕಾಪಾಡುತ್ತಿರುವ ಅಮ್ಮನಿಗೂ ಇದಾವುದೂ ಅರ್ಥವಾಗುತ್ತಿಲ್ಲ. ನಾನು ಆಟ ಆಡ್ತಿದ್ದೀನಿ ಅಂತ ಹೊಟ್ಟೆ ಸವರಿ ಸಮಾಧಾನ ಮಾಡ್ತಾಳೆ. ಮಾತಾಡಿಸುತ್ತಾಳೆ. ಚೆನ್ನಾಗಿದೀಯಾ ಪುಟ್ಟೂ..... ನಿಧಾನ.......' ಅಂತಾಳೆ. ನಾನು ಹೀಗೆ ಓಡಾಡುವಾಗ ಅಪ್ಪ ಕೂಡ ಆ ಖುಷಿ ಅನುಭವಿಸಿದ್ದೂ ನನಗೂ ನೆನಪಿದೆ. ಈಗೀಗ ಏಕೋ ಅಮ್ಮನ ಮೇಲೆ ಸಿಟ್ಟಾಗಿರುತ್ತಾರೆ. ಸ್ಪಷ್ಟವಾಗಿ ಗೊತ್ತಿಲ್ಲ. ಆದರೂ ನಾನು ಗಂಡೋ-ಹೆಣ್ಣೋ ಅನ್ನೋದನ್ನ ಪರೀಕ್ಷೆ ಮಾಡಿ ತಿಳಿದುಕೊಂಡು ಹೆಣ್ಣು ಅಂತ ಗೊತ್ತಾದೊಡನೆ ಸಾಯಿಸಿಬಿಡೋಣ, ಆ ಮಗು ಹುಟ್ಟೋದೇ ಬೇಡ' ಎಂದು ಹಠ ಹಿಡಿದಿದ್ದಾರಂತೆ. ಆದರೆ ಅಮ್ಮ ಒಪ್ಪುತ್ತಿಲ್ಲ. 'ಮಗು ಯಾವುದಾದರೇನು ನಮ್ಮದೇ ಕರುಳ ಕುಡಿ ತಾನೆ' ಎಂದು ಸಮಾಧಾನ ಮಾಡುತ್ತಾಳೆ.

**ಹೆಣ್ಣಾಗಿದ್ದೆ ತಪ್ಪಾ.........?**

ನಾನೇನು ಪಾಪ ಮಾಡಿದ್ದೇನೆ. ನಾನು ಹೆಣ್ಣಾಗಿದ್ದೇ ತಪ್ಪಾ? ನಾನಷ್ಟೇ ಅಲ್ಲ ನನ್ನಂತ ಎಷ್ಟೋ ಹೆಣ್ಣು ಕೂಸುಗಳನ್ನು ಅಮ್ಮನ ಹೊಟ್ಟೆಯಲ್ಲೇ ಸಾಯಿಸುತ್ತಾರಂತೆ. ಅದಕ್ಕೆ ಸರ್ಕಾರ ಲಿಂಗ ಪತ್ತೆ ಪರೀಕ್ಷೆ ಮಾಡಬಾರದೆಂದು ಕಾನೂನು ಮಾಡಿದ್ದಾರಂತೆ. ಆದರೂ ನಿಲ್ಲುತ್ತಿಲ್ಲವಲ್ಲ. ಹೆಣ್ಣಿಗೆ ಹೊಟ್ಟೆಯಲ್ಲೇ ಸಾಯುವ ಶಿಕ್ಷೆ. ಹೆಣ್ಣು ಮಕ್ಕಳಿಗಾಗಿ 'ಡಾಟರ್ಸ್‌ವೀಕ್' ಅಂತನೂ ಆಚರಿಸ್ತಾರಂತೆ. ಆದರೂ ನನ್ನನ್ನು ಬದುಕಲು ಬಿಡುತ್ತಿಲ್ಲ. ಕೆಲವರಿಗೆ ಈ ಪರೀಕ್ಷೆ ಬಗ್ಗೆ ತಿಳಿದಿಲ್ಲವಂತೆ. ಹೆಣ್ಣು ಮಗು ಇಷ್ಟವಿಲ್ಲದ ಇಂತಹವರು ಹುಟ್ಟಿದ ಮಗುವಿನ ಬಾಯಿಗೆ ಬಟ್ಟೆ ತುರುಕಿ, ಉಸಿರು ಕಟ್ಟಿಸಿ ಕ್ರೂರವಾಗಿ ಸಾಯಿಸ್ತಾರಂತೆ.

ಎಷ್ಟೊಂದು ಅಪ್ಪಂದಿರು ತನ್ನದೇ ಮಗಳು ಎಂಬ ಮಮಕಾರವೂ ಇಲ್ಲದೇ ನನ್ನ ಎಷ್ಟೋ ಅಕ್ಕಂದಿರನ್ನು ಕ್ರೂರವಾಗಿ ಸಾಯಿಸಿದ್ದಾರೆ. ಈ ಬಗ್ಗೆ ಅಮ್ಮ ಮಾತಾಡಿದ್ದು ಇಂತಹ ಅನ್ಯಾಯವಾಗದಂತೆ, ಯಾರನ್ನೂ, ಹೊಟ್ಟೆಯಲ್ಲೇ ಸಾಯಿಸದಂತೆ ಕಾಪಾಡಬೇಕು ಅಂತ ತುಂಬ ಆಸೆ. ಅದಕ್ಕೆಲ್ಲ ಒಂದೇ ಮಾರ್ಗ. ನಾನು ಹುಟ್ಟಬೇಕು ಎಂದು ಹುಟ್ಟಿ, ಎಲ್ಲರ ಪ್ರೀತಿ ಪಡೆದು ಬೆಳೆದು ದೊಡ್ಡವಳಾಗಿ ಇದೆಲ್ಲದರ ವಿರುದ್ಧ ಪ್ರತಿಭಟಿಸುವ ಆಸೆ.

ಎಲ್ಲರಿಗಿಂತ ಹೆಚ್ಚಾಗಿ ನನ್ನನ್ನು ಇಷ್ಟೊಂದು ಆಸಕ್ತಿಯಿಂದ ಕಾಪಾಡುತ್ತಿರೋ ನಿನ್ನನ್ನು ನೋಡಬೇಕು ಅನ್ನೋ ಆಸೆ ಹೆಚ್ಚಾಗಿದೆ. ಆ ಮೇಲೆ ನನ್ನನ್ನು ಇಲ್ಲೇ ಕೊಲ್ಲಲು ಪ್ರಯತ್ನಿಸುತ್ತಿರೋ ಎಲ್ಲರಿಗೂ ಸರಿಯಾದ ಶಿಕ್ಷೆ ಕೊಡಿಸಬೇಕು ಅನಿಸಿದೆ.

ಈ ಕೊಲೆಗಡುಕರಿಂದ ರಕ್ಷಿಸು. ನನಗೆ ನಿನ್ನನ್ನು ಬಿಟ್ಟರೆ ಇನ್ನಾರೂ ಗತಿಯಿಲ್ಲ. ಹೆಣ್ಣು ಅನ್ನೋ ಕಾರಣಕ್ಕೆ ನನ್ನನ್ಯಾಕೆ ಸಾಯಿಸಬೇಕು. ನಾನೂ ನಿನ್ನಷ್ಟು ದೊಡ್ಡವಳಾದ ಮೇಲೆ ಅಮ್ಮನಾಗುವವಳು ತಾನೆ. ಅಮ್ಮನಾಗುವವಳನ್ನೇ ಸಾಯಿಸಿದರೆ ಮುಂದೆ ಸಂತಾನೋತ್ಪತ್ತಿ ಗತಿ ಏನು? ಅದನ್ನೆಲ್ಲ ಅವರಿಗೆ ನೀನು ತಿಳಿಸಿ ಹೇಳು...... ನನ್ನನ್ನು ಕಣ್ತೆರೆಯಲು ಬಿಡುವಂತೆ ನನ್ನ ಪರವಾಗಿ ಮಾತಾಡಮ್ಮ ನನ್ನನ್ನು ಉಳಿಸಿಕೊಳ್ಳಮ್ಮ ಪ್ಲೀಸ್.............

# ಹೆಣ್ಣೆಂದರೆ ಹೀಗೇಕೆ



ಕಾವ್ಯ ಎಂ.
ದ್ವಿತೀಯ ಬಿ.ಎ., ಹೆಚ್‌ಇಪಿ

ಹಲವು ಬಾರಿ ಕೇಳಿಸಿಕೊಳ್ಳುತ್ತೇವೆ. ನಾವೇನು ಬಳೆ ತೊಟ್ಟು ಕುಳಿತಿಲ್ಲ. ಹೀಗೆ ಬಳೆ ತೊಡುವ ಸೀರೆ ಉಡುವ ಹೂ ಮುಡಿಯುವ ಹೆಣ್ಣನ್ನು ಅವಮಾನಿಸುವ ಅಧಿಕಾರ ಎಲ್ಲಿಂದ ಬಂತು? ಇದನ್ನು ಸಮೂಹದ ಲಕ್ಷಣವೆಂದು ಸಮರ್ಥಿಸಿ ಕೊಳ್ಳುವಿರಾ?

ರಸ್ತೆ ತುಂಬೆಲ್ಲ ಸಂಭ್ರಮ ಗದ್ದಲ ಗಿಜಿಗಿಜಿ. ನೂಕು ನುಗ್ಗಲು, ಮಕ್ಕಳು ಮರಿ, ಹೆಂಗಸರು, ಗಂಡಸರು ಸಾಲೇಸಾಲು ಬಣ್ಣ ಬಣ್ಣದ ಹೊಸ ಸೀರೆಗಳು ತರಹೇವಾರಿ ಬಳೆಗಳು, ಕಾಲ್ಗೆಜ್ಜೆಗಳು ಹೊಮ್ಮಿಸುತ್ತಿರುವ ಮುದ ನೀಡುವ ನಾದ. ತಮ್ಮದೇ ವಿಶೇಷ ಪರಿಮಳಗಳನ್ನು ಸೂಸುವ ಬಗೆ ಬಗೆಯ ಹೂಗಳನ್ನು ತಲೆತುಂಬ ಮುಡಿದು ಸಂಭ್ರಮಿಸುತ್ತಿರುವ ಹೆಂಗಳೆಯರು. ಉಳ್ಳವರು ಮೈಮೇಲೆ ಯಥಾನುಶಕ್ತಿ ಆಭರಣಗಳು ಹೊಸತಾದರೆ ಅದನ್ನು ಉಳಿಸಿದವರೂ ನೋಡಿ ಮೆಚ್ಚಲೆಂಬ ..... ಒಡವೆಗಳ ಮೇಲೆ ಆಸೆ ಇಟ್ಟುಕೊಳ್ಳಲಾರದವರಿಗೆ ಬೇಕೋ ಬೇಡವೋ ಎಂಬಂತೆ ಒಂದು ಸಣ್ಣ ಅಸೂಯೆಯ ರೇಖೆ ಸುಳಿದರೂ ಆಶ್ಚರ್ಯವಿಲ್ಲ.

ಅದು ಊರ ಜಾತ್ರೆ. ದೇವರ ಪ್ರತಿಮೆಯ ಮೆರವಣಿಗೆ ಅಲಂಕಾರವೂ ಭರ್ಜರಿ, ಚೆಂಡು, ಕನಕಾಂಬರ ಪರಿಮಳ ಸೂಸುವ ಮಲ್ಲಿಗೆ, ಸಂಪಿಗೆ, ಜಾಜಿ, ತುಳಸಿ ಎಲ್ಲಾ ರೀತಿಯ ಹೂಗಳು. ಯಾವುದೋ ಹೆಣ್ಣು ದೇವತೆಯ ಮೆರವಣಿಗೆ. ಕಳಸ, ಕನ್ನಡಿ ಹಿಡಿದ ಹೆಂಗಳೆಯರು ಮೆರವಣಿಗೆಯ ಹಿಂದೆ ಅಲಂಕರಿಸಿಕೊಂಡು ಸಾಗುತ್ತಿದ್ದರು. ನಂಬುವವರಿಗೆ ಭಕ್ತಿಯಾದರೆ ಇಲ್ಲದವರಿಗೆ ಕಣ್ಣಿಗೊಂದು ಹಬ್ಬ ಸಂಭ್ರಮದ ಪರಿಸರ ಕಟ್ಟಿಕೊಡುವ ಸುಖಾಸ್ವಾದದ ಅನುಭವವಿದೆ.

**ಸುಗಮವಲ್ಲ:**

ವೈವಾಹಿಕ ಬದುಕಿನ ದಾರಿಯೇನೂ ಸದಾ ಸುಗಮವಲ್ಲ. ಹಾಗೆಂದು ದುರ್ಗಮವೇ ಇತ್ತೆಂದೂ ಅಲ್ಲ. ಹಲವು ಏರುಪೇರುಗಳು ಕೊಡುಕೊಳ್ಳುವ ಸರಸ-ವಿರಸಗಳ ಅರ್ಥ-ಅನರ್ಥಗಳ ಮಧ್ಯೆಯೇ ಎಷ್ಟೋ ವರ್ಷಗಳು ಒಟ್ಟಿಗೇ ಕಳೆದಿರುತ್ತವೆ. ಜಾತಸ್ಯ ಮರಣಂ ದ್ರುವಂ-ಹುಟ್ಟಿದ್ದು ಸಾಯಲೇಬೇಕು ಎಂಬ ವಾಕ್ಯದಂತೆ ಯಾರಾದರೊಬ್ಬರು ಉಸಿರಾಟದ ವ್ಯಾಪಾರ ನಿಲ್ಲಿಸುತ್ತಾರೆ.

ಊರಿನಲ್ಲಿ ಒಂದು ಸಾವಾಗಿದೆ. ಒಬ್ಬ ಪುರುಷ ಗಂಡದೀರ್ಘ ಕಾಯಿಲೆಯಿಂದ ಮೃತಪಟ್ಟಿದ್ದಾನೆ. ಆದರೂ ಬಾಳ ಸಂಗಾತಿಯಾಗಿದ್ದವ ಒಬ್ಬರಿಗೊಬ್ಬರು ಅರ್ಥಮಾಡಿಕೊಂಡಿದ್ದೇವೋ ಇಲ್ಲವೋ ಆದರೆ ಹತ್ತಾರು ವರ್ಷ ಒಟ್ಟಿಗೆ ಬದುಕಿದ್ದರು ದುಃಖಕ್ಕೆ ಧ್ವನಿಗೂಡಿಸುವವರು. ಬಂದರು ಬರುವಾಗ ಬರಿಗೈಯಲ್ಲಿ ಬರಲಿಲ್ಲ. ಕುಂಕುಮದ ಭರಣಿ ಹಿಡಿದು ಬಂದರು. ಬರುವಾಗ ಬರಿಗೈಯಲ್ಲಿ ಬಟ್ಟಲು ಜೊತೆಯಲ್ಲಿ ದಾರಿಯಲ್ಲೋ ಮನೆಯಲ್ಲೋ ಇದ್ದ ಹೂವಿನ ದಂಡೆಯನ್ನು ತಂದರು. ಅಯ್ಯೋ ಪಾಪ ಹೀಗಾಗಬಾರದಿತ್ತು. ಮುತ್ತೈದೆ ಸಾವುಕೊಡದ ಕಾಣದ ದೇವರಿಗೆ ಶಪಿಸಿಯೂ ಆಯಿತು. ಹಣೆ ತುಂಬ ಒಬ್ಬರಾದ ಮೇಲೊಬ್ಬರು ಹಚ್ಚಿದರು ಎನ್ನುವುದಕ್ಕಿಂತ ಬಳಿದ ಕುಂಕುಮ, ಕೆನ್ನೆಯ ತುಂಬ ಅರಿಶಿಣ, ತಲೆ ಹಿಡಿಸಲಾರದಷ್ಟು ಹೂವಿನ ಮಾಲೆಗಳು! ಅವಳಿಗೆ ಚೆನ್ನಾಗಿಗೊತ್ತು. ಇದು ತನಗೆ ಈ ಕ್ಷಣ ಭಾರವಾಗುತ್ತಿರುವುದು ಬೇಡ, ಆದರೆ ಇನ್ನೆಂದೂ

ಧರಿಸಲಾರದ ಕೊನೆಯ ಅಲಂಕಾರವೆಂದು.

ಅವಳು ಬಾವಿ ಕಟ್ಟೆಯ ಮೂಲೆಯಲ್ಲಿ ನಿಂತಿದ್ದಳು. ಮನೆಯವರಿಗೂ ಕಣ್ಣಿಗೆ ಬೀಳದಂತೆ. ಜೀವಕ್ಕೆ ಜೀವವಾಗಿದ್ದ ಗಂಡ ತೀರಿಕೊಂಡಿದ್ದ ಮನೆ ಮಂದಿಯೆಲ್ಲ ರೋಧಿಸಿ ದೇಹಕ್ಕೆ ಅಗ್ನಿ ಸ್ಪರ್ಶವಾಗಿ ಬಂದಾಗಿತ್ತು. ಕೈಯಲ್ಲಿ ಮೊನ್ನೆಯಷ್ಟೇ ಹಬ್ಬಕ್ಕೆ ಆಸೆಯಿಂದ ತೊಟ್ಟುಕೊಂಡಿದ್ದ ಹಸಿರು ಚುಕ್ಕಿ ಬಳೆಗಳಿದ್ದವು. ಯಾರ ಬಳಿ ಹೇಳಿಕೊಳ್ಳುವುದು. ಯಾರೋ ಬಂದು ಇದನ್ನು ಒಡೆಯುತ್ತಾರೆ. ಹೇಗೆ ಸಹಿಸಿಕೊಳ್ಳಲಿ? ಗಟ್ಟಿ ಮನಸ್ಸು ಮಾಡಿದ್ದಳು. ತಾನೇ ಬಾವಿ ಕಟ್ಟೆಗೆ ಕೈಜಜ್ಜಿ ಪ್ರೀತಿಯ ಬಳೆ ಒಡೆಯುವ ಮೂಲಕ ಶೃಂಗಾರ ಆಭರಣಗಳ ಆಸೆಯನ್ನು ಆಳವಾದ ಬಾವಿಯಲ್ಲಿ ಹೂತು ಹಾಕಿ ಬಂದಿದ್ದಳು. ಅವಳಿಗೆ ಗೊತ್ತಿತ್ತು. ಕಾಲ ಬದಲಾಗುತ್ತಿದೆ ತಾನೂ ಚಿನ್ನದ ಬಳೆ ಇದ್ದರೆ ಹಾಕಿಕೊಂಡಿರಬಹುದೆಂದು. ಆದರೆ ಅಂತಹ ಸಾಧ್ಯತೆಗಳಿಲ್ಲವಲ್ಲ. ಎರಡು ದಿನ ಕೈ ಸೆರಗಿನ ಮರೆಯ ಆಶ್ರಯ ಬೇಡುತ್ತಿತ್ತು. ಬುದ್ಧಿ ಬಂದ ದಿನದಿಂದ ಅದಕ್ಕೆ ಅಭ್ಯಾಸವೇ ಇಲ್ಲದ ಒಂದು ಕ್ರಿಯೆಗೆ ತನ್ನನ್ನು ಒಗ್ಗಿಸಿಕೊಳ್ಳಲು ಹೆಣಗುತ್ತಿರುವಂತೆ.

## ಶಿಕ್ಷಣ ಜೀವನದ ಬೆಳಕು



ಉಮಾ ಎನ್., ಪ್ರಥಮ ಬಿ.ಕಾಂ

1. ಪ್ರೀತಿಯ ನಮ್ಮ ಲಾಂಛನವಾಗಿದ್ದು, ಮಾನವೀಯತೆಯು ನಮ್ಮ ಆಲೋಚನೆಯಾಗಿರಲಿ. ಪ್ರೇರಣೆ ನಿಮಗೆ ಆರಂಭ ನೀಡಿದರೆ ಅಭ್ಯಾಸವು ನೀವು ನಿವಾರಿಸಲು ಅನುವಾಗುತ್ತದೆ. ಫಲಿತಾಂಶಗಳು ದಿಢೀರನೆ ದೊರಕವು ವರ್ಷಾನುಗಟ್ಟಲೆ ಅಭ್ಯಾಸ ಮಾಡಬೇಕು ಇದೇ ಶಿಕ್ಷಣದ ಮಹತ್ವ
2. "ಕೇವಲ ಪುಸ್ತಕದಲ್ಲಿನ ವಿದ್ಯೆಯು ಮತ್ತು ಪರರ ಕೈಯಲ್ಲಿರುವ ಹಣವು ಪ್ರಯೋಜನಕ್ಕೆ ಬರುವುದಿಲ್ಲ" ತಪ್ಪು ಕಲಿಯುವುದಕ್ಕಿಂತ ಅಜ್ಞಾನಿಯಾಗಿರುವುದೇ ಲೇಸು ಚಿಂತನೆಯಿಲ್ಲದೇ ಕಲಿಯುವುದು ವ್ಯರ್ಥ, ಕಲಿಯದೆ ಚಿಂತನೆ ಮಾಡುವುದು ಅಪಾಯಕರ. ಮಾನವನ ನೈಸರ್ಗಿಕ ಶಕ್ತಿಯ ಪ್ರಗತಿಪರ ಬೆಳವಣಿಗೆಯೇ ಶಿಕ್ಷಣ ಜೀವನವೇ ಶಿಕ್ಷಣ – ಶಿಕ್ಷಣವೇ ಜೀವನ.
3. ಶಿಕ್ಷಣ ಪ್ರತಿವ್ಯಕ್ತಿಯಲ್ಲೂ ಪರಿಪೂರ್ಣತೆಯನ್ನು ತರಬೇಕು, ಜೀವನವನ್ನು ನಡೆಸುವ ಸಾಮರ್ಥ್ಯ ನೀಡಬೇಕು ಶಿಕ್ಷಣಕ್ಕಿಂತ ಮನುಷ್ಯನಿಗೆ ಶೀಲ ಚಾರಿತ್ರ್ಯಗಳು ಹೆಚ್ಚು ಅವಶ್ಯಕ. ಮನುಷ್ಯನಿಗೆ ಮಹತ್ವವು ಪ್ರಾಪ್ತಿಯಾಗಬೇಕಾದರೆ ಶಿಕ್ಷಣ ಅವಶ್ಯವಾಗಿರಬೇಕು ಶಿಕ್ಷಣವು ಮನುಷ್ಯನನ್ನು ಶ್ರೇಷ್ಠ ನಾಗರಿಕನನ್ನಾಗಿ ಮಾಡುತ್ತದೆ ಶಿಕ್ಷಣ ಜೀವನದ ಬೆಳಕು

# ಅಪ್ಪ, ಅಮ್ಮ ಮತ್ತು ಮಕ್ಕಳು



ಮಾಲಾಶ್ರೀ ಎಚ್.
ಪ್ರಥಮ ಬಿ.ಬಿ.ಎ.

ಪಕ್ಷಿಗಳ ಜೀವನವನ್ನು ಸುಮ್ಮನೆ ಹಾಗೆ ಗಮನಿಸಿ ನೋಡಿ. ಜೋಡಿ ಪಕ್ಷಿಗಳು ಗೂಡು ಕಟ್ಟುತ್ತವೆ. ಹೆಣ್ಣು ಪಕ್ಷಿ ಮೊಟ್ಟೆಯಿಡುತ್ತದೆ. ಕಾವು ಕೂರುವ ಸಂದರ್ಭದಲ್ಲಿ ಗಂಡು ಪಕ್ಷಿ, ಹೆಣ್ಣು ಪಕ್ಷಿಗೆ ಆಹಾರ ತಂದು ಹಾಕುತ್ತದೆ. ಮೊಟ್ಟೆಯೊಡೆದು ಮರಿಗಳು ಆಚೆ ಬಂದಾಗ ಅವೂ ಸಂಭ್ರಮಿಸುತ್ತವೆ. ಜೊತೆಗೆ ಗುಟುಕು ನೀಡಿ ಬೆಳೆಸುತ್ತವೆ. ಕ್ರಮೇಣ ಆಹಾರ ತಿನ್ನುವುದನ್ನು ಕಲಿಸುತ್ತವೆ. ಹಾರುವುದನ್ನು ಕಲಿಸುತ್ತವೆ. ಈ ಜಗತ್ತಿನಲ್ಲಿ ಸ್ವತಂತ್ರವಾಗಿ ಬಾಳುವುದೇಗೆ ಎಂದು ಕಲಿಸಿ ಅವುಗಳನ್ನು ಗೂಡಿನಿಂದ ಆಚೆ ತಳ್ಳುತ್ತವೆ. ತಂದೆ ತಾಯಿ ಪಕ್ಷಿಗಳು ಎಂದಿಗೂ ತಮ್ಮ ಮರಿಗಳಿಗಾಗಿ ಒಂದು ಗೂಡನ್ನಾಗಲಿ, ಒಂದಿಷ್ಟು ಆಹಾರವನ್ನಾಗಲಿ ಸಂಗ್ರಹಿಸುವುದಿಲ್ಲ. ಮರಿ ಪಕ್ಷಿಗಳು ಕೂಡ ತಂದೆ ತಾಯಿಗಳ ಯಾವುದೇ ಗುರುತು ಇಲ್ಲದೆ ಜಗತ್ತಿನಲ್ಲಿ ಮತ್ತೊಂದು ಕಡೆ ಜೀವನ ಆರಂಭಿಸುತ್ತವೆ.

ಆದರೆ ಪ್ರಕೃತಿಯ ಅತೀ ಬುದ್ಧಿವಂತ ಜೀವಿ ಮನುಷ್ಯ ಇದಕ್ಕೆ ತದ್ವಿರುದ್ಧ! ಇದೇ ಇವನ ಬುದ್ಧಿವಂತಿಕೆ ನೋಡಿ : ದುಡಿದು ತಿನ್ನುವ ಮರಿಗಳನ್ನು ಆಚೆ ಹಾಕಿ, ಯಾವುದೇ ಐಡೆಂಟಿಟಿ ಇಲ್ಲದೆ, ಆಶ್ರಯ ಇಲ್ಲದೆ ಬದುಕುವ ಪಕ್ಷಿಗಳು ಮತ್ತು ತಾವು ತಂದೆ ತಾಯಿಗಳಿಂದಲೇ ಎಲ್ಲಾ ಪಡೆದು ಅವರು ಇಳಿ ವಯಸ್ಸಿಗೆ ತಲುಪಿದಾಗ ಅವರನ್ನೇ ಹೊರಹಾಕುವುದು ಎಷ್ಟೊಂದು ವಿಚಿತ್ರ ನೋಡಿ. ಎರಡು ಜೀವಿಗಳು ಹೊರಹಾಕುವುದಂತೂ ಸತ್ಯ ಯಾರು ಯಾರನ್ನು? ಎಂಬುದನ್ನು ಯೋಚಿಸಿ. ಮನುಷ್ಯನ ಯಾವುದನ್ನು ಮಾಡಬೇಕೋ ಅದನ್ನು ಮಾಡಲಾಗದೇ ಯಾವುದನ್ನು ಮಾಡಬಾರದೋ ಅದನ್ನು ಮಾಡುತ್ತಿದ್ದಾನೆ. ತಂದೆ ತಾಯಿಗಳ ಹೆಸರು, ಆಸ್ತಿ, ಅಂತಸ್ತು ಅವೇ ಅವರ ಮಗನಿಗೆ ಶ್ರೀರಕ್ಷೆ. ಅದೇ ಅವನಿಗೊಂದು ದೊಡ್ಡ ಐಡೆಂಟಿಟಿ. ತನಗೆ ಮಕ್ಕಳು ಮರಿಯಾದರೂ ಅಪ್ಪನ ಗಳಿಕೆಯಲ್ಲಿ ಹೆಂಡತಿ ಸಾಕುವ ಪರಿ ಅವನದು. ಕೇಳಿದರೆ ಸೆಂಟಿ ಮೆಂಟ್ ಡೈಲಾಗ್ ಹೊಡಿತ್ತಾರೆ. ಆದರೆ ತಂದೆ ತಾಯಿಗಳನ್ನು ತಮ್ಮ ಹಣದಲ್ಲಿ ಸಾಕಬೇಕು ಅನ್ನು ವಾಗ ಆ ಸೆಂಟಿಮೆಂಟ್ ಎಲ್ಲಿ ಹೋಗಿರುತ್ತೋ?

ಅಪ್ಪ ಎನ್ನಿಸಿಕೊಂಡ ಜೀವಿ ತಾನೊಬ್ಬ ದೊಡ್ಡವ ನೆನಿಸಿಕೊಳ್ಳಲು ಮಾಡುವ ಪರಿಪಾಟಲು, ಬೆವರಿನ ಹನಿಗಳು, ಅನುಭವಿಸಿದ ಅವಮಾನಗಳು ಅವೆಲ್ಲವನ್ನು ನುಂಗಿಕೊಂಡು ದೊಡ್ಡವನೆನಿಸಿ ಕೊಳ್ಳುತ್ತಾನೆ. ಒಂದಿಷ್ಟು ಆಸ್ತಿ ಮತ್ತು ಹೆಸರು ಅಂತ ಮಾಡಿಕೊಳ್ಳುತ್ತಾನೆ. ತನ್ನ ಉತ್ತರಾಧಿಕಾರಿಯಾಗಿ ಹುಟ್ಟುವ ಮಗನಿಗೆ ಆಸ್ತಿಯನ್ನು ಧಾರೆಯೆರೆ ಯುತ್ತಾನೆ. ತನ್ನ ಹೆಸರಿನಿಂದ ಮಗನಿಗೊಂದು ಐಡೆಂಟಿಟಿಯನ್ನು ಕೊಡಿಸುತ್ತಾನೆ. ಹಾಗಾದರೆ ಮಗನ ಕೆಲಸವೇನು? ಅಪ್ಪನ ಹೆಸರಿನಿಂದ ಬದುಕುವುದಾ? ಅಪ್ಪ ಮಾಡಿದ ಆಸ್ತಿಯನ್ನು ನುಂಗಿ ನೀರು ಕುಡಿಯುವುದಾ? ಅಥವಾ ಆ ಆಸ್ತಿಗೆ ಇನ್ನಷ್ಟು ಸೇರಿಸಿ ತನ್ನ ಮುಂದಿನ ಸಂತಾನಕ್ಕೆ ಉಡುಗೊರೆ ಯಾಗಿ ನೀಡುವುದಾ? ಉಳಿಸುತ್ತಾ ಕೂಡಿಸುತ್ತ ಮುಂದಿನ ತನ್ನ ಪೀಳಿಗೆಯನ್ನು ಸೋಮಾರಿ ಯನ್ನಾಗಿಸುವುದಾ?

ಈಗ ಮಕ್ಕಳಂತೂ "ನಾನು ಅವರ ಮಗ, ನಮ್ಮ ಅಪ್ಪ ಅಮ್ಮ ಅದು ಇದು" ಅಂತಾನೇ ಗುರುತಿಸಿಕೊಳ್ಳುತ್ತಾರೆ.

ನನ್ನಿಂದಲೇ ನನಗೆ ಹೆಸರು ಬರಲಿ, ತಂದೆ ತಾಯಿಯರಿಗೆ ಒಂದು ಐಡೆಂಟಿಟಿ ಸಿಗಲಿ ಎನ್ನುವವರು ಕಡಿಮೆ. ಒಂದು ಹಂತದವರೆಗೆ ಅಪ್ಪ ಅಮ್ಮನ ಗರಡಿಯಲ್ಲಿ ಬೆಳೆದು ತನ್ನ ಕಾಲ ಮೇಲೆ ತಾನು ನಿಂತು "ನಾನು ಹಾಕಿಕೊಳ್ಳುವ ಬಟ್ಟೆ ಕೂಡ ನನ್ನದೇ" ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ಮಕ್ಕಳು, ಪೀಳಿಗೆ ತುಂಬಾ ಅಂದ್ರೆ ತುಂಬಾನೇ ಕಡಿಮೆ.

ಅಪ್ಪ ಕಟ್ಟಿಸಿದ ಮನೆ ಇದೆಯಲ್ಲಾ! ಬೈಕ್ ತಗೋಳ್ಳೋಕೆ ಅಪ್ಪನ ದುಡ್ಡಿದೆಯಲ್ಲಾ! ಹೇಗಾದರೂ ಅಪ್ಪ ನಿವೃತ್ತರಾದಾಗ ಬರುವ ಅಮೌಂಟ್ ಇದೆಯಲ್ಲಾ! ಅಮ್ಮನ ಪೆನ್ಸನ್ ಇದೆಯಲ್ಲಾ! ಅಪ್ಪನ ಐದು ಎಕರೆ ಜಮೀನು ಇದೆಯಲ್ಲಾ ಸಾಲದೇ? ಎಂದು ಮನಸ್ಸಿನಲ್ಲೇ ಲೆಕ್ಕ ಹಾಕಿಕೊಂಡು ಖುಷಿಪಟ್ಟುಕೊಂಡು ಮಕಾಡೆ ಮಲಗಿಕೊಂಡು ಕನಸು ಕಾಣುವ ಇಂದಿನ ಪೀಳಿಗೆಗೆ ಏನು ಹೇಳುವುದು? ಅಷ್ಟೇ ಆದರೆ ಪರವಾಗಿಲ್ಲ ಅಪ್ಪ ಅಮ್ಮನ ಬಳಿ ಇರುವುದನ್ನು ಕಿತ್ತುಕೊಂಡು ಅವರನ್ನು ಬೀದಿಗೆ ತಳ್ಳಿದ ಉದಾಹರಣೆಗಳು ಸಾವಿರಾರು. ಇಲ್ಲಿ ಪೋಷಕರ ತಪ್ಪು ಕೂಡ ಇದೆ. ಮಕ್ಕಳಿಗೆ ಆಸ್ತಿ ಮಾಡುತ್ತೇನೆ ಎಂದು ಹೊರಡುವ ತಂದೆ ತಾಯಿಯರ ನಿಜವಾದ ಅಕ್ಕರೆಯನ್ನು ಗುರುತಿಸಬಹುದು.

ತಂದೆ ತಾಯಿಯರು ತಮ್ಮ ಮುಂದಿನ ದಿನಗಳಿಗೆ ಇಳಿ ವಯಸ್ಸಿನಲ್ಲಿ ಮಗ ಆದಾನ!? ಎಂಬ ಅನುಮಾನದಿಂದಲೇ ಒಂದಿಷ್ಟು ಹಣವನ್ನು ಇಟ್ಟುಕೊಂಡಿರುತ್ತಾರೆ. ಆ ಹಣವನ್ನು ಕಿತ್ತುಕೊಂಡು ಒಂದು ಬೈಕ್ ತಗೊಂಡು ಅದಕ್ಕೆ ತಂದೆ ತಾಯಿ ಆಶೀರ್ವಾದ ಎಂದು ಬರೆಯಿಸಿ ತಂದೆ ತಾಯಿಯರ ಗೌರವ ಮೆರೆಯುತ್ತಾರೆ!!! ಇನ್ನೂ ಕೆಲವರು ತಂದೆ ತಾಯಿಯರ ದುಡ್ಡನ್ನು ಕಬಳಿಸಿ ಮನೆಕಟ್ಟಿ ಅದಕ್ಕೊಂದು 'ಪಿತೃಋಣ' ಅಂತ ಹೆಸರಿಟ್ಟು ಲೆಕ್ಕಚುಕ್ತಾ ಮಾಡುತ್ತಾರೆ. ಅದರ ಬದಲಿಗೆ ನೀವು ದುಡಿದ ನಾಲ್ಕಾರು ರೂಪಾಯಿಗಳಲ್ಲಿ ಅವರಿಗೊಂದಿಷ್ಟು ಔಷಧಿ, ಹಣ್ಣು, ಬಟ್ಟೆ, ಅವರೊಟ್ಟಿಗೆ ಪ್ರೀತಿಯ ಮಾತು. ಇಳಿವಯಸ್ಸಿನಲ್ಲಿ ಅವರಿಗೊಂದು ಆತ್ಮೀಯತೆಯ ಸ್ಪರ್ಶ ಬೇಕಿದೆ. ಅದನ್ನು ನೀಡಬೇಕಾದದ್ದು ಮಕ್ಕಳು ಅನ್ನಿಸಿಕೊಂಡವರೇ ಹೊರತು ಬೇರೆಯವರಲ್ಲ!

ಅದರಂತೆ ತಂದೆ ತಾಯಿ ಅನ್ನಿಸಿಕೊಂಡವರೂ ಬದಲಾಗಬೇಕಿದೆ. ಮಕ್ಕಳನ್ನು ಮನುಷ್ಯರಂತೆ ಬೆಳಸಿ, ಯಂತ್ರದಂತೆ ಅಲ್ಲ. ಅವರಿಗೆ ನಿಮ್ಮ ಯಾವುದೇ ಗುರುತಿನ ಚೀಟಿ ಅಂಟಿಸಬೇಡಿ. ಜೀವನದ ಕಷ್ಟಗಳನ್ನು ಪರಿಚಯಿಸಿ. ಅವನಿಗೂ ಜೀವನದ ಎಲ್ಲಾ ಸವಿಗಳನ್ನು ಅನುಭವಿಸಲು ಅನುವು ಮಾಡಕೊಡಿ. ಕಣ್ಣೀರು, ಬೆವರು, ರಕ್ತ, ಹಸಿವು, ಒಂಟಿತನ ಇವೆಲ್ಲದರ ಅರಿವಾಗಲಿ. ಅತೀ ಮುದ್ದು ಅಥವಾ ಅತೀ ತಿರಸ್ಕಾರದಲ್ಲಿ ಮುಳುಗಿಸಬೇಡಿ. ಶ್ರೀಮಂತಿಕೆಯ ಅಲೆಯಲ್ಲಿ ತೇಲಿಸಿ ಕಳುಹಿಸಿದರೆ ನೀವು ಅವರ ಜೀವನವನ್ನು ಹಾಳು ಮಾಡಿದಂತೆಯೇ ಸರಿ. ಶಿವರಾಮಕಾರಂತರ ಒಂದು ಅರ್ಥಗರ್ಭಿತ ಮಾತಿದೆ. ತಂದೆ ತಾಯಿಗಳಿಂದ ಮಕ್ಕಳಿಗೆ ಬರುವುದು ಮತ್ತು ಬರಬೇಕಾಗಿರುವುದು ರಕ್ತ ಮತ್ತು ಮಾಂಸ. ಸಂಸ್ಕೃತಿ, ಒಂದಿಷ್ಟು ಅನುವಂಶೀಯ ರೋಗಗಳೇ ಹೊರತು. ಐಡೆಂಟಿಟಿ ಮತ್ತು ಆಸ್ತಿಯಲ್ಲ.

# ಮೂರ್ಖತನ ತಂದಿತು ಮರೆಯಲಾರದ ನಗು.....



ಶಿಲ್ಪಾಶ್ರೀ ಎಂ.
ಅಂತಿಮ ಬಿ.ಎ. (ಹೆಚ್‌ಇಪಿ)

ಅಂದು ಸಂಜೆ ಸುಮಾರು ಐದು ಗಂಟೆ ಇರಬಹುದು. ಒಂದು ಸರ್ಕಲ್ ಬಳಿ ನಾನು ಕಾಲೇಜ್ ಡ್ರೆಸ್‌ನಲ್ಲಿ ನನ್ನ ಅಪರೂಪದ ಗೆಳತಿಯ ಜೊತೆ ಮಾತನಾಡುತ್ತ ನಿಂತಿದ್ದೆ. ಸುಮಾರು ಐವತ್ತು ವರ್ಷದ ಒಬ್ಬ ಭಿಕ್ಷುಕ ಬಂದ. ಏನಮ್ಮಾ ತಾಯಿ ತುಂಬಾ ಹೊಟ್ಟೆ ಹಸಿಯುತ್ತಿದೆ ಏನಾದರೂ ಧರ್ಮ ಮಾಡು' ಎಂದ.

ನಾನು ಅವನಿಗೆ ಐದು, ಹತ್ತೂ ರೂಪಾಯಿ ಕೊಟ್ಟಿದ್ರೆ ಚೆನ್ನಾಗಿತ್ತು. ನಾನು ನನ್ನ ಗೆಳೆಯ ನಿಂತಿದ್ದ ಸ್ಥಳದಿಂದ ಸ್ವಲ್ಪ ದೂರದಲ್ಲಿ ಒಂದು ಪರಿಚಯದ ಕಾಂಡಿಮೆಂಟ್ ಸ್ಟೋರ್ ಮತ್ತು ಬೇಕರಿ ಇತ್ತು. ನಾನು ಭಿಕ್ಷುಕನಿಗೆ 'ನೀನು ಹೋಗಿ ಆ ಬೇಕರಿಯಲ್ಲಿ ತಿನ್ನಲು ಏನು ಬೇಕೋ ಅದನ್ನು ತೆಗೆದುಕೊ. ಆದರೆ ನಾನು ಯಾರಿಗೂ ಕಾಸು ಕೊಡುವುದಿಲ್ಲ' ಎಂದು ಮೆಲ್ಲನೆ ಗದರುವ ಧ್ವನಿಯಲ್ಲಿ ಹೇಳಿ ನಂತರ ನಾನು ನಿಂತ ಜಾಗದಿಂದಲೇ ಬೇಕರಿಯವನಿಗೆ ಜೋರಾಗಿ ಚಪ್ಪಾಳೆ ತಟ್ಟಿ ಈತನಿಗೆ ಏನು ಬೇಕೋ ಕೊಡು ನಿನಗೆ ಆಮೇಲೆ ಹಣ ಕೊಡುತ್ತೇನೆ ಎಂದು ಜೋರಾಗಿ ಕೂಗಿ ಹೇಳಿದೆ.

ಭಿಕ್ಷುಕ ಪಾಪ ನನ್ನ ಏರುಧ್ವನಿಯನ್ನು ಕಂಡು ಸ್ವಲ್ಪ ಹೆದರಿದಂತೆ ಕಂಡ ಮತ್ತು ನಾನು ತಿಳಿಸಿದ ಬೇಕರಿಯ ಕಡೆ ಹೊರಟುಹೋದ. ನಂತರ ಸುಮಾರು ಹದಿನೈದು, ಇಪ್ಪತ್ತು ನಿಮಿಷದ ನಂತರ ನನ್ನ ಸ್ನೇಹಿತೆಯ ಜೊತೆಯ ಮಾತುಕತೆ ಮುಗಿಸಿ ಬೇಕರಿಯವನಿಗೆ ಭಿಕ್ಷುಕನಿಗೆ ನೀಡಿದ ತಿಂಡಿಯ ದುಡ್ಡು ಕೊಡಲು ಹೋಗಿ 20 ರೂಪಾಯಿ ನೋಟನ್ನು ನೀಡಿದೆ.

ಬೇಕರಿಯವನು ನನ್ನ ಮುಖವನ್ನು ನೋಡುತ್ತಾ ಮ್ಯಾಡಂ ಒಟ್ಟು 673 ರೂಪಾಯಿ ಆಗಿದೆ. ಅಂದ 'ಯಾಕಪ್ಪ ಏನು ತಿಂದ ಅವನು' ಅಂದೆ. ಅದಕ್ಕೆ ಬೇಕರಿಯವನು ಮ್ಯಾಡಮ್ ಅವನು ಇಲ್ಲಿ ಏನೂ ತಿನ್ನಲಿಲ್ಲ ಎಲ್ಲವನ್ನೂ ಪಾರ್ಸಲ್ ಮಾಡಿಸಿಕೊಂಡ' ಎಂದ. 'ಏನನ್ನು' ಅಂದೆ. ಅದಕ್ಕೆ ಬೇಕರಿಯವನು ಮ್ಯಾಡಂ ಎರಡು ಪ್ಯಾಕ್ ಎಬಿಸಿ ಸಿಗರೇಟ್, ಎರಡು ದೊಡ್ಡ ಬಾಟಲ್ ಮಿರಿಂಡಾ ಒಂದೂವರೆ ಕೆ.ಜಿ. ಬರ್ತಡೇ ಕೇಕ್, ಚಿಪ್ಸ್ ಆರು ಪ್ಯಾಕೆಟ್ ಡೈರಿಮಿಲ್ಕ್ ಚಾಕಲೇಟ್ ದೊಡ್ಡದು ಮೂರು ಇತರೆ ಎಲ್ಲಾ ಸೇರಿ 673 ರೂ. ಆಯಿತು ಮ್ಯಾಡಂ ಏನು ಮ್ಯಾಡಂ ಇವತ್ತು ನಿಮ್ಮ ಮನೆಯಲ್ಲಿ ಯಾರದಾದರೂ ಬರ್ತ್‌ಡೇನಾ ಎಂದ ಬೇಕರಿಯವನು.

ನಾನು ಅದಕ್ಕೆ ಇಲ್ಲಪ್ಪಾ ಇಂದು ನನ್ನ ತಿಥಿ ಇದನ್ನೆಲ್ಲಾ ತೆಗೆದುಕೊಂಡು ಹೋದನಲ್ಲ. ಅವನದು ಬರ್ತಡೇ ಎಂದೆ. ಅಂದಿನಿಂದ ಭಿಕ್ಷುಕರು ಯಾರಾದರೂ ಭಿಕ್ಷೆ ಕೇಳಿದರೆ ತಕ್ಷಣ ಒಂದೋ, ಎರಡೋ ರೂಪಾಯಿ ಕೊಟ್ಟು ಬಿಡುತ್ತೇನೆ ಚಪ್ಪಾಳೆ ಮಾತ್ರ ಹೊಡೆಯುವುದಿಲ್ಲ.

## ಮುತ್ತಿನಂಥ ಮಾತು



**ಉಮಾ ಎನ್.**
ಪ್ರಥಮ ಬಿ.ಕಾಂ.

1. ಬರುವಾಗ ಏನನ್ನು ತರಲಿಲ್ಲ, ಹೋಗುವಾಗ ಏನನ್ನು ತೆಗೆದುಕೊಂಡು ಹೋಗುವುದಿಲ್ಲ, ಹೋಗಿಬರುವ ನಡುವೆ ದ್ವೇಷ ಯಾಕೆ? ಸಾಧ್ಯವಾದರೆ ಎಲ್ಲರನ್ನು ಪ್ರೀತಿಸೋಣ ದ್ವೇಷಕ್ಕೂ ಪ್ರೀತಿಯಕೊಟ್ಟು ಸ್ನೇಹದಿಂದ ಬದುಕಿಸೋಣ
2. ಮನುಷ್ಯ ಮನೆ ಬದಲಾಯಿಸುತ್ತಾನೆ ಊರು ಬದಲಾಯಿಸುತ್ತಾನೆ ಬಟ್ಟೆ ಬದಲಾಯಿಸುತ್ತಾನೆ ಸಂಬಂಧಗಳನ್ನೂ ಬದಲಾಯಿಸುತ್ತಾನೆ ಸ್ನೇಹಿತರನ್ನು ಬದಲಾಯಿಸುತ್ತಾನೆ ಆದರೂ ಅವನಿಗೆ ನೆಮ್ಮದಿ ಇಲ್ಲ ಏಕೆ? ಏಕೆಂದರೆ ಅವನು ತನ್ನನ್ನು ತಾನು ಬದಲಾಯಿಸಿ ಕೊಳ್ಳುವುದಿಲ್ಲ.
3. ನಿಮ್ಮ ತಪ್ಪುಗಳನ್ನು ಮೊದಲು ಪತ್ತೆ ಹಚ್ಚುವವರು ನಿಮ್ಮ ಶತ್ರುಗಳು ಅವರನ್ನು ಗಮನ ವಿಟ್ಟು ನೋಡುತ್ತಾ ಮುನ್ನಡೆಯಿರಿ ಮನಸ್ಸಿನ ನೆಮ್ಮದಿಗಾಗಿಯಾದರೂ ನೇರ ದಾರಿಯಲ್ಲಿ ಹೋಗುವ ಪ್ರತಿಜ್ಞೆ ಮಾಡಿರಿ ಘನತೆ, ಪ್ರಾಮಾಣಿಕತೆ ಸತತವಾಗಿ ಪ್ರಯತ್ನ ಮಾಡುವ ಗುಣ ನಿಮ್ಮಲ್ಲಿದ್ದರೆ ನೀವು ಜಯ ಶಾಲಿಗಳಾಗಿ ಮೆರೆಯುವಿರಿ. ಉತ್ತಮಸಾಹಿತ್ಯ ಐಶ್ವರ್ಯವನ್ನು ತಿರಸ್ಕರಿಸುವ ಶಕ್ತಿ ನೀಡುತ್ತದೆ ಮತ್ತು ಅದನ್ನು ಸಂಪಾದಿಸುವ ಮಾರ್ಗವೂ ಕಾಣದಂತೆ ಮಾಡಿ ಬಿಡುತ್ತದೆ.
4. ನಮ್ಮಲ್ಲಿರುವ ಬುದ್ಧಿವಂತಿಕೆ, ಜ್ಞಾನವೆಂದರೆ ಡಬ್ಬದಲ್ಲಿರುವ ಪೇಂಟ್ ಇದ್ದಂತೆ, ಪೇಂಟ್ ಅನ್ನು ಗೋಡೆಗೆ ಬಳಿದಾಗಲೇ ಅದರ ಮಹತ್ವ ಗೊತ್ತಾಗೋದು. ಬರೀ ಡಬ್ಬದಲ್ಲಿ ಇಟ್ಟರೆ ಪ್ರಯೋಜನವೇನು? ನಮ್ಮ ಬುದ್ಧಿ ವಂತಿಕೆಯು ಹಾಗೇ.
5. ವಿದ್ಯೆ ಒಂದಿದ್ದರೆ ನಿನ್ನನ್ನು ನೀನು ಗೆದ್ದಂತೆ. ವಿದ್ಯೆ ಬುದ್ಧಿ ಎರಡೂ ಇದ್ದರೆ ನೀನು ಇಡೀ ಜಗತ್ತನ್ನೇ ಗೆದ್ದಂತೆ

## ವೀರ ಯೋಧರು

ಭರತ ಭೂಮಿಯಲ್ಲಿ ಹುಟ್ಟಿದರು ವೀರ ಯೋಧರು
ಹಿನ್ನಡೆಯದೇ ಸಾಗಿದರು ವೀರ ನಾರಿಯರು
ಹಣ್ಣುಗಾಯಿ ನೀರುಗಾಯಿ ಮಾಡಿದರು ಶತ್ರುಗಳನ್ನು
ಮೆರೆದರು ದೇಶಭಕ್ತಿಯನ್ನು ತೋರಿದರು ದೇಶ ಪ್ರೇಮವನ್ನು
ಹಸಿವು ಬಾಯಾರಿಕೆ ನಿದ್ರೆ ಮರೆತು ಹೋದರು
ಯುದ್ಧ ಭೂಮಿಯಲ್ಲಿ ಧೈರ್ಯಗುಂದದೆ ಹೋರಾಡಿದರು
ಹರಿಸಿದರು ಯುದ್ಧಭೂಮಿಯಲ್ಲಿ ನೆತ್ತರನ್ನು
ಓಡಿಸಿದರು ಪರಾತಂತ್ರದ ಕತ್ತಲೆಯನ್ನು
ಅವಕಾಶ ಬಿಡದೆ ಉಚ್ಚರಿಸಿದರು
ವಂದೇ ಮಾತರಂ
ಕೊನೆಯುಸಿರಿನಲೂ ಮಾಡಿದರು
ಭಾರತ ಮಾತೆಗೆ ಸಲಾಂ
ಇದ ನೋಡಿ ಧನ್ಯಳಾದಳು ಭಾರತಮಾತೆ
ಇದುವೆ ನಮ್ಮ ಭಾರತೀಯ
ಹೋರಾಟಗಾರರ ಯಶೋಗಾಥೆ.

# ಗುರಿ ಸಾಧಿಸುವುದು ಹೇಗೆ



ಅಂಜು ಎಸ್.
ದ್ವಿತೀಯ ಬಿ.ಎ., ಹೆಚ್‌ಇಜಿ

ಪ್ರತಿಯೊಬ್ಬ ಮನುಷ್ಯನು ತಾನು ಸಮಾಜದಲ್ಲಿ ಗುರುತಿಸಿಕೊಳ್ಳಬೇಕು. ಏನಾದರೊಂದು ಸಾಧನೆ ಮಾಡಬೇಕೆಂದು ಬಯಸುತ್ತಾರೆ. ಇದು ಎಲ್ಲರಲ್ಲಿಯೂ ಸಹಜವಾಗಿರುತ್ತದೆ. ಹೀಗೆ ಎಲ್ಲರೂ ತಮ್ಮ ಜೀವನದಲ್ಲಿ ಒಂದೊಂದು ಗುರಿಯನ್ನು ಇಟ್ಟುಕೊಳ್ಳುತ್ತಾರೆ. ಆದರೆ ಅದನ್ನು ಕೈಬಿಡುವವರೆ ಅಧಿಕ. ಹೀಗೆ ಮಾಡಬಾರದು, ಕಾರಣ ಇದರಿಂದಾಗಿ ಜೀವನದಲ್ಲಿ ನಾವಂದುಕೊಂಡ ಗುರಿಯನ್ನು ತಲುಪಲು ಸಾಧ್ಯವಾಗುವುದೇ ಇಲ್ಲ. ಬದಲಾಗಿ ಜೀವನದಲ್ಲಿ ಬರುವ ಕಷ್ಟ ನೋವು, ಅವಮಾನಗಳನ್ನು ಧೈರ್ಯವಾಗಿ ಎದುರಿಸಿ ಮುನ್ನಡೆಯಬೇಕು. ಒಮ್ಮೆ ತೆಗೆದುಕೊಂಡ ನಿರ್ಧಾರವನ್ನು ಯಾವುದೇ ಕಾರಣಕ್ಕೂ ಬದಲಾಯಿಸಬಾರದು. ಸ್ವಾತಂತ್ರ್ಯ ಹೋರಾಟಗಾರರಾದ ಗಾಂಧೀಜಿ, ಸುಭಾಷ್‌ಚಂದ್ರಬೋಸ್, ನೆಹರು ಮುಂತಾದ ನಾಯಕರು ದೇಶವನ್ನು ಬ್ರಿಟಿಷರ ದಾಸ್ಯದಿಂದ ಮುಕ್ತಗೊಳಿಸಬೇಕು. ಅದಕ್ಕಾಗಿ ಬ್ರಿಟಿಷರು ಮಾಡಿದ ಅವಮಾನವನ್ನೆಲ್ಲ ಸಹಿಸಿದರು. ಅವರು ಕೊಟ್ಟ ಶಿಕ್ಷೆಯನ್ನೆಲ್ಲ ಜಯಿಸಿದರು. ಕಾರಣ ಅವರ ಗುರಿ ದೇಶಕ್ಕೆ ಸ್ವಾತಂತ್ರ್ಯ ಕೊಡಿಸುವುದಾಗಿತ್ತು. ಅದರಂತೆ ಅವರು ಅಂದುಕೊಂಡಿದ್ದನ್ನು ಸಾಧಿಸಿದರು ಕೂಡ. ಇಂತಹ ಮಟ್ಟದಲ್ಲಿ ಸಾಧನೆ ಮಾಡಬೇಕೆಂದು ಯಾರು ಕೇಳುವುದಿಲ್ಲ. ಹೊರತಾಗಿ ನಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ನಾವು ಸಮಾಜದಲ್ಲಿ ಗುರುತಿಸಿಕೊಳ್ಳುವಂತಾಗಬೇಕು.

ನಾವು ನಮ್ಮ ಗುರಿಯನ್ನು ಸಾಧಿಸಬೇಕಾದರೆ ನಮ್ಮ ಆಚಾರ-ವಿಚಾರ, ನಡೆ-ನುಡಿ, ನಾವು ಜನರೊಂದಿಗೆ ವರ್ತಿಸುವ ರೀತಿ-ನೀತಿ ಅನುಕರಣೀಯವಾಗಿರಬೇಕು. ನಮ್ಮ ಮನಸ್ಸು ಕಲ್ಲಾಗಿರಬಾರದು ನಾವು ಇನ್ನೊಬ್ಬರು ಕಷ್ಟದಲ್ಲಿ ಭಾಗಿಯಾಗಬೇಕು. ಸಮಾಜಕ್ಕೆ ಕೈಲಾದ ಉಪಕಾರವನ್ನು ಮಾಡಬೇಕೆ ವಿನಃ ಅಪಕಾರವನ್ನಂತೂ ಮಾಡಬಾರದು. ನಮ್ಮ ಗುರಿ ಮುಟ್ಟುವವರೆಗೂ ತಾಳ್ಮೆ, ಧೈರ್ಯ ಕಳೆದುಕೊಳ್ಳಬಾರದು.

ನಾವು ಹೀಗೆ ಮಾಡಿದಾಗ ಪ್ರೀತಿ, ಸಂಪತ್ತು ಗೌರವ ತಂತಾನೇ ಸಿಗುತ್ತದೆ. ಆದ್ದರಿಂದ ಇಂದೇ ನಿಮ್ಮ ಗುರಿಗಳನ್ನು ನಿರ್ಧರಿಸಿಕೊಳ್ಳಿ ಮತ್ತು ಅದರ ಸಾಧನೆಗಾಗಿ ಕಾರ್ಯಪ್ರವೃತ್ತರಾಗಿ.

## ಇರುವೆಯಂತಾಗಿ

ಕಲಿಯುವ ಆಸೆ ಇದ್ದರೆ ಇರುವೆಯಿಂದ ಕಲಿಯಿರಿ, ಕಲಿಯುವ ಆಸೆ ಇಲ್ಲದಿದ್ದರೆ ಯಾರು ಏನನ್ನೂ ಕಲಿಯುತ್ತಿರಲಿಲ್ಲ. ಪ್ರಯತ್ನ ಮತ್ತು ಪ್ರದರ್ಶನ ಕಲಿಯಬೇಕಾದರೆ ಇರುವೆಗಳನ್ನು ನೋಡಿ ಕಲಿಯಿರಿ. ಇರುವೆ ತನ್ನ ಭಾರಕ್ಕಿಂತ ಐದುಪಟ್ಟು ಭಾರವನ್ನು ಹೊತ್ತು ಹತ್ತುಬಾರಿ ಗೋಡೆಯ ಮೇಲೆ ಹತ್ತುವುದು, ಕೆಳಗೆ ಬೀಳುವುದು. ಆದರೆ ಧೈರ್ಯಗೆಡುವುದಿಲ್ಲ. ಮರಳಿಯತ್ನವ ಮಾಡಿ ಗೋಡೆ ಹತ್ತಿ ಸಫಲತೆ ಪಡೆಯುವುದು. ಜೀವನದಲ್ಲಿ ಸಂಘರ್ಷದ ನಡುವೆ ಪ್ರಯತ್ನಪಟ್ಟರೆ ಸಫಲತೆ ಖಂಡಿತ ದೊರೆಯುವುದು. ಮಹಾವೀರ, ಮಹಾತ್ಮಗಾಂಧಿ, ಬುದ್ಧ, ಕ್ರಿಸ್ತ, ಬಿರ್ಲಾ ಕಿರಣ್‌ಬೇಡಿ, ಆದಿಶಂಕರಾಚಾರ್ಯ, ಅಬ್ದುಲ್‌ಕಲಾಂ, ತುಕಾರಾಮ್, ಆಟಗಾರ ಸಚಿನ್ ತೆಂಡುಲ್ಕರ್ ತನಕ ಎಲ್ಲರೂ ಸಂಘರ್ಷದ ನಡುವೆಯೇ ತಮ್ಮ ಗುರಿಯನ್ನು ಸಾಧಿಸಿದ್ದಾರೆ. ಬನ್ನಿ ಯುವಕ ಯುವತಿಯರೇ ನಾವು ಇರುವೆಯಂತೆ ಹಾಗೋಣ.

# ಮುತ್ತಿನಂಥ ಮಾತು



**ಶಬರಿನ್**

**ಪ್ರಥಮ ಬಿ.ಎ., ಹೆಚ್‌ಇಜಿ**

- ಮಧುರ ಸ್ನೇಹವೆಂಬುದು ಕಣ್ಣು ಮತ್ತು ಕೈಗಳಿದ್ದಂತೆ, ಕೈಗೆ ಪೆಟ್ಟಾದಾಗ ಕಣ್ಣಲ್ಲಿ ನೀರು ಬರುತ್ತದೆ. ಅದೇ ಕಣ್ಣೀರನ್ನು ಒರೆಸುವುದು ಅದೇ ಕೈಗಳೇ.
- ಸಜ್ಜನರ ಸತ್ಸಂಗದಲ್ಲಿ ಕಳೆದ ಸಮಯ ಹಾಗೂ ಬುದ್ಧಿವಂತರ ಜೊತೆ ನಡೆಸಿದ ಸಂವಾದ ಉತ್ತಮ ಪುಸ್ತಕಗಳನ್ನು ಓದಿದಷ್ಟೇ ಜ್ಞಾನವನ್ನು ನೀಡಬಲ್ಲವು
- ಆತ್ಮ ಸಂತೃಪ್ತಿ ಎನ್ನುವುದು ಯಶಸ್ಸಿಗಿಂತಲೂ ಉನ್ನತವಾದದ್ದು. ಏಕೆಂದರೆ ನಮ್ಮ ಯಶಸ್ಸು ಇನ್ನೊಬ್ಬರಿಂದ ಅಳೆಯಲ್ಪಡುತ್ತದೆ. ಆದರೆ ಆತ್ಮಸಂತೃಪ್ತಿಯನ್ನು ನಮ್ಮದೇ ಆತ್ಮ ಮತ್ತು ಮನಸ್ಸು ನಿರ್ಧರಿಸುತ್ತದೆ.
- ಸಮಯವನ್ನು ನಾವು ಹೇಗೆ ಬಳಸಿಕೊಳ್ಳುತ್ತೇವೆ ಎಂಬುದರ ಆಧಾರದಲ್ಲೇ ನಮ್ಮ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಬದುಕಿನ ಪ್ರತಿ ಕ್ಷಣದಲ್ಲೂ ಎದುರಾಗುವ ಸೋಲು-ಗೆಲುವು, ನೋವು-ನಲಿವುಗಳನ್ನು ಆಸ್ವಾದಿಸುತ್ತ ಮುಂದೆ ಸಾಗೋಣ.
- ಇನ್ನೊಬ್ಬರಿಗೆ ಸಹಾಯ ಮಾಡುವ ಅವಕಾಶ ಸಿಕ್ಕರೆ ಅದು ದೇವರು ನಮಗೆ ಕೊಟ್ಟ ವರ ಎಂದೇ ತಿಳಿಯಬೇಕು. ಹಾಗೆಯೇ ಸಹಾಯ ಮಾಡಿದ ಬಳಿಕ ಎಂದೂ ಅಹಂಕಾರಪಡಬಾರದು.
- ಯಶಸ್ಸು ಎಂಬುದು ಮುಂದಿನ ಕೆಲಸವನ್ನು ಇನ್ನೂ ಪರಿಣಾಮಕಾರಿಯಾಗಿ ಮಾಡಲು ದೊರೆಯುವ ಅವಕಾಶವೇ ಹೊರತು ಅದುವೇ ಅಂತಿಮ ನಿಲ್ದಾಣವಲ್ಲ.
- ನಮ್ಮಿಂದ ಸಾಧ್ಯವಾಗದ್ದು ಯಾರಿಂದಲೂ ಸಾಧ್ಯವಿಲ್ಲ ಎಂಬ ಧೋರಣೆ ಬೇಡ, ಇನ್ನೊಬ್ಬರಿಗೆ ಸಾಧ್ಯವಾಗಿದ್ದು ನಮಗೇಕೆ ಸಾಧ್ಯವಿಲ್ಲ ಎಂದುಕೊಂಡೇ ಮುಂದುವರಿಯೋಣ
- ಇಂಥ ಮಕ್ಕಳನ್ನು ಪಡೆದು ಧನ್ಯವಾದೆವು ಎಂಬುದು ಪಾಲಕರ ಅನಿಸಿಕೆಯಾದರೆ ಅದೇ ನಾವು ಅವರಿಗೆ ನೀಡಬಹುದಾದ ಅತ್ಯುತ್ತಮ ಕಾಣಿಕೆ.
- ಸಾವಿರ ಮಂದಿ ಸ್ನೇಹಿತರನ್ನು ಸಂಪಾದಿಸುವುದೇ ದೊಡ್ಡ ಸಾಧನೆಯಲ್ಲ. ಸಂಪಾದಿಸಿದ ಒಂದು ಸ್ನೇಹ ಸಾವಿರ ಕಾಲ ಇರುವಂತೆ ನೋಡಿಕೊಳ್ಳುವುದೇ ನಿಜವಾದ ಸಾಧನೆ.
- ತಪ್ಪು ಮಾಡಿದವರು ಕ್ಷಮೆ ಯಾಚಿಸದಿರುವುದು ಪಾಪ, ಕ್ಷಮೆ ಬೇಡಿದಾಗ ಕ್ಷಮಿಸದಿರುವುದು ಇನ್ನೂ ಮಹಾಪಾಪ.
- ನೆರವಿಗೆ ನಿಂತವರನ್ನು ಮತ್ತು ಸಹಾಯ ಮಾಡಿದವರನ್ನು ಎಂದೆಂದಿಗೂ ಮರೆಯಬಾರದು.
- ಯಾರೋ ನಮಗೆ ಅನ್ಯಾಯ ಮಾಡಿದರೆಂದು ನಾವು ಅವರಿಗೆ ಅನ್ಯಾಯ ಮಾಡಿದರೆ ಅವರು ಅನುಭವಿಸುವ ಕರ್ಮವನ್ನು ನಾವೂ ಅನುಭವಿಸಬೇಕಾದೀತು.
- ನಾವು ಬೆಳೆಸಿದ ಮರದ ನೆರಳನ್ನು ನಮಗಿಂತ ಬೇರೆಯವರು ಉಪಯೋಗಿಸಿ ಕೊಂಡಾಗಲೇ ಗಿಡ ನೆಟ್ಟಿದ್ದು ಸಾರ್ಥಕವಾಗುತ್ತದೆ. ಮತ್ತು ಸಂತೋಷವೂ ದ್ವಿಗುಣಗೊಳ್ಳುತ್ತದೆ.
- ದೇವರ ಮುಂದೆ ಹಚ್ಚುವ ದೀಪ ದೇವರಿಗೆ ಬೆಳಕು ಕೊಡುವುದಕ್ಕಲ್ಲ. ಆದರೆ ನಮ್ಮಲ್ಲಿರುವ ಕತ್ತಲೆಯನ್ನು ಕಳೆದು ಹೃದಯ ಮತ್ತು ಮನಸ್ಸನ್ನು ಬೆಳಗಿಸಲು.
- ಸಾಧನೆಯ ಏಣಿಯನ್ನು ಪ್ರತಿಭೆಯ ಮೂಲಕ ಏರಬೇಕೇ ವಿನಃ, ಅಡ್ಡ ಮಾರ್ಗಗಳಿಂದಲ್ಲ.
- ನಾವಂದುಕೊಂಡಿದ್ದೆಲ್ಲ ಸತ್ಯ ಅಲ್ಲ ಅನ್ನೋದು ಕಷ್ಟಕಾಲದಲ್ಲಿ ನಮ್ಮ ಅರಿವಿಗೆ ಬರುತ್ತದೆ. ಆ ಕಾರಣಕ್ಕಾಗಿಯಾದರೂ ಕಷ್ಟಗಳನ್ನು ಸ್ವಾಗತಿಸಬೇಕು.

# ಲಜ್ಜೆ ಎಲ್ಲಿರಬೇಕು



**ಸುಶ್ಮಿತ ಎನ್**
ತೃತೀಯ ಬಿ.ಎ., ಹೆಚ್.ಇ.ಪಿ.

ಅನೇಕ ಸಲ ನಾವು ಮಕ್ಕಳನ್ನು ಯುವಕರನ್ನು ಗಮನಿಸಿದರೆ ಅವರಿಗೆ ನಾವು ಹೇಳಿದ ಕೆಲವೊಂದು ವಿಚಾರಗಳನ್ನು ಮಾಡಲು ಮನಸ್ಸಿರುವುದಿಲ್ಲ. ಉದಾಹರಣೆಗೆ ಮನೆಯಲ್ಲಿ ಯಾರಪ್ಪ ಅಜ್ಜ ಅಜ್ಜಿ ಇದ್ರೆ ಅವರಲ್ಲಿ ಪ್ರೀತಿ ಗೌರವವಿರುವುದಿಲ್ಲವೆಂದಲ್ಲ. ಆದರೆ ಅವರನ್ನು ಆಸ್ಪತ್ರೆಗೆ ರೆಗ್ಯುಲರ್ ಚೆಕ್‌ಆಪ್‌ಗೆ ಕರ್ಕೊಂಡು ಹೋಗಬೇಕು ಅಂದಾಗ ಹಿಂದೆ ಸರೀತಾರೆ ಅಥವಾ ಮುಖದಪ್ಪಗಾಗುತ್ತದೆ. ಯಾಕೆಂದರೆ ನಿಧಾನವಾಗಿ ಅವರನ್ನು ರಿಕ್ಷಾದಲ್ಲೋ ಬಸ್ಸಿನಲ್ಲೋ ಕರ್ಕೊಂಡು ಹೋಗಿ ಅಲ್ಲಿ ಅರ್ಧ ಗಂಟೆ ಅಥವಾ ಒಂದು ಗಂಟೆ ಕಾದು ಡಾಕ್ಟ್ರನ್ನು ಕಂಡು ಪರೀಕ್ಷೆ ಎಲ್ಲಾ ಮಾಡಿಸಿ, ವಾಪಸ್ಸು ಕರ್ಕೊಂಡು ಬರುವುದೆಂದರೆ ಅವರಿಗೆ ತಲೆನೋವಿನ ವಿಚಾರ ಹಾಗೆ ಅಮ್ಮ ತಂಗಿಯರ ಜೊತೆಗೆ ದೇವಸ್ಥಾನಕ್ಕೋ ಪೇಟೆಗೋ ಹೋಗಿ ಸಣ್ಣಪುಟ್ಟ ಖರೀದಿ ಮಾಡಿಕೊಂಡು ಬರುವುದೆಂದರೂ ಮಾರುದ್ದ ದೂರ.

ಹಾಗೇ ಊರಿಗೆ ಗುರುಗಳು ಬಂದಾಗ ಮನೆಮಂದಿ ಎಲ್ಲಾ ಅವರ ದರ್ಶನ ಪ್ರವಚನಕ್ಕೆ ಹೊರಟು ನಿಂತರೆ ತಾನು ಜೊತೆಗೆ ಹೋಗುವುದಕ್ಕೆ ಮನಸ್ಸಿರೋದಿಲ್ಲ. ಇವೆಲ್ಲಾ ತನಗೆ ಬೇಕಿಲ್ಲ ಎನ್ನುವುದು ಒಂದು ಕಾರಣವಾದರೆ, ನನ್ನ ಸ್ನೇಹಿತರು ಶಾಲೆಯವರು ಕಂಡರೆ ಏನಂದು ಕೊಳ್ಳುತ್ತಾರೋ ಎನ್ನುವ ಭಯ, ನಾಚಿಕೆ, ಮನೆಯಲ್ಲಿ ನಡೆವ ಪೂಜೆ ಪುನಸ್ಕಾರಗಳಲ್ಲಿ ಹಬ್ಬ ಹರಿದಿನಗಳಲ್ಲಿ ಮನೆ ಮಂದಿ ಜೊತೆ ಉತ್ಸಾಹದಿಂದ ಪಾಲ್ಗೊಂಡು ತನ್ನ ಕೈಲಾದ ಕೆಲಸಗಳು ಮಾಡುತ್ತಾ ಹಬ್ಬಕ್ಕೆ ಕಳೆ ತುಂಬುವ ಬದಲು, ತನಗೇನೂ ಸಂಬಂಧವಿಲ್ಲವೆನ್ನುವಂತೆ ಹೊರಗೆ ಗೆಳೆಯರ ಜೊತೆ ಸುತ್ತಾಡಿ ಊಟಕ್ಕಷ್ಟೇ ಬರುವವರು ಇದ್ದಾರೆ. ಏಕೆಂದರೆ ಇಂತವುಗಳಲ್ಲೆಲ್ಲಾ ತೊಡಗಿಸಿಕೊಂಡು ಸಂಪ್ರದಾಯಗಳನ್ನು ಆಚರಿಸುವುದಕ್ಕೆ ಅವರಿಗೆ ಮುಜುಗರವಾಗುತ್ತದೆ. ಲಕ್ಷಣವಾಗಿ ಪಂಚೆ ಉಟ್ಟು – ಶಾಲು ಹೊದ್ದು ಪೂಜೆಯಲ್ಲಿ ಪಾಲ್ಗೊಂಡಾಗ ಮನೆಮಂದಿಯೆಲ್ಲಾ ಸಂತೋಷಪಡುತ್ತಾರೆ. ಮಾತ್ರವಲ್ಲ ಸಂಪ್ರದಾಯಗಳ ಆಚರಣೆ, ಪದ್ಧತಿಗಳ ಬಗ್ಗೆ ಅರಿವು ಉಂಟಾಗುತ್ತದೆ. ಈ ಮೇಲಿನ ವಿಷಯಗಳಲ್ಲಿ ಮಕ್ಕಳು ಯಾವತ್ತು ಲಜ್ಜೆ ಪಡಬೇಕಾಗಿಲ್ಲ.

ಯಾವ ವಿಷಯದಲ್ಲಿ ನಮ್ಮ ಮಕ್ಕಳು ಲಜ್ಜೆ ಪಡಬೇಕೆನ್ನುವುದನ್ನು ಅವರಿಗೆ ತಿಳಿಹೇಳಬೇಕಾಗುತ್ತದೆ. ಮನೆಯಲ್ಲಿ ಹಿರಿಯರಿಗೆ, ತಂದೆ ತಾಯಿಗೆ ಗೌರವ ಕೊಡದೇ ಇರುವುದು, ನೆರೆಮನೆಯವರೊಂದಿಗೆ ನಿಷ್ಠುರಮಾತು, ಜಗಳ, ಕೆಟ್ಟ ಸ್ನೇಹಿತರ ಸಹವಾಸದಲ್ಲಿದ್ದು ಕೆಟ್ಟ ಕೆಲಸಗಳನ್ನು ಮಾಡುವಾಗ ಸಿಕ್ಕಿಬೀಳುವುದು. ಮಾರ್ಗದ ಬದಿಯಲ್ಲಿ ಹರಟೆ ಹೊಡೆಯುತ್ತಾ ರಸ್ತೆಯಲ್ಲಿ ಹೋಗೊ ಹೆಣ್ಣುಮಕ್ಕಳನ್ನು ಚುಡಾಯಿಸುವುದು, ಹೋದಲ್ಲೆಲ್ಲಾ ಶಿಸ್ತು, ಸಂಯಮ ಮೀರಿ ಉದ್ಧಟತನದಿಂದ ವರ್ತಿಸುವುದು, ಅವಾಚ್ಯ ಶಬ್ದಗಳನ್ನು ಉಪಯೋಗಿಸಿ ಬೈಯುವುದು, ಶಾಲೆ, ಕಾಲೇಜಿಗೆ ಚಕ್ಕರ್ ಹೊಡೆದು ಸಿನಿಮಾ ಥಿಯೇಟರ್ ಬಳಿ, ಮಾಲ್‌ಗಳಲ್ಲಿ ಅಡ್ಡಾಡುವುದು, ಕೆಲಸವಿಲ್ಲದೆ ಸಂಬಳವೂ ಇಲ್ಲದೆ ಅಪ್ಪ ಅಮ್ಮನ ದುಡ್ಡಲ್ಲಿ ಮಜ ಉಡಾಯಿಸುವುದು – ದುಡ್ಡಿಗಾಗಿ ಪೀಡಿಸುವುದು ಸುಳ್ಳು ಹೇಳುವುದು, ಸಿಗರೇಟು ಮದ್ಯಪಾನ ಸೇವನೆ ಇತ್ಯಾದಿ ದುರಭ್ಯಾಸಗಳನ್ನು ಬೆಳೆಸಿಕೊಳ್ಳುವುದು. ಅಧ್ಯಾಪಕರು ಗುರುಗಳು ಬಗ್ಗೆ ಹಿಂದಿನಿಂದ ಟೀಕೆ ಮಾಡುವುದು ಇಷ್ಟೇ ಅಲ್ಲ ಪಟ್ಟಿ ಮಾಡಿದಷ್ಟೂ ಬೆಳೆಯುತ್ತಾ ಹೋಗುವ ಇಂತಹ ವಿಚಾರಗಳ ಬಗ್ಗೆ ನಮ್ಮ ಯುವಕರು ಲಜ್ಜೆ ಪಡಬೇಕಾಗಿದೆ.

## ನವ ಸಂವತ್ಸರ

ಸಂಗೀತ ಎ.
ತೃತೀಯ ಬಿ.ಕಾಂ



ಯುಗಾದಿ ಬಂತು ಹೊಸ ಸಂವತ್ಸರ ತಂತು
ನವ್ಯ ಸೊಬಗು ಸೃಷ್ಟಿಯಲ್ಲಿ ಚಿಮ್ಮಿತ
ಬೇವು ಬೆಲ್ಲ ನೀಡುವ ಹೆಂಗಳೆಯರಲಿ
ನವ ಮನ್ವಂತರದ ಸಿರಿ ತಂತು
ಗಿಡಮರದ ರೆಂಬೆ ಕೊಂಬೆಗಳು

ಹಚ್ಚ ಹಸಿರ ಚೆಲ್ಲಿ ಕೋಗಿಲೆಯ ಕಂಠದಲಿ
ಮಧುರ ಸ್ವರ ತಂತು ಕವಿ ಹೃದಯದಲಿ
ಕಾವ್ಯ ಸಿರಿಯ ಹರಿಸಿ ಖಗ ಸಂಕುಲಗಳ
ಗೂಡಿನಲಿ ನವ ಸಂಕುಲ ತಂತು

ಬೇಸಿಗೆಯ ಸುಡು ಬಿಸಲಿನಲಿ
ಮೇಘರಾಜನ ಎಚ್ಚರಿಸುತ್ತಾ
ತಂಪಿನ ಕಳೆಯನ್ನು ಇಳೆಗೆ ತಂತು

ನೇಗಿಲ ಯೋಗಿಯ ಬದುಕಲ್ಲಿ
ಹೊಂಗನಸನ್ನು ಹಾಕುತ್ತಾ ಯುವ
ತನುಗಳಲ್ಲಿ ಮದುವೆಯ
ಕಂಕಣ ಬಲ ತಂತು
ಹೊಸ ಸಂವತ್ಸರದ ಕಾಯಕಗಳಿಗೆ

ಶುಭ ಹಾರೈಸುತ್ತಾ, ನೇಗಿಲ ಯೋಗಿಯ
ನೊಗಕ್ಕೆ ಬಲ ತಂತು, ಪ್ರಕೃತಿಯಲಿ ಚಿಲಿಪಿಲಿ
ಗಾನವ ಮಿಡಿಯುತ
ವಸಂತ ರಾಜನ ಕರೆತಂತು

## ದರ್ಪಣ

ಪ್ರಗತಿಯ ಕೈಗನ್ನಡಿ
ಸಾಧನೆಗೆ ಚಿರ ಮುನ್ನುಡಿ
ಸರ್ವರಿಗೂ ಮುದ ನೀಡುವ
ಅಧ್ಯಕ್ಷರ ನಲ್ನುಡಿ
ಜ್ಞಾನ ವಿಜ್ಞಾನದಲ್ಲಿ
ಆತ್ಮಾವಲೋಕನದಲ್ಲಿ
ಸ್ಪಷ್ಟ ನುಡಿ
ಸುಭಾಷಿತದಿ
ಪದಬಂಧದ ಅಂಕಣದಿ
ವಿದ್ಯಾರ್ಥಿನಿಯರ ಮನ ಮನದಿ
ಪ್ರತಿ ವರ್ಷ ತುಂಬುತ್ತಿದೆ
ಬಾಳಿಗೆ ಆಶೋತ್ತರ
ಈ ಪ್ರಗತಿಯ ಉತ್ತರಕೆ
ನಿದರ್ಶನವು ದರ್ಪಣ.

## ಸ್ನೇಹ

ಸ್ನೇಹವೆಂಬುದು ಕನ್ನಡಿ
ಒಮ್ಮೆ ಜಾರಿದರೆ ಪುಡಿ ಪುಡಿ
ಮೊದಲು ತಿಳಿ ಈ ಮುನ್ನುಡಿ
ಹಿರಿಕರೆ ಆರು ವರ್ಷ
ಮರೆತರೆ ಮೂರು ವರ್ಷ
ಅಪರಿಚಿತಳಾಗಿ ಬಂದು
ಪರಿಚಿತಳಾಗಿ ಉಳಿದು
ನೆಲ ಇಲ್ಲದೆ ಹೊರಟು ಹೋಗುವಾಗ
ನಿನ್ನ ಸ್ನೇಹವೆಂಬ ನೆನಪು ಸದಾ
ತನುವ ತೋಟವ ಮಾಡಿ
ಮನವ ಗುದ್ದಲಿ ಮಾಡಿ
ಪ್ರೀತಿಯೆಂಬ ನೀರನ್ನೆರೆದು
ಬೆಳೆಸೆನ್ನಾ ಸ್ನೇಹದ ಬಳ್ಳಿ

ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ
ಜೆ. ಎಸ್. ಎಸ್. ಮಹಿಳಾ ಕಾಲೇಜು
ಕೊಳ್ಳೇಗಾಲ-571440



# ಬೋಧನೆಯಲ್ಲಿ ಮೌಲ್ಯಗಳ ಮಹತ್ವ



ಟಿ.ಎಂ. ಶಿಲ್ಪ
ತೃತೀಯ ಬಿ.ಎ. (ಹೆಚ್‌ಇಕೆ)

ಮೌಲ್ಯಗಳಿಲ್ಲದ ಜೀವನವಾಗಲಿ, ಶಿಕ್ಷಣವಾಗಲಿ ಮತ್ತು ಮೌಲ್ಯಗಳನ್ನು ಅಳವಡಿಸಿರದ ಪಠ್ಯ ಪುಸ್ತಕಗಳಾಗಲಿ ಮೌಲ್ಯಗಳಿಗೆ ಒತ್ತುಕೊಟ್ಟು ಬೋಧಿಸದ ಶಿಕ್ಷಕರಾಗಲಿ, ನಿರುಪಯುಕ್ತವಷ್ಟೇ ಅಲ್ಲ. ದೇಶದ ಕರಾಳ ಭವಿಷ್ಯದ ದ್ಯೋತಕ. ವಿಜ್ಞಾನದ ಉತ್ಕರ್ಷದಿಂದಾಗಿ ಜನಜೀವನದಲ್ಲಿ ಸೌಲಭ್ಯಗಳು ಹೆಚ್ಚುತ್ತಿರುವ ವೇಗದಲ್ಲಿಯೇ ಮಾನವೀಯ ಮೌಲ್ಯಗಳು ಮಾಯವಾಗುತ್ತಿರು ವುದು ಶೋಚನೀಯ.

ಶಿಕ್ಷಣವಿಲ್ಲದ ಜೀವನ ಅಪೂರ್ಣ, ಜೀವನಕ್ಕೆ ಪೂರಕವಲ್ಲದ ಶಿಕ್ಷಣ ಅರ್ಥಹೀನ "ಶೀಲವಿಲ್ಲದ ಶಿಕ್ಷಣ ಸಾಮಾಜಿಕ ಸಪ್ತಮಹಾಪಾತಕಗಳಲ್ಲೊಂದು" ಎಂದು ಬಾಪೂಜಿ ಹೇಳಿದ್ದುಂಟು. ರಾಷ್ಟ್ರೀಯ ಶಿಕ್ಷಣ ನೀತಿಯು ಕೂಡ ಮೌಲ್ಯಗಳು ನಶಿಸುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿ, ಶಾಲಾ ಶಿಕ್ಷಣಾರಂಭದಿಂದಲೇ ಮೌಲ್ಯ ಶಿಕ್ಷಣಕ್ಕೆ ಹೆಚ್ಚು ಒತ್ತುಕೊಟ್ಟು ಬೋಧಿಸಲು ತಿಳಿಸಿದೆ. ಪ್ರತಿವ್ಯಕ್ತಿ, ಪ್ರತಿ ಚಟುವಟಿಕೆಯಲ್ಲಿ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡಾಗ ಮಾತ್ರ ಜೀವನ ಸಹ್ಯವೆನಿಸುತ್ತದೆ. ನೆಮ್ಮದಿ ಯಾಗುತ್ತದೆ. ಇದನ್ನು ಸಾಧಿಸುವ ಜವಾಬ್ದಾರಿ ಶಿಕ್ಷಣದ ಮೇಲಿದೆ, ಶಿಕ್ಷಕರ ಮೇಲಿದೆ.

"ಮೌಲ್ಯ" ಎಂದರೆ ವ್ಯಕ್ತಿ ಮತ್ತು ಸಮಾಜದ ನಡುವಿನ ಆರೋಗ್ಯಕರ ಸಂಬಂಧಕ್ಕಾಗಿ ವರ್ತನೆ, ಕ್ರಿಯೆ, ವ್ಯಕ್ತಿತ್ವನ್ನು ನಿಯಂತ್ರಿಸುವ ಬದುಕಿನ ಚಲನಾ ಶಕ್ತಿ ಮಕ್ಕಳಲ್ಲಿ ಮೌಲ್ಯಾಧಾರಿತ ಗುಣ ಬೆಳೆಸುವುದು, ನಡತೆಯನ್ನು, ವಿಚಾರವನ್ನು, ಆಲೋಚನೆಯನ್ನು ಉದಾತ್ತೀಕರಿಸುವುದೇ ಮೌಲ್ಯಶಿಕ್ಷಣದ ಉದ್ದೇಶ ಜ್ಞಾನ ಮತ್ತು ಕೌಶಲ್ಯಗಳನ್ನು ಅಳವಡಿಸಿಕೊಂಡು ಉತ್ತಮ ನಾಗರೀಕನಾಗಿ ಬಾಳಲು ಪ್ರೇರಕವಾಗುವ ಅಂಶಗಳೆಲ್ಲವೂ ಮೌಲ್ಯಗಳೇ.

ಮಾನವನೂ ಒಂದು ಪ್ರಾಣಿ, ಆದರೆ ಆಲೋಚಿಸಬಲ್ಲ ಪ್ರಾಣಿ. ಪ್ರಾರಂಭದಲ್ಲಿ ಈತನೂ ಕಾಡುಪ್ರಾಣಿಯೇ ಆಗಿದ್ದ. ಕಾಲಕ್ರಮೇಣ ತನ್ನ ಆಲೋಚನಾ ಶಕ್ತಿಯಿಂದ ಬದುಕಿನಲ್ಲಿ ಬರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುತ್ತ, ಜೀವನ ನೆಮ್ಮದಿಯಾಗುವಂತೆ ನೋಡಿದನು. ಅದಕ್ಕಾಗಿ ಕೆಲವು ನೀತಿ ನಿಯಮಗಳನ್ನು ರೂಪಿಸಿ, ಅವುಗಳನ್ನು ತನ್ನ ನಡೆ ನುಡಿಯಲ್ಲಿ ಅಳವಡಿಸಿಕೊಳ್ಳುತ್ತ ಬಂದನು. ತಾತ್ಕಾಲಿಕ ಮೌಲ್ಯಗಳು ತತ್ಕಾಲಕ್ಕೆ ಉಪಯೋಗ ವಾದರೆ ಶಾಶ್ವತ ಮೌಲ್ಯಗಳು ಉಳಿದುಕೊಂಡು ಬಂದವು. ಅವೆ ಇಂದಿಗೂ ಮುಂದುವರೆದಿವೆ. ಮೌಲ್ಯಗಳ ವ್ಯವಸ್ಥಿತ ಸಂಕಲನವೇ ನಮ್ಮ ಸಂಸ್ಕೃತಿ ಎನ್ನಬಹುದು.

ಮೌಲ್ಯಗಳನ್ನು ಧಾರ್ಮಿಕ (ಧರ್ಮ ಸಮನ್ವಯ), ಸಾಮಾಜಿಕ (ಕೂಡಿ ಬಾಳುವ), ಆರ್ಥಿಕ (ಮಿತವ್ಯಯ ಸಹಾಯ) ಸಾಂಸ್ಕೃತಿಕ (ಸರ್ವಧರ್ಮಗಳ ಹಬ್ಬಗಳನ್ನು) ಕೂಡಿ ಮಾಡುವುದು), ರಾಜಕೀಯ (ಜನಹಿತಕ್ಕಾಗಿ ಸೇವೆ) ಎಂದು ವರ್ಗೀಕರಿಸಬಹುದು. ನೈತಿಕ, ವೈಯಕ್ತಿಕ ಮತ್ತು ಕ್ರೀಡಾ ಮೌಲ್ಯಗಳು ಇವುಗಳಲ್ಲಿಯೇ ಅಂತರ್ಗತವಾಗುತ್ತವೆ. ಇವೆಲ್ಲವೂ ಮಾನವೀಯ ಮೌಲ್ಯಗಳಾಗಿದ್ದು, ಸರ್ವಕಾಲಿಕ ಮೌಲ್ಯಗಳೂ ಆಗಿವೆ.

ಎನ್.ಸಿ.ಇ.ಆರ್.ಟಿ.ಯವರು ಒಟ್ಟು 84 ಮೌಲ್ಯಗಳನ್ನು ಪಟ್ಟಿ ಮಾಡಿದ್ದು, ಅವುಗಳಿಗೆ ತಳಹದಿಯಾಗಿರುವ ಐದು ಮೂಲಭೂತ ಮೌಲ್ಯಗಳೆಂದರೆ ಸತ್ಯ, ಸದ್ವರ್ತನೆ, ಶಾಂತಿ, ಪ್ರೇಮ ಮತ್ತು ಅಹಿಂಸೆ.

ಮೌಲ್ಯಗಳನ್ನು ವಸ್ತು ರೂಪದಲ್ಲಿ ತೋರಿಸಲಾಗದು. ಅದೇನಿದ್ದರೂ ನಡೆದು

ತೋರಿಸಬೇಕು. ಜ್ಞಾನಾರ್ಜನೆ, ತಿಳುವಳಿಕೆ, ಗ್ರಹಿಕೆ, ಅಭಿವ್ಯಕ್ತಿ ಕೌಶಲಗಳನ್ನು ಅಳೆಯುವಷ್ಟು ಮೌಲ್ಯಗಳನ್ನು ಅಳೆಯುವುದು ಸುಲಭವಲ್ಲ. ಇದಕ್ಕೆ ಶಿಕ್ಷಕರ ಸತತ ನಿರೀಕ್ಷೆ ಅಗತ್ಯ. ಶಿಕ್ಷಕರು ತನ್ನ ನಡತೆಯನ್ನು ಪರೀಕ್ಷಿಸುತ್ತಾರೆಂದು ವಿದ್ಯಾರ್ಥಿಗೆ ಗೊತ್ತಾದರೆ, ಆತ ಒಳ್ಳೆಯವನಂತೆ ನಟನೆ ಮಾಡಬಹುದು. ಮೌಲ್ಯ ಶಿಕ್ಷಣ ಯಾವುದೇ ಶಿಕ್ಷಣ ವ್ಯವಸ್ಥೆಯ ಸಮಗ್ರ ಭಾಗವಾಗಿದ್ದರೂ ಮೌಲ್ಯಮಾಪನ ವಿಧಾನಗಳು ಮಾತ್ರ ಪ್ರತ್ಯಕ್ಷಕ್ಕಿಂತ ಪರೋಕ್ಷವಾಗಿದ್ದಷ್ಟೂ ಒಳ್ಳೆಯದು.

ಮಕ್ಕಳ ಬಾಲ್ಯದ ತುಂಟಾಟಗಳನ್ನು ಗಮನಿಸಿ, ಕ್ರಮೇಣ ತಿದ್ದುತ್ತ ಹೋಗದಿದ್ದರೆ, ಅದೇ ಯೌವ್ವನದ ಕಾಲಕ್ಕೆ ಸ್ವೇಚ್ಛೆಯಾಗಿ ಪರಿಣಮಿಸಬಹುದು. ಮಕ್ಕಳ ಮನಸ್ಸನ್ನು ಎಳದೆಯಲ್ಲಿಯೇ ಸೂಕ್ತ ಮಾರ್ಗದರ್ಶನದ ಮೂಲಕ ನೇರಗೊಳಿಸುತ್ತಿರಬೇಕು. ಯಾಕೆಂದರೆ ಮನಸ್ಸಿನಂತೆ ಮನುಷ್ಯ, ಮನುಷ್ಯನಂತೆ ಪರಿಸರ, ಪರಿಸರದಂತೆ ಪ್ರಪಂಚ, ಭಾರತ ದೇಶಕ್ಕೆ ಪ್ರಾಮಾಣಿಕ ಪ್ರಜೆಗಳ ಅಭಾವವಿದೆ. ಉಳಿದೆಲ್ಲ ಅಭಾವಗಳಿಗೆ ಅದೇ ಮೂಲಕಾರಣವಾಗಿದೆ.

ಮಕ್ಕಳು ಕಲಿಯುವ ಶಿಕ್ಷಣಕ್ಕೂ ಬದುಕುವ ಜೀವನಕ್ಕೂ ಸಂಬಂಧವಿರಬೇಕು. ಒಳ್ಳೆಯದನ್ನು ಮೆಚ್ಚುವ, ಕೆಟ್ಟದ್ದನ್ನು ತಿರಸ್ಕರಿಸುವ ಪ್ರತಿಭಟಿಸುವ ಮನೋಬಲ ಮಕ್ಕಳಲ್ಲಿ ಬೆಳೆಯಬೇಕು. ಮಕ್ಕಳಿಗೆ ಮನೆಯಲ್ಲಿ ಪಾಲಕರೂ ಶಾಲೆಯಲ್ಲಿ ಶಿಕ್ಷಕರು ಆದರ್ಶವಾಗಿರಬೇಕು. ಯಾಕೆಂದರೆ ಶಿಕ್ಷಣ ಪಡೆದವರು ಇತರರನ್ನು ಒಡೆಯುವ ಕತ್ತೆಯಂತಾದರೆ ಕಲಿಸಿದವರಿಗೂ ಕಿಮ್ಮತ್ತು ಕಡಿಮೆ.

ಜೀವನದ ಎಲ್ಲಾ ಕ್ಲಿಷ್ಟಕರವಾದ ಹಂತಗಳನ್ನು, ಸಮಸ್ಯೆಗಳನ್ನು ಬುದ್ಧಿವಂತಿಕೆಯಿಂದ ಪರಿಹರಿಸುವದಕ್ಕೆ ಒಂದು ಸುಮಾರ್ಗವೆಂದರೆ ಅದುವೇ ಮೌಲ್ಯಯುತ ಶಿಕ್ಷಣ.

ಶಿಕ್ಷಣ ಪದ ಚಿಕ್ಕದು ಆದರೆ ಅದರ ಪರಿ ಅಥವಾ ಹಾದಿ ಬಹು ದೊಡ್ಡದು. ಬದುಕಿನ ಅಥವಾ ಜೀವನದ ಸೃಷ್ಟಿಯೇ ಶಿಕ್ಷಣ.

ಬುದ್ಧಿಬಲಕ್ಕಿಂತ ನೀತಿಬಲ ಶ್ರೇಷ್ಠ, ಮಾನವನೊಂದು ಯಂತ್ರವಾದರೆ ಆತ್ಮವೇ ಅದರ ಚಾಲಕ ಶಕ್ತಿ, ಸಭ್ಯತೆಯ ಮಾರ್ಗದಿಂದ ಜಗತ್ತನ್ನು ನೀನು ಪರಿವರ್ತಿಸಬಹುದು. ನಿಂದನೆ ನಿರ್ನಾಮಕಾರಿಯೇ ಹೊರತು ನಿರ್ಮಾಣಕಾರಿಯಲ್ಲ

## ಮನಗೆದ್ದ ಚೆಲುವೆ

ಹೊಳೆಯುತ್ತಿರುವ ನಿನ್ನ ವದನದಲ್ಲಿ ನಸುನಗೆಯ
ಮುಗುಳ್ನಕ್ಕು ಮಯೂರಿಯ ಹಾಗೆ ನಲಿಯುತ
ಮರೆಯಾದವಳು ನೀನಲ್ಲವೇ.....

ಅಚಿದ ಚೆಂದದ ರಾಗವ ಹಾಡಿ
ನವಿಲಿನ ನರ್ತನಗೈದು
ಎನ್ನ ಹೃದಯ ಹೊಕ್ಕಿರುವವಳು ನೀನಲ್ಲವೇ
ಮನದಾಸೆ ಕಣ್ಣಾಸೆ ಪೂರೈಸಿ
ಕರಗಳೊಂದಿಗೋಲೈಸಿ ನನ್ನೊಳಗಿರುವವಳು
ನೀನಲ್ಲವೇ?

ಅಂದು ಹುಣ್ಣಿಮೆ ಚಂದ್ರನ ಬೆಳಗಿನಲ್ಲಿ
ಕಡಲ ತೀರದಲ್ಲಿ ಸಂಚರಿಸುತ್ತಾ ಎನ್ನ ಮನವು
ನಿನ್ನ ಕಡೆ ಇಣುಕಿ ನೋಡುವ ಹಾಗೆ ಮಾಡಿದ
ಚೆಲುವೆ ನೀನಲ್ಲವೇ

ಹುಣ್ಣಿಮೆ ಚಂದ್ರನ ಬೆಳಕಿನ ಕಿರಣಗಳು
ನಿನ್ನ ಮೇಲೆ ಸೋಂಕಿರಲು ತುಟಿಗಳಲ್ಲಿ
ಸಿಹಿಯಾದ ಮಧು ರಸವ ತುಂಬಿಕೊಂಡು
ಎನ್ನ ನೋಡಿ ನಾಚಿಕೆಯಿಂದ ಮರೆಯಾದ
ಚೆಲುವೆ ನೀನಲ್ಲವೇ.....

## ಸೈನಿಕರಿಗೊಂದು ಸಲಾಂ

ಯಮುನಾ ಎ.ಆರ್
ತೃತೀಯ ಬಿ.ಬಿ.ಎಂ

ಯಾವುದೇ ದೇಶದಲ್ಲಿ ಜನರು ನೆಮ್ಮದಿಯಾಗಿ ಜೀವನ ನಡೆಸುತ್ತಿದ್ದಾರೆ ಎಂದರೆ ಅದಕ್ಕೆ ಕಾರಣಕರ್ತರು ದೇಶದ ಗಡಿಯನ್ನು ಕಾಯುವ ಸೈನಿಕರು. ದೇಶವನ್ನು ಸದಾ ಕಣ್ಣಲ್ಲಿ ಕಣ್ಣಿಟ್ಟು ಇವರು ಕಾಯುತ್ತಾರೆ ಅವರಿಂದ ನಮಗೆ ಸುಖ ನಿದ್ದೆ.

ಸೇನೆ ಎನ್ನುವುದು ಸಿನಿಮಾದಲ್ಲಿ ನೋಡುವಷ್ಟು ಸುಲಭವಲ್ಲ. ಎಲ್ಲರೂ ಬದುಕಿ ಹಿಂತಿರುಗಿ ಬರುವುದಿಲ್ಲ. ಹಿಮಗಡ್ಡೆಯ ನಡುವೆ ಉಸಿರಾಡಲು ಗಾಳಿ ಇಲ್ಲದ ಶಿಖರಗಳಲ್ಲಿ, ಮನೆ ಮಠಗಳಿಂದ ದೂರವಿದ್ದು, ಒಬ್ಬಂಟಿ ಯಾಗಿ ಶತ್ರುಗಳ ಗುಂಡಿಗೆ ಎದೆ ಕೊಡಬೇಕಾಗುತ್ತದೆ.

ಹಲವಾರು ಬಾರಿ ಯುದ್ಧಗಳಲ್ಲಿ ಭಾಗವಹಿಸಿ ನಮ್ಮ ದೇಶವನ್ನು ರಕ್ಷಿಸಿದ ಈ ಸೇನಾಪಡೆ ಹಲವಾರು ಪ್ರಕೃತಿ ವಿಕೋಪಗಳಲ್ಲಿ ನೆರವಾಗುತ್ತಿದೆ ಈ ಸೇನೆ. ಸೇನೆಗೆ ಗೌರವ ಸಲ್ಲಿಸುವುದು ನಮ್ಮೆಲ್ಲರ ಪವಿತ್ರ ಕರ್ತವ್ಯವಾಗಿದೆ. ಹಾಗಾಗಿ ನಮ್ಮ ದೇಶದಲ್ಲಿ ಈ ಸೈನಿಕರಿಗಾಗಿಯೇ ಒಂದು ದಿನವನ್ನು ಮೀಸಲಿರಿಸಲಾಗಿದೆ. ಅದುವೇ ಜನವರಿ 15. ಪ್ರತಿ ವರ್ಷ ಈ ದಿನವನ್ನು 'ಸೇನಾದಿನ' ಅಥವಾ 'ಆರ್ಮಿಡೇ' ಎಂದು ಆಚರಿಸಲಾಗುತ್ತಿದೆ. ಈ ಮೂಲಕ ದೇಶವನ್ನು ಕಾಪಾಡುವ ಸೈನಿಕರಿಗೆ ಸಲಾಂ ಹೇಳಲಾಗುತ್ತಿದೆ.

ಜನವರಿ 15 ರಂದೆ ಆಚರಿಸಲು ಒಂದು ಕಾರಣವಿದೆ. ಕೊಡಗಿನ ಕಲಿ ಜನರಲ್ ಕೆ. ಎಂ. ಕಾರಿಯಪ್ಪ ಅವರು ಇದೇ ದಿನದಂದು ಭಾರತೀಯನಾಗಿ ಸ್ವೀಕರಿಸಿದ ನೆನಪಿಗಾಗಿ ಪ್ರತಿವರ್ಷ ಈ ದಿನದಂದು ಸೇನಾದಿನ ಅಥವಾ ಆರ್ಮಿಡೇ ಆಚರಿಸಲಾಗುತ್ತಿದೆ ಮತ್ತು ಹುತಾತ್ಮರಾದ ಸೈನಿಕರಿಗೆ ಗೌರವ ಸಲ್ಲಿಸಲಾಗುತ್ತಿದೆ.

ಆದರೆ ಇಂದು ಯುದ್ಧ ಅನ್ನೋದು ವ್ಯಾಪಾರವಾಗಿ ಮಾರ್ಪಟ್ಟಿರುವುದು ತುಂಬಾ ಬೇಸರದ ಸಂಗತಿ ಇಂದು ಯುದ್ಧಗಳು ನಿಜಕ್ಕೂ ದೇಶಕ್ಕಾಗಿ ನಡೆಯುತ್ತವ ಅಥವಾ ಮಾರಾಟದ ಮೂಲಕ ಮಾಡಿಕೊಳ್ಳುವ ದಲ್ಲಾಳಿಗಳ ಲಾಭಕ್ಕೊ ಎಂದು ಯೋಚಿಸುವಂತಾಗಿದೆ ಯುದ್ಧ ಅನ್ನೋದು ದೇಶಭಕ್ತಿ, ಪ್ರಜಾಪ್ರಭುತ್ವದ ರಕ್ಷಣೆ ದೇಶದ ಸ್ವತಂತ್ರಕ್ಕೇ ಸಂಬಂಧಿಸಿದ್ದು ಅಂಥ ನಾವೆಲ್ಲ ತಿಳಿದಿದ್ದೀವಿ ಆದರೆ ಅದರ ಅರ್ಥವೇ ಬೇರೆಯಾಗಿದೆ. ಸೈನಿಕನೊಬ್ಬ ಹಾಕುವ ಹೆಲ್ಮಟ್ಟು, ಜಾಕೆಟ್, ಹಿಡಿಯುವ ಬಂದೂಕು ಮತ್ತು ಅವುಗಳ ಮೌಲ್ಯ. ಒಬ್ಬ ಅಮೇರಿಕನ್ ಸೈನಿಕನನ್ನು ತಯಾರು ಮಾಡೋದಕ್ಕೆ ಮಾಡುವ ಖರ್ಚು 17,500 ಡಾಲರ್ ಎಂದು ಲೆಕ್ಕ ಹಾಕುವ ಮೂಲಕ ಯುದ್ಧ ಎನ್ನುವುದು ಒಂದು ಎಕಾನಮಿ ಎನ್ನಬಹುದಷ್ಟೆ.

ಅದೇನೇ ಇರಲಿ ಇಂದು ಪುರುಷರಷ್ಟೇ ಅಲ್ಲ ಮಹಿಳೆಯರೂ ಕೂಡ ಸೇನೆ ಸೇರಿ ದೇಶ ಕಾಯುತ್ತಿರುವುದು ಹೆಮ್ಮೆಯ ವಿಚಾರ.

---

## ಸ್ನೇಹಾ......

ತೇಜಸ್ವಿನಿ ಎಂ.
ಪ್ರಥಮ ಬಿ.ಎ., ಹೆಚ್‌ಇಪಿ

ಸ್ನೇಹವೆಂಬುದು ಮಧುರ, ಆತ್ಮೀಯತೆಯ ಆಗರ
ಎಲ್ಲಿ ಸ್ನೇಹವೋ ಅಲ್ಲಿ ಮಾತು ಮೃದುವು
ನಡೆ ಹಿತವು, ಬಗೆ ಹದವು, ಬಯಕೆ ಮುದವು
ಸ್ನೇಹಕ್ಕೆ ಬೇಕಿಲ್ಲ ಮುನ್ನುಡಿ ಹಿನ್ನುಡಿ, ಬೆನ್ನುಡಿ
ಅಪೂರ್ವ ಮೈತ್ರಿಯಲ್ಲಿದೆ, ಹೃದಯದ ಕನ್ನಡಿ...
ಸ್ನೇಹ ಎತ್ತೆತ್ತ ಸಾಗಿದರೂ ಅತ್ತತ್ತ
ಚಿತ್ರ ಸೆಳೆಯುತ್ತಾ.......ಬೆಳೆಯುತ್ತಾ...... ಉಳಿಯುತ್ತಾ
ಹಾಡುವುದು ನಲಿಯುತ್ತಾ ಹಾತೊರೆವುದು ಸ್ನೇಹಿಯಂತ್ರ
ಅದಕ್ಕೆ ಇರಬೇಕು ಸ್ನೇಹ ಚೈತನ್ಯಾಮೃತಾ
ಜೀವನದಲ್ಲಿ ಸ್ನೇಹ ಜೀವಂತ. ಅನುಕ್ಷಣ ಸ್ಪಂದಿತ
ಅನುದಿನ ಸುವರ್ಧಿತ

# ಮನಸ್ಸಿನಂತೆ ಮಹದೇವ



ಸುಚಿತ್ರಾ ಎ.
ತೃತೀಯ ಬಿ.ಕಾಂ.

ಈ ಮೇಲಿನ ವಾಕ್ಯ ಬಹಳ ಅರ್ಥಗರ್ಭಿತ ವಾದದ್ದು. ಮನಸ್ಸೆಂಬುದು ಒಂದು ಕನ್ನಡಿ ಇದ್ದ ಹಾಗೆ ಎಂದೇ ಹೇಳಬಹುದು. ಮಹಾಭಾರತದಲ್ಲಿ ಒಮ್ಮೆ ದ್ರೋಣಾಚಾರ್ಯರು ದುರ್ಯೋಧನನಿಗೆ ಹೀಗೆ ಹೇಳುತ್ತಾರೆ. " ಈ ರಾಜ್ಯದಲ್ಲಿ ಎಷ್ಟು ಮಂದಿ ಒಳ್ಳೆಯವರಿದ್ದಾರೆ ಹೋಗಿ ತಿಳಿದು ಬಾ" ಎಂದು ಆ ಮಾತಿನಂತೆ, ದುರ್ಯೋಧನ ತಿಳಿದು ಬಂದು ಈ ರಾಜ್ಯದಲ್ಲಿ ಒಬ್ಬನೇ ಒಬ್ಬ ಒಳ್ಳೆಯ ವ್ಯಕ್ತಿಯಿಲ್ಲ" ಎಂದು ಹೇಳುತ್ತಾನೆ. ನಂತರ ದ್ರೋಣಾಚಾರ್ಯರು ಅದೇ ಪ್ರಶ್ನೆಯನ್ನು ಧರ್ಮರಾಯನಿಗೆ ಕೇಳಿದಾಗ ಧರ್ಮರಾಯ "ಗುರುಗಳೇ ಈ ರಾಜ್ಯದಲ್ಲಿ ಒಬ್ಬನೇ ಒಬ್ಬ ಕೆಟ್ಟ ವ್ಯಕ್ತಿಯೂ ಇಲ್ಲ" ಎಂದು ಹೇಳುತ್ತಾನೆ. ಇಲ್ಲಿ ನಾವು ಗಮನಿಸಲೇ ಬೇಕಾದ ಪ್ರಮುಖ ಅಂಶವೆಂದರೆ ವಿಭಿನ್ನ ಉತ್ತರ ಇಲ್ಲಿ ಒಂದೇ ಪ್ರಶ್ನೆಗೆ ಇಬ್ಬರು ವ್ಯಕ್ತಿಗಳ ವಿಭಿನ್ನ ಉತ್ತರ. ಇದಕ್ಕೆ ಕಾರಣ ಅವರ ಮನಸ್ಸೇ ಹೊರತು ಮತ್ತಾವುದೂ ಅಲ್ಲ. ನಮ್ಮ ಮನಸ್ಸು ಹೇಗಿರುತ್ತದೆಯೋ ಅದೇ ರೀತಿ ನಾವು ಮತ್ತೊಬ್ಬರನ್ನು ವಿಶ್ಲೇಷಿಸುತ್ತೇವೆಂದು ನಂಬಲೇಬೇಕು.

ಒಮ್ಮೆ ಒಂದು ಊರಿನಲ್ಲಿ ಇಬ್ಬರು ಮಾಡಿದ ಸಣ್ಣ ತಪ್ಪಿಗಾಗಿ, ಆ ಇಬ್ಬರು ವ್ಯಕ್ತಿಗಳನ್ನು ಊರಿನಿಂದ ಗಡಿಪಾರು ಮಾಡಲಾಗುತ್ತದೆ. ಆ ಇಬ್ಬರು ಮುಂದಿನ ಊರಿನಲ್ಲಿ ನೆಲೆಸಲು ಸಿದ್ಧರಾಗಿ ಹೋದಾಗ ಅವರಲ್ಲಿ ಒಬ್ಬನನ್ನು ಊರಿನವರು 'ನೀನು ಈ ಊರಿಗೆ ಬರಲು ಕಾರಣವೇನು ತಿಳಿಸು" ಎಂದು ಪ್ರಶ್ನಿಸುತ್ತಾರೆ. ಆಗ ಆ ವ್ಯಕ್ತಿ "ನಾನು ಇದ್ದ ಹಳ್ಳಿಯವರೆಲ್ಲರೂ ಕೆಟ್ಟ ಮನುಷ್ಯರೇ. ಒಬ್ಬನೇ ಒಬ್ಬ ಒಳ್ಳೆಯ ಮನುಷ್ಯನಿರಲಿಲ್ಲ. ಎಲ್ಲರೂ ಮೋಸಗಾರರು, ಸುಳ್ಳುಗಾರರು, ವಂಚಕರು ಎಂದು ಉತ್ತರಿಸುತ್ತಾನೆ. ಈ ಉತ್ತರ ಕೇಳಿದ ಊರಿನವರು ಆ ವ್ಯಕ್ತಿಯನ್ನು ತಮ್ಮ ಊರಿನಲ್ಲಿ ಉಳಿಸಿಕೊಳ್ಳಲು ಇಚ್ಛಿಸುವುದಿಲ್ಲ. ಏಕೆಂದರೆ ಆ ವ್ಯಕ್ತಿ ಇಡೀ ಊರನ್ನೇ ಹಾಳು ಮಾಡುತ್ತಾನೆ ಎಂಬ ಕಾರಣದಿಂದ ಅದೇ ಪ್ರಶ್ನೆಯನ್ನು ಮತ್ತೊಬ್ಬ ಗಡಿಪಾರಾದ ವ್ಯಕ್ತಿಗೆ ಕೇಳಿದಾಗ ಊರಿನ ಜನರು ಬಹಳ ಸಂತೋಷಪಡುತ್ತಾರೆ. ಏಕೆಂದರೆ ಅವನ ಉತ್ತರ ಬಹಳ ಸ್ಫೂರ್ತಿದಾಯಕವಾಗಿರುತ್ತದೆ. ಅದೇನೆಂದರೆ ಆ ಊರಿನಲ್ಲಿ ಎಲ್ಲರೂ ಸಜ್ಜನರು, ವಿನಯವಂತರು, ವಿಚಾರಶೀಲರು, ದಯಾಮಯಿಗಳು ನಾನು ತಿಳಿಯದೆ ಮಾಡಿದ ಸಣ್ಣ ತಪ್ಪಿಗೆ ಒಲ್ಲದ ಮನಸ್ಸಿನಿಂದಲೇ ಶಿಕ್ಷೆ ನೀಡಿದ್ದಾರೆ," ಎಂಬುದು ಆದ್ದರಿಂದ ಊರಿನವರು ಈ ವ್ಯಕ್ತಿಯನ್ನು ನಮ್ಮ ಊರಿನಲ್ಲಿ ನೆಲೆಸಲು ಅವಕಾಶಕೊಟ್ಟರೆ ನಮ್ಮ ಊರಿನ ಜನರೂ ಇವನಂತೆ ವಿನಯವಂತರೂ, ವಿವೇಕವಂತರೂ ಆಗುತ್ತಾರೆ ಎಂದು ಭಾವಿಸಿ ಆ ವ್ಯಕ್ತಿಗೆ ಆಶ್ರಯ ನೀಡುತ್ತಾರೆ. ಇದರಿಂದ ನಾವು ಮನಸ್ಸಿನ ಪ್ರಾಮುಖ್ಯತೆ ತಿಳಿಯಬಹುದು.

ನಮ್ಮ ಮನಸ್ಸು ಹೇಗಿರುತ್ತದೆಯೋ ಹಾಗೆ ನಾವು ಇತರರನ್ನು ಗುರುತಿಸುತ್ತೇವೆ. ನಾವು ಅಹಂಕಾರಿಯಾಗಿದ್ದರೆ ಎದುರಿರುವ ವ್ಯಕ್ತಿಯೂ ನಮಗೆ ಹಾಗೆ ಕಾಣುತ್ತಾನೆ. ಮೋಸಗಾರನಿಗೆ ಮೋಸವೇ, ಕಳ್ಳನಿಗೆ ಕಳ್ಳಬುದ್ಧಿಯೇ, ಜ್ಞಾನಿಗೆ ಜ್ಞಾನವೇ, ಕರುಣಾಳುವಿಗೆ ಕರುಣೆಯೇ ತಮ್ಮ ಎದುರಿನಲ್ಲಿರುವ ವ್ಯಕ್ತಿಯಲ್ಲಿ ಕಾಣುತ್ತದೆ. ನಮ್ಮಲ್ಲಿ ಯಾವ ಗುಣವಿರುವುದೋ ಅದೇ ಗುಣವನ್ನು ನಾವು ಇತರರಲ್ಲಿ ಗುರುತಿಸುತ್ತೇವೆ" ಎಂಬುದು ರವಿಶಂಕರ್ ಗುರೂಜಿಯವರ ಅಭಿಪ್ರಾಯವೂ ಕೂಡ.

## ಮನುಕುಲ ಮಾಡುತ್ತಿರುವುದು ಇದನ್ನೇ



ನವ್ಯ .ಬಿ
ತೃತೀಯ ಬಿ.ಬಿ.ಎಂ.

ಇದು ನಮ್ಮ ಒಂದು ಪ್ರಾಚೀನ ಗ್ರಂಥದಲ್ಲಿ ಕಂಡು ಬರುವ ಸ್ವಾರಸ್ಯಕರ ಕಥೆ. ಒಂದೂರಿನಲ್ಲಿ ಒಬ್ಬ ರಾಜನಿದ್ದ. ಆತನ ಬಗ್ಗೆ ಜನರಿಗೆ ತುಂಬಾ ಗೌರವವಿತ್ತು. ಅವನಿಗೊಬ್ಬ ಗುರುವಿದ್ದ. ಗುರುವು ಪ್ರತಿದಿನವೂ ರಾಜನಲ್ಲಿಗೆ ಬಂದು ಆಶೀರ್ವದಿಸಿ ಒಂದು ಕಾಡು ಹಣ್ಣನ್ನು ನೀಡುತ್ತಿದ್ದ. ನೋಡುವುದಕ್ಕೆ ಆ ಕಾಡು ಹಣ್ಣು ಹೊರಟಾಗಿದೆ. ಕಿತ್ತಳೆ ಅಥವಾ ಸೇಬು ಹಣ್ಣಿನಂತಿಲ್ಲ. ಅದು ಗುರು ನೀಡಿದ ಆ ಹಣ್ಣನ್ನು ರಾಜನು ಸ್ವೀಕರಿಸಿ ನೆಲಮಾಳಿಗೆಗೆ ಎಸೆಯುತ್ತಿದ್ದ. ಪ್ರತಿದಿನವೂ ಹೀಗೆ ಮಾಡುತ್ತಿದ್ದ. ಮುಂದೊಂದು ದಿನ ರಾಜನಿಗೆ ಆ ನೆಲಮಾಳಿಗೆ ಯಲ್ಲಿ ಬಿದ್ದಿದ್ದ ಹಣ್ಣುಗಳನ್ನು ಹೊರಗೆ ಎಸೆಯ ಬೇಕೆನಿಸಿತು. ಅದೇ ದಿನ ಎಂದಿನಂತೆ ಆ ಗುರುವು ಕಾಡು ಹಣ್ಣನ್ನು ನೀಡಿ ಹೊರಡುತ್ತಿದ್ದ. ರಾಜ ಅದನ್ನು ಅಲ್ಲೇ ಓಡಾಡುತ್ತಿದ್ದ ಕೋತಿ ಕಡೆಗೆ ಎಸೆದ. ಅದನ್ನು ಪಡೆದ ಕೋತಿ ಒಡೆದು ನೋಡಿತು. ಹಣ್ಣಿನ ಬೀಜ ವಿರಬೇಕಾದ ಜಾಗದಲ್ಲಿ ಒಂದು ದೊಡ್ಡ ವಜ್ರವಿತ್ತು. ಇದನ್ನು ನೋಡಿದ ರಾಜನ ಮನಸ್ಸಿನಲ್ಲಿ ಜ್ಞಾನೋ ದಯವಾಯಿತು. "ಇಷ್ಟು ದಿನ ಗುರು ನೀಡಿದ ಕಾಡು ಹಣ್ಣನ್ನು ನೆಲಮಾಳಿಗೆಗೆ ಉಪಯೋಗಕ್ಕೆ ಬಾರದ ಹಣ್ಣೆಂದು ತೂದು ಎಸೆಯುತ್ತ ದೊಡ್ಡ ಪ್ರಮಾದ ಮಾಡಿದ್ದೇನೆ. ಆದರೆ ಈಗ ನೋಡಿದರೆ ಅದರೊಳಗೆ ಬೆಲೆಬಾಳುವ ದೊಡ್ಡ ವಜ್ರ ಇದೆ. ನಾನು ಹೊರ ಕವಚವನ್ನಷ್ಟೇ ನೋಡಿತ್ತಿದ್ದೆ. ಒಳಗಿನ ತಿರುಳನ್ನು ನೋಡುವ ಪ್ರಯತ್ನವನ್ನೇ ಮಾಡಲಿಲ್ಲ" ಎಂದು ಪರಿತಪಿಸಿದ. ಗುರುವಿನ ಬಳಿಗೆ ಧಾವಿಸಿ. ಆತನ ಪಾದಗಳಿಗೆ ಕ್ಷಮೆ ಯಾಚಿಸಿದಾಗ ಗುರು ರಾಜನನ್ನು ಆಶೀರ್ವದಿಸಿ ಹೇಳಿದ್ದು "ಶಿಷ್ಯ ಮಾನವ ಕುಲ ಮಾಡುತ್ತಿರುವುದು ಇದನ್ನೇ.

---

## ಧ್ಯಾನ ಮಾಡು

ಶಿಲ್ಪಶ್ರೀ ಎಂ.
ಅಂತಿಮ ಬಿ.ಎ., ಹೆಚ್‌ಇಪಿ



ಧ್ಯಾನ ಎಂಬುದು ಬೆಳಕು, ಶಾಂತಿಯ ಮೂಲಕ ದೈಹಿಕ, ಮಾನಸಿಕ ಗಾಯ ಗಳನ್ನು ಗುಣಪಡಿಸುತ್ತದೆ. ನಿಮ್ಮ ನಿತ್ಯದ ಕೆಲಸಗಳನ್ನೆಲ್ಲ ಮುಗಿಸಿ ಯಾವುದೇ ಅಡ್ಡಿ, ಅಡಚಣೆಯಾಗದಂತಹ ಸಮಯ ಆರಿಸಿಕೊಳ್ಳಿ, ಪ್ರಶಾಂತ ಸ್ಥಳದಲ್ಲಿ ನಿರಾಳವಾಗಿ ಕುಳಿತು ಕಣ್ಣು ಮುಚ್ಚಿ ನಿಮ್ಮ ಉಸಿರಾಟದ ಮೇಲೆ ಗಮನ ಕೇಂದ್ರೀಕರಿಸಿ. ಪ್ರತಿ ಬಾರಿ ಉಸಿರು ಹೊರಹಾಕುವಾಗಲೂ ಒತ್ತಡ, ಋಣಾತ್ಮಕ ಭಾವನೆಗಳನ್ನು ಹೊರಹಾಕಿ. ಪ್ರೀತಿ, ಸೌಂದರ್ಯ ತುಂಬಿದ ಶಕ್ತಿಯನ್ನು ನಿಮ್ಮೊಳಗೆ ಎಳೆದುಕೊಳ್ಳಿ.

ಪ್ರತಿ ಉಸಿರಿನೊಂದಿಗೆ ಪ್ರೀತಿಯನ್ನು ಒಳಗೆ ಎಳೆದುಕೊಳ್ಳಿ. ಹೊರಹಾಕುವಾಗ ಕೃತಜ್ಞತೆಯನ್ನು ಹೊರಹಾಕಿ ನಿಮ್ಮ ದೇಹದ ಪ್ರತಿ ಅವಯವದ ಮೇಲೆ ಗಮನ ಕೇಂದ್ರೀಕರಿಸಿ. ಮುಖದ ಸ್ನಾಯುಗಳು ವಿಶ್ರಾಂತ ಸ್ಥಿತಿ ತಲುಪಲಿ. ನಂತರ ದೇಹದ ಎಲ್ಲ ಭಾಗಗಳೂ ನಿರಳವಾಗಲಿ ಪರಿಶುದ್ಧ ಆಮ್ಲಜನಕವನ್ನು ಒಳಗೆ ಎಳೆದು ಎಲ್ಲ ಒತ್ತಡ, ನೋವನ್ನು ನಿಶ್ವಾಸದ ಮೂಲಕ ಹೊರಹಾಕಿ. ಉಸಿರಾಟ ನಿಯಮಿತ ಲಯಬದ್ಧವಾಗಲಿ, ನಿರಾಳವಾಗಲಿ.

ಹೊಂಬಣ್ಣದ ಬೆಳಕು ನಿಮ್ಮ ತಲೆಯ ಮೂಲಕ ದೇಹ ಪ್ರವೇಶಿಸಿದೆ ಎಂದು ಕಲ್ಪಿಸಿಕೊಳ್ಳಿ, ಈ ಬೆಳಕು ಎಲ್ಲೆಡೆ ಹರಿಯುತ್ತದೆ. ದೇಹದ ಪ್ರತಿ ಕೋಶವನ್ನು ಗುಣಪಡಿಸುತ್ತ ಸಾಗಲಿ. ಈ ಚಿನ್ನದ ಬೆಳಕು ನೋವಿರುವ ಭಾಗವನ್ನು ಪ್ರವೇಶಿಸಿ ಆ ಬೆಳಕಿನಲ್ಲಿ ನೋವು ಮಾಯವಾಗಲಿ. ಈ ಬೆಳಕು ನಿಮ್ಮ ಪ್ರೀತಿಪಾತ್ರರನ್ನು ಜಗತ್ತಿನ ಎಲ್ಲರನ್ನೂ ಗುಣ ಪಡಿಸಲಿ. ನಿಮ್ಮ ಹೃದಯ ಹಾಗೂ ಕಣ್ಣನ್ನು ಆರೋಗ್ಯ ಹಾಗೂ ದೈವಿಕ ಶಕ್ತಿಯಿಂದ ಕೂಡಿದ ಹೊಸ ಜಗತ್ತಿಗೆ ತೆರೆಯಿರಿ.

# ಮರೆಯಾಗುತ್ತಿರುವ ಪಂಚವಾರ್ಷಿಕ ಯೋಜನೆ



ಅಂಬಿಕಾ ಎಸ್.
ತೃತೀಯ ಬಿ.ಕಾಂ.

**ಏನಿದು ಯೋಜನೆ :**

ಸ್ವಾತಂತ್ರ್ಯ ಸಿಕ್ಕ ಸಮಯದಲ್ಲಿ ಭಾರತದ ಆರ್ಥಿಕತೆ ಅಸ್ಥಿರತೆಯಿಂದ ಕೂಡಿದ್ದ ಕಾರಣ ಅದನ್ನು ಬಲಪಡಿಸುವ ಸದುದ್ದೇಶದಿಂದ ಪಂಚವಾರ್ಷಿಕ ಯೋಜನೆ ಪ್ರಾರಂಭಿಸಲು ನಿರ್ಧರಿಸಿ ಇದನ್ನು ರೂಪಿಸುವ, ಕಾರ್ಯರೂಪಕ್ಕೆ ತರುವ ಹಾಗೂ ಇದರ ನಿರ್ವಹಣೆ ಜವಾಬ್ದಾರಿಯನ್ನು ಯೋಜನಾ ಆಯೋಗಕ್ಕೆ ನೀಡಲಾಗಿತ್ತು. ಜವಾಹರಲಾಲಾ ನೆಹರು ಮೊದಲ ಯೋಜನಾ ಆಯೋಗದ ಅಧ್ಯಕ್ಷರಾಗಿದ್ದರು. 1951ರಲ್ಲಿ ಮೊದಲ ಪಂಚವಾರ್ಷಿಕ ಯೋಜನೆಯನ್ನು ಆರಂಭಿಸಲಾಗಿತ್ತು.

## ಪಂಚವಾರ್ಷಿಕ ಯೋಜನೆ ಸಾಗಿ ಬಂದ ದಾರಿ :

| ಯೋಜನೆ ವರ್ಷ | ಉದ್ದೇಶ |
|---|---|
| 1) 1951–56 | ಕೃಷಿ ನೀರಾವರಿ ಮತ್ತು ಜಲಾಶಯಗಳ ನಿರ್ಮಾಣ |
| 2) 1956–61 | ಬೃಹತ್ ಕೈಗಾರಿಕೆಗಳ ಅಭಿವೃದ್ಧಿ |
| 3) 1961–66 | ಗೋದಿ ಉತ್ಪಾದನೆ ಹೆಚ್ಚಳ ಮತ್ತು ರಕ್ಷಣಾ ಉದ್ದಿಮೆ |
| 4) 1969–74 | ಸುಧಾರಿತ ಕೃಷಿಯಲ್ಲಿ ಹಸಿರು ಕ್ರಾಂತಿ ಮತ್ತು 14 ಬ್ಯಾಂಕುಗಳ ರಾಷ್ಟ್ರೀಕರಣ |
| 5) 1974–79 | ಬಡತನ ನಿವಾರಣೆ ಮತ್ತು ಸ್ವಾವಲಂಬನೆ |
| 6) 1980–85 | ಆದಾಯ ತಂತ್ರಜ್ಞಾನ ಆಧುನೀಕರಣ ನಿರುದ್ಯೋಗ ಮತ್ತು ಜನಸಂಖ್ಯೆ ನಿಯಂತ್ರಣ |
| 7) 1985–90 | ಆಹಾರ ಧಾನ್ಯಗಳ ಉತ್ಪಾದನೆ, ಉದ್ಯೋಗವಕಾಶ |
| 8) 1992–97 | ಕೃಷಿ ಉತ್ಪಾದನೆ, ಆಮದು, ರಫ್ತು, ವ್ಯಾಪಾರಭಿವೃದ್ಧಿ |
| 9) 1997–02 | ಜೀವನ ಗುಣಮಟ್ಟ ಉದ್ಯೋಗವಕಾಶ, ಸ್ವಾವಲಂಬನೆ |
| 10) 2002–07 | ಶೇ 08 ರಷ್ಟು ಜಿ.ಡಿ.ಪಿ. ಅಭಿವೃದ್ಧಿ |
| 11) 2007–12 | ಶಿಕ್ಷಣದ ಮೂಲಕ ಸಬಲೀಕರಣ ಲಿಂಗ ಅಸಮಾನತೆ ನಿವಾರಣೆ |
| 12) 2012–17 | ಬಡತನ ಪ್ರಮಾಣ ಶೇ 10 ರಷ್ಟು ಇಳಿಕೆ. |

1965–66 ರಲ್ಲಿ ನಡೆದ ಭಾರತ–ಪಾಕಿಸ್ತಾನಗಳ ಯುದ್ಧ ಮತ್ತು 1965ರಲ್ಲಿ ಎದುರಾದ ಬರಗಾಲದ ಪರಿಸ್ಥಿತಿಯಿಂದ 1966–69ರ ಅವಧಿಯಲ್ಲಿ ಪಂಚವಾರ್ಷಿಕ ಯೋಜನೆಯನ್ನು ಜಾರಿಗೆ ತಂದಿರಲಿಲ್ಲ.

1990–91ರ ಅವಧಿಯಲ್ಲಿ ಕೇಂದ್ರದಲ್ಲಿ ಸರ್ಕಾರ ರಚನೆಯಲ್ಲಿದ್ದ ಗೊಂದಲ ಮತ್ತು 1990–91ರಲ್ಲಿ ನಿರ್ಮಾಣವಾಗಿದ್ದ ಹಣದುಬ್ಬರ ಪರಿಸ್ಥಿತಿಯಿಂದಾಗಿ 1990–92ರವರೆಗೆ ಯೋಜನೆಯನ್ನು ಜಾರಿಗೆ ತಂದಿರಲಿಲ್ಲ.

**ಯೋಜನೆ ಕೊನೆಗೊಳಿಸಿ:**

ಆರ್ಥಿಕ ವ್ಯವಹಾರಗಳ ಸಂಸದೀಯ ಸ್ಥಾಯಿ ಸಮಿತಿ ಕೆಲ ವರ್ಷಗಳ ಹಿಂದೆಯೇ ಪಂಚವಾರ್ಷಿಕ ಯೋಜನೆಗಳ ಅಂತ್ಯಗೊಳಿಸುವ ಬಗ್ಗೆ ಸಲಹೆ ನೀಡಿತ್ತು. ಇದರ ಬದಲಾಗಿ 20–30 ವರ್ಷಗಳ ದೀರ್ಘ ಅವಧಿಗೆ ಜಾರಿಗೆ ತರುವಂತಹ ಯೋಜನೆಗಳನ್ನು ಆರಂಭಿಸಲು ಸಲಹೆ ನೀಡಿತ್ತು.

**ನೀತಿ ಆಯೋಗದ ರಚನೆ :**

ಇದರ ಪರಿಣಾಮವಾಗಿ 1950 ರಲ್ಲಿ ಆಗಿನ ಪ್ರಧಾನಿ ಜವಹರಲಾಲ್ ನೆಹರು ನೇತೃತ್ವದಲ್ಲಿ ಆರಂಭವಾಗಿದ್ದ ಯೋಜನಾ ಆಯೋಗದ ಬದಲಾಗಿ ಇತ್ತೀಚಿನ ವರ್ಷಗಳಲ್ಲಿ ನೀತಿ ಆಯೋಗವನ್ನು ಆರಂಭಿಸಲಾಗಿದೆ. ಯೋಜನಾ ಆಯೋಗದ ಪರಿಕಲ್ಪನೆ ಹಳೆಯದಾದ್ದರಿಂದ ಅದನ್ನು ಬದಲಾಯಿಸಿ ಅಭಿವೃದ್ಧಿಗೆ ವೇಗ ನೀಡುವುದು, ರಾಜ್ಯಗಳಿಗೆ ಅಧಿಕಾರ ವಿಕೇಂದ್ರೀಕರಣ ಮಾಡುವುದು ಪ್ರತಿನಿಧಿಯಾದ ಪ್ರಧಾನಿ ಮೋದಿಯವರ ಆಶಯ. ಪ್ರಧಾನ ನೀತಿ ಆಯೋಗದ ಅಧ್ಯಕ್ಷರಾಗಿದ್ದಾರೆ. ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳ ಮತ್ತು ತಜ್ಞರು ಇತರ ಸದಸ್ಯರಾಗಿರುತ್ತಾರೆ.

**ರಾಷ್ಟ್ರೀಯ ಅಜೆಂಡಾ:**

ನೀತಿ ಆಯೋಗ 12ನೆಯ ಪಂಚವಾರ್ಷಿಕ ಯೋಜನೆ ಬಗ್ಗೆ ಸಮೀಕ್ಷೆ ನೆಡೆಸಿದ್ದು ಪಂಚವಾರ್ಷಿಕ ಯೋಜನೆಯ ಬದಲಾಗಿ ರಾಷ್ಟ್ರೀಯ ಅಜೆಂಡಾ ರೂಪಿಸುವ ಬಗೆಗೆ ಚಿಂತನೆ ನೆಡೆಸಿ ಈಗಾಗಲೇ ಈ ಸಂಬಂಧ ಎಲ್ಲಾ ಸಿದ್ಧತೆಗಳನ್ನು ಮಾಡಲಾಗಿದೆ ನೀತಿ ಆಯೋಗದ ಅಧ್ಯಯನದ ಪ್ರಕಾರ ಯೋಜನೆಗಳು ನಿಗದಿತ ಗುರಿ ತಲುಪುವಲಿ ಸೋಲನ್ನು ಕಂಡಿರುವ ಹಿನ್ನಲೆಯಲ್ಲಿ ಆಯೋಗದ ಸಲಹೆಯಂತೆ 1950 ರಿಂದ ದೇಶ ಅಭಿವೃದ್ಧಿಯ ಕನಸಿನೊಂದಿಗೆ ಕಾರ್ಯ ರೂಪಕ್ಕೆ ಬಂದಿದ್ದ ಪಂಚವಾರ್ಷಿಕ ಯೋಜನೆ ಎಂಬ ಒಂದು ಮಹತ್ತರ ಯೋಜನೆ. ಶಾಶ್ವತವಾಗಿ ನಮ್ಮಿಂದ ಮರೆಯಾಗುತ್ತಿದ್ದು ರಾಷ್ಟ್ರೀಯ ಅಜೆಂಡಾ ಎಂಬ ಮಗು ಒಂದನ್ನು ದೇಶಕ್ಕೆ ನೀಡಿ ದೇಶದ ಪ್ರಗತಿಗಾಗಿ ನಿರ್ಗಮಿಸುತ್ತಿರುವುದು ಅನಿವಾರ್ಯವಾಗಿದೆ.

---

## ಗುರುವಿಗೆ ನಮನ

ಇರುವಾಗ ತಿಳಿಯದು
ಇಲ್ಲವಾದಾಗ ಅರಿಯುವುದು
ಅದುವೇ ಗುರುವಿನ ಮಹತ್ವ

ವಿದ್ಯೆಯನು ತಾನು ಪಡೆದು
ಇತರರಿಗೆ ಅದನ್ನು ಧಾರೆಯೆರೆದು
ಅನ್ಯರ ಜೀವನಕ್ಕೆ ದಾರಿ ದೀಪವಾಗುವ
ಆ ಮಹಾತ್ಮನೇ ಗುರು

ಗುರುವಿಲ್ಲದ ಬಾಳು
ಎಲೆಗಳಿಲ್ಲದ ಮರದಂತೆ
ಉಪಯೋಗಕ್ಕೆ ಬಾರದ ಮರ
ಹುಟ್ಟಿಯೂ ಏನು ಪ್ರಯೋಜನ?

ಎಂದೆಂದಿಗೂ ಮರೆಯುವಂತಿಲ್ಲ
ಗುರುವಿನ ತ್ಯಾಗಗಳನ್ನೆಲ್ಲ
ನಂದನವಾದರೆ ನಮ್ಮ ಜೀವನ
ಅದಕ್ಕೆಲ್ಲಾ ನನ್ನ ಗುರುವೇ ಕಾರಣ.



ಎಂ. ಪ್ರೀತಿ
ದ್ವಿತೀಯ ಬಿ.ಕಾಂ.

# ಟೀಕೆಗೆ ಹೇಗೆ ಪ್ರತಿಕ್ರಿಯಿಸುವಿರಿ



ದೀಪು ಎಂ.
ತೃತೀಯ ಬಿ.ಕಾಂ.

ಟೀಕೆಗಳನ್ನು ಕೇಳುತ್ತಲೇ ಇರುತ್ತೇವೆ. ಇದನ್ನು ತಪ್ಪಿಸಲಾಗದು. ಟೀಕೆಗಳಿಗೆ ಸಾಮಾನ್ಯವಾಗಿ ಕಂಡು ಬರುವ ಪ್ರತಿಕ್ರಿಯೆ. ಅಳುತ್ತ ಕೂರುವುದು, ಇಲ್ಲವೇ ಟೀಕಾಕಾರರನ್ನು ಬೆದರಿಸಿ ಸುಮ್ಮನಾಗಿಸುವುದು.

ಬುದ್ಧನ ಕಥೆಯೊಂದಿದೆ. ಒಬ್ಬ ಬಂದು ಬುದ್ಧನನ್ನು ಒಂದಷ್ಟು ಹೊತ್ತು ಸುಮ್ಮನೆ ಬೈಯುತ್ತಿದ್ದನಂತೆ. ಅನಂತರ ಹೊರಟು ಹೋದನಂತೆ ಅಷ್ಟೂ ಹೊತ್ತು ಬುದ್ಧ ಏನೂ ಮಾತನಾಡದೆ ಸುಮ್ಮನೆ ನಸುನಗುತ್ತ ಕುಳಿತಿದ್ದನಂತೆ. 'ಯಾಕೆ ಅವನಿಗೆ ನೀನು ಏನೂ ಹೇಳಲಿಲ್ಲ' ಎಂದು ಶಿಷ್ಯನೊಬ್ಬ ಕೇಳಿದಾಗ 'ಅವನ ಮನಸ್ಸಿನಲ್ಲಿ ಒಂದಷ್ಟು ರೋಷ ಇತ್ತು. ಹೊರಗೆ ಹಾಕಿದ. ಹೊರಟು ಹೋದ. ಉತ್ತರ ಕೊಟ್ಟಿದ್ದರೆ ಮಾತಿಗೆ ಮಾತು ಬೆಳೆದು ಇಬ್ಬರಿಗೂ ಅಸಮಾಧಾನವಾಗುತ್ತಿತ್ತು' ಎಂದನಂತೆ ಬುದ್ಧದೇವ.

ಅವನಷ್ಟು ಸ್ಥಿತಪ್ರಜ್ಞರಾಗುವುದು ನಮಗೆ ಸಾಧ್ಯವೇ ? ನಮ್ಮ ವಯಸ್ಸಿನಲ್ಲಂತೂ ಅದು ತುಂಬಾ ಕಷ್ಟವೇ ಸರಿ.

ಟೀಕೆಗೆ ಉತ್ತರ ಕೊಡಲು ಹೋದರೆ, ಮಾತಿಗೆ ಮಾತು ಬೆಳೆಯುತ್ತದೆ. ಕೆಲವರಿಗೆ ಉತ್ತರ ಕೊಡದಿದ್ದರೆ, ಅವರ ಸಿಟ್ಟು ಮತ್ತೂ ಹೆಚ್ಚಿ ಅವರ ಮಾತುಗಳ ದಾಳಿ ಮತ್ತಷ್ಟು ಹೆಚ್ಚುವುದು. ಅದನ್ನು ಜಾಣತನದಿಂದ ನಿಭಾಯಿಸಬೇಕು.

ಮೊದಲನೆಯದಾಗಿ – ಯಾವುದೇ ಟೀಕೆ ನಿಮ್ಮ ವಿರುದ್ಧ ಕೇಳಿ ಬಂದರೆ ಅದನ್ನು ತಪ್ಪಿಸಲು ನೀವು ಏನಾದರೂ ಮಾಡಬಹುದಿತ್ತೇ ಎಂದು ಯೋಚಿಸಿ ನೋಡಿ ಹೀಗೆ ಮಾಡಬಹುದಿತ್ತು ಎನಿಸಿದರೆ ಟೀಕಿಸಿದವರಿಗೆ ತಿದ್ದಿಕೊಳ್ಳುವ ಭರವಸೆ ಕೊಡಿ ತಿದ್ದಿಕೊಳ್ಳಿ.

ಎರಡನೆಯದಾಗಿ – ನೀವು ಬೇರೆ ಏನೂ ಮಾಡಲು ಸಾದ್ಯವಿರಲಿಲ್ಲ. ನೀವು ಮಾಡಿದ್ದೇ ಸರಿ ಎನಿಸಬಹುದು. ಆಗ ನೀವು ಟೀಕಿಸಿದವರನ್ನೇ ಕೇಳಬಹುದು, 'ನಾನು ಮತ್ತೇನು ಮಾಡಬಹುದಿತ್ತು' ಎಂದು ಅದರಿಂದ ಚರ್ಚೆ ನಡೆದು ಅವರು ನಿಮಗೆ ಬೇರೆ ದಾರಿ ತೋರಿಸಬಹುದು ಅಥವಾ ನೀವು ಬೇರೆ ಏನೂ ಮಾಡಲು ಆಗುತ್ತಿರಲಿಲ್ಲ ಎಂದು ಒಪ್ಪಿಕೊಳ್ಳಬಹುದು. ಇದರಿಂದ ವೃಥಾ ಮನಸ್ತಾಪ ತಪ್ಪುತ್ತದೆ.

ಮೂರನೆಯದಾಗಿ – ಕೆಲವೊಮ್ಮೆ ಅವರಿಗೆ ಟೀಕೆ ಮಾಡಿದ್ದೇ ಸರಿ ಎನಿಸಬಹುದು, ನಿಮಗೆ ನೀವು ಮಾಡಿದ್ದೇ ಸರಿ ಎನಿಸಬಹುದು. ಚರ್ಚೆಯ ಮೂಲಕ ಇದು ಬಗೆಹರಿಯದಿದ್ದರೆ ಆಯಿತು. 'ನಿಮ್ಮ ಮಾತನ್ನು ಗಮನದಲ್ಲಿ ಇಟ್ಟುಕೊಂಡಿರುವೆ, ಈಗ ಈ ವಿಚಾರವನ್ನು ಅಷ್ಟಕ್ಕೆ ನಿಲ್ಲಿಸಿ ಬೇರೆ ವಿಷಯ ಮಾತನಾಡೋಣ' ಎಂದು ಕೇಳಿ ವಿಷಯಾಂತರ ಮಾಡುವುದು ಒಳ್ಳೆಯದೆ !

ಯಾರೇ ಆಗಲಿ, ಟೀಕಿಸಿದಾಗ, ಬೈದಾಗ ಸಿಟ್ಟು ಬಂದು ಸಿಟ್ಟಿನಲ್ಲಿ ಪ್ರತಿಕ್ರಿಯಿಸುವುದು ಮನುಷ್ಯ ಸಹಜ ಗುಣ. ಅಂತಹ ಸಂದರ್ಭದಲ್ಲಿ ಒಂದು ನಿಮಿಷ ಉಸಿರು ಬಿಗಿಹಿಡಿದು ನಂತರ ಪ್ರತಿಕ್ರಿಯೆ ಕೊಡಲು ಪ್ರಯತ್ನಿಸಿದರೆ ಭಾವುಕತೆ ನಿಮ್ಮ ನಿಯಂತ್ರಣ ದಲ್ಲಿರುತ್ತದೆ. ನಿಮ್ಮ ಪ್ರಗತಿಗೆ ಕುಂದು ಬರುವುದಿಲ್ಲ.

ಪ್ರಯತ್ನಿಸಿ ನೋಡಬಹುದಲ್ಲವೇ ?

# ಸಂಸ್ಕಾರ

ದೀಪು ಎಂ.
ತೃತೀಯ ಬಿ.ಕಾಂ.

ಅವ್ವ,ಅಪ್ಪ,ಅಕ್ಕ,ತಂಗಿ,ಭಾವ,ಭಾವಮೈದುನ, ಈ ಎಲ್ಲ ಪದಗಳು, ಅತ್ಯಂತ ಮಮತೆ, ವಾತ್ಸಲ್ಯಭರಿತ ಪದಗಳು ಆದರೆ ಇಂದು ಇಂಥ ಪದಗಳ ಬಳಕೆ ಮಾಡುವವರನ್ನು ಓಬಿರಾಯನ ಕಾಲದ ಜನಗಳು ಎಂಬಂತೆತಾತ್ಸಾರದಿಂದನೋಡಲಾಗುತ್ತದೆ.ಮಾಮ್, ಡ್ಯಾಡ್, ಅಂಕಲ್ ಎನ್ನುವುದು ಫ್ಯಾಷನ್ ಆಗಿದೆ. ಮಕ್ಕಳನ್ನು ಹಾಗೂ ಯುವ ಜನತೆಯನ್ನು ಈ ರೀತಿಯ ಪಾಶ್ಚಾತ್ಯ ಸಂಸ್ಕೃತಿಯ ಅಂಧಾನುಕರಣೆಯಿಂದ ಬಿಡಿಸಿ ಭಾರತೀಯ ಸಂಸ್ಕೃತಿಯನ್ನು ಕಲಿಸಿಕೊಡುವ ಅಗತ್ಯ ತುಂಬಾ ಇದೆ.

ಪ್ರತಿಯೊಂದು ವಸ್ತುವನ್ನು ಉಪಯೋಗಿಸುವ ಮೊದಲು ಸಂಸ್ಕರಿಸಿ ಉಪಯೋಗಿಸಲಾಗುತ್ತದೆ. ಸಂಸ್ಕಾರವಿಲ್ಲದ ವಸ್ತು ತ್ಯಾಜ್ಯ ಎನಿಸಿಕೊಳ್ಳುತ್ತದೆ. ಆದರೆ ಸಂಸ್ಕಾರ ಹೊಂದಿದ ನಂತರ ಅದೇ ವಸ್ತು ಅಮೂಲ್ಯ ಎನಿಸಿಕೊಳ್ಳುತ್ತದೆ ಪೂಜ್ಯತೆಯನ್ನು ಪಡೆದು ಕೊಳ್ಳುತ್ತದೆ.

ಆಕಳ ಸಗಣಿ ತ್ಯಾಜ್ಯ, ಆದರೆ ಅದನ್ನು ಒಣಗಿಸಿ ಸುಟ್ಟು ಬೂದಿ ಮಾಡಿ ವಿಭೂತಿ ತಯಾರಿಸಿದಾಗ ಅದು ಶರಣರು, ಗುರುಗಳೆಲ್ಲರೂ ಭಕ್ತಿಯಿಂದ ಹಣೆಗೆ ಧಾರಣೆ ಮಾಡಿಕೊಳ್ಳುವ ಪವಿತ್ರವಾದ ಭಸ್ಮ ಎನಿಸಿಕೊಳ್ಳುತ್ತದೆ. ಗೋಧಿಗೆ ಸಂಸ್ಕಾರ ಕೊಟ್ಟಾಗ ಚಪಾತಿ, ಹುಗ್ಗಿ, ಪಾಯಸ ಮುಂತಾದ ಪದಾರ್ಥಗಳು ತಯಾರಾಗುತ್ತವೆ. ಜೋಳಕ್ಕೆ ಸಂಸ್ಕಾರ ಕೊಟ್ಟಾಗ ರೊಟ್ಟಿ, ಅಕ್ಕಿಗೆ ಸಂಸ್ಕಾರ ಕೊಟ್ಟಾಗ ಅನ್ನ, ಹಾಲಿಗೆ ಸಂಸ್ಕಾರ ಕೊಟ್ಟಾಗ ಅದರಲ್ಲಿನ ಬೆಣ್ಣೆ, ಮೊಸರು, ತುಪ್ಪಗಳು ಹೊರಗೆ ಬರುತ್ತವೆ. ಕಟ್ಟಿಗೆಗೆ ಸಂಸ್ಕಾರ ಕೊಟ್ಟಾಗ ಮೇಜು, ಖುರ್ಚಿಗಳು ಉಪಯೋಗಕ್ಕೆ ಬರುತ್ತವೆ. ಕಲ್ಲಿಗೆ ಸಂಸ್ಕಾರ ಕೊಟ್ಟಾಗ ಶಿಲೆ ಹೊರಹೊಮ್ಮುವುದು, ದೇವರ ಮೂರ್ತಿಯೂ ಆಗುವುದು, ನೀರಿಗೆ ಸಂಸ್ಕಾರ ಕೊಟ್ಟಾಗ ತೀರ್ಥ ಹೊರ ಹೊಮ್ಮುವುದು.

ಹೀಗೆ ಹತ್ತು ಹಲವಾರು ವಸ್ತುಗಳು ಸಂಸ್ಕಾರದಿಂದ ಹೇಗೆ ಯೋಗ್ಯತೆಯನ್ನು ಪಡೆಯುತ್ತವೆಯೋ ಹಾಗೆಯೇ ಸಂಸ್ಕಾರ ಕೊಟ್ಟಾಗ ಮಾತ್ರ ಮನುಷ್ಯನು ಪರಿಪೂರ್ಣ ಎನಿಸುತ್ತಾನೆ. ಸಂಸ್ಕಾರದಿಂದ ನರನು ಹರನಾಗುವನು. ಕಸ ರಸವಾಗುವುದು, ಮಾನವನು ಮಹಾದೇವನಾಗುವನು "ಅರಿದೊಡೆ ಶರಣ, ಮರೆದೊಡೆ ಮಾನವ, ಅರಿವು ಮೂಡದವನು ವ್ಯರ್ಥ, ಅರಿವೇ ಗುರು" ಎಂದು ಬಸವಣ್ಣನವರು ಹೇಳಿದರು. ಸಂಸ್ಕಾರದಿಂದಲೇ ಅಲ್ಲವೇ ಸಿದ್ಧಾರ್ಥ ಗೌತಮ ಬುದ್ಧನಾದದ್ದು, ನರೇಂದ್ರನೆಂಬ ಬಾಲಕ ಸ್ವಾಮಿವಿವೇಕಾನಂದರಾಗಿದ್ದು, ಮಹಾದೇವಿ ಅಕ್ಕನಾಗಿದ್ದು. ಆದ್ದರಿಂದ ಎಲ್ಲರೂ ಸಂಸ್ಕಾರ ಹೊಂದಿ ಮುಕ್ತಿ ಪಡೆಯಬೇಕು.

## ಕೈ ತುತ್ತು

1. ಕಡಲ ತೀರದ ಮುತ್ತು
   ಭಾವದೊಳಗಿನ ಗಮ್ಮತ್ತು
   ಸಡಗರದ ಸಿರಿಯ ಅವಲತ್ತು
   ಮರಗಳ ಸಾಲಿನ ತಂಪತ್ತು
   ವೆಲ್ಲಕ್ಕೂ ಮೀರಿದ ಸಂಪತ್ತು
   ಮಾತೃ ವಾತ್ಸಲ್ಯದ ಮುತ್ತು
   ಮಾತ್ತೂ ಆಕೆಯ ಕೈ ತುತ್ತು.

2. ಅಂತರಂಗದಲ್ಲಿ ಮೋಸವಿಲ್ಲದವಳು
   ಬೈಗುಳದಲ್ಲೂ ಪ್ರೀತಿ ಕೊಡುವವಳು
   ನೋವಿನಲ್ಲೂ ನಗುವ
   ತುಂಬುವಳು
   ಕೊನೆತನಕ
   ಕಾಪಾಡುವವಳ
   ಪ್ರೀತಿ, ವಾತ್ಸಲ್ಯಕ್ಕೆ ಅರ್ಥ
   ಕೊಡುವವಳು



ಕೆ. ಸುಕನ್ಯ
ದ್ವಿತೀಯ ಬಿ.ಕಾಂ

# ಮದುವೆ



ಪೂಜಾ ಎಂ.
ತೃತೀಯ ಬಿ.ಕಾಂ.

ಮದುವೆ ಎನ್ನುವುದು ಮಾನವ ಸಮಾಜಕ್ಕೆ ಅತಿ ಮುಖ್ಯವಾಗಿ ಬೇಕಾದಂಥ ಕಾರ್ಯ. ಮಾನವ ಸಮಾಜದಲ್ಲಿ ಮದುವೆ ಎಂಬ ವ್ಯವಸ್ಥೆಯಿಲ್ಲದಿದ್ದರೆ ಪ್ರಾಣಿಗಳಿಗೂ ಮನುಷ್ಯರಿಗೂ ವ್ಯತ್ಯಾಸವೇ ಉಳಿಯುತ್ತಿರಲಿಲ್ಲ. ಅದಕ್ಕಾಗಿಯೇ ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲಿಯೂ ಮದುವೆಯ ವ್ಯವಸ್ಥೆ ಇದೆ. ಧರ್ಮವನ್ನು ಒಪ್ಪಲಿ ಬಿಡಲಿ ದೇವರನ್ನು ನಂಬಲಿ ಬಿಡಲಿ, ಮದುವೆ ಎಂಬ ವ್ಯವಸ್ಥೆಯಲ್ಲಿ ಎಲ್ಲರಿಗೂ ವಿಶ್ವಾಸವಿದೆ. ಇದನ್ನು ಎಲ್ಲರೂ ಒಪ್ಪುತ್ತಾರೆ ಭಾರತದಲ್ಲಿ ಇದಕ್ಕೆ ಧಾರ್ಮಿಕ ಸ್ಥಾನಮಾನ ಇರುವುದು ವಿಶೇಷ.

ಮದುವೆ ಕೂಡ ಮಾನವನಿಗೆ ಕೊಡಲ್ಪಡುವ ಒಂದು ಸಂಸ್ಕಾರ. ಎಂದು ಬಸವಾದಿ ಶರಣರು ಪರಿಗಣಿಸಿದ್ದಾರೆ. ಆದ್ದರಿಂದ ಗೃಹಸ್ಥರು ಕನಿಷ್ಠ, ವಿರಕ್ತರು ಶ್ರೇಷ್ಠ ಎಂಬ ಭೇಧಭಾವ ಸಲ್ಲದು ಸನ್ಯಾಸಿ, ವಿರಕ್ತರು ಮೊದಲಾದವರಿಗೆ ಅದರ ತ್ಯಾಗಕ್ಕೆ ಅನುಗುಣವಾಗಿ ನೀಡಬೇಕಾದ ಗೌರವ, ಸ್ಥಾನಮಾನವನ್ನು ಕೊಡಲೇಬೇಕು ಅದನ್ನು ಗೃಹಸ್ಥರು ಯಾವತ್ತೂ ಮರೆಯಬಾರದು. ಅದೇ ರೀತಿ ವಿರಕ್ತರೂ ಕೂಡ ಗೃಹಾಸ್ಥಶ್ರಮ ಕನಿಷ್ಠ ಎಂಬ ನಿರ್ಧಾರಕ್ಕೆ ಬರಬಾರದು. ಶೂನ್ಯಪೀಠಾಧೀಶ ಅಲ್ಲಮಪ್ರಭುದೇವರುರವರ ಅಭಿಪ್ರಾಯದಂತೆ ಸತಿ-ಪತಿಯ ಮನಸ್ಸು, ವಿಚಾರ, ಭಾವನೆ, ಒಂದೇ ಆಗಿದ್ದಾಗ ಅಲ್ಲಿಯೇ ದೇವರಿರುತ್ತಾನೆ ಎಂಬ ಮಾತನ್ನು ತಿಳಿಸಿದ್ದಾರೆ.

ಅಮೃತ ಕುಡಿದವರು ಸಾಯುವುದಿಲ್ಲ ಎಂಬುದು ನಂಬಿಕೆ ವಿಷ ಕುಡಿದವರು ಸಾಯುತ್ತಾರೆ. ಆದರೆ ಎರಡನ್ನೂ ಬೆರೆಸಿ ಕುಡಿದರೆ ವಿಷವು ಬದುಕಲು ಬಿಡುವುದಿಲ್ಲ. ಅಮೃತವು ಸಾಯಲು ಬಿಡುವುದಿಲ್ಲ ಅತ್ತ ಸಾಯಲಾಗದೆ ಇತ್ತ ಬದುಕಲು ಆಗದೆ ಭವಸಾಗರದಲ್ಲಿ ತೇಲುತ್ತಾ ಮುಳುಗುತ್ತ ದುಃಖವನ್ನೂ ಅನುಭವಿಸುವ ಕೋಟಿ, ಕೋಟಿ ಜನರು ಈ ಜಗತ್ತಿನಲ್ಲಿದ್ದಾರೆ. ಅಮೃತದೊಳಗೆ ವಿಷ ಬೆರಿಸಿ ಕುಡಿದಂಥ ಬದುಕು ಗೃಹಸ್ಥರದಾಗಬಾರದು ಹಾಗೆ ಆಗಬಾರದೆಂದು ಬಯಸುವುದಾದರೆ ಸತಿ-ಪತಿ ಒಂದೇ ಭಾವದಲ್ಲಿರಲು ಪ್ರಯತ್ನಿಸಬೇಕು. ಏಕೆಂದರೆ ಮದುವೆ ಎಂಬುದು ಸ್ವರ್ಗದಲ್ಲಿ ನಿಶ್ಚಯಿಸಲ್ಪಟ್ಟಿರುತ್ತದೆ. ಆದ್ದರಿಂದ ಯಾರೂ ಸಹ ಇಂಥವರೇ ನಮಗೆ ಬಾಳ ಸಂಗಾತಿಯಾಗಿ ಬರುತ್ತಾರೆಂದು ನಾವು ತಿಳಿಯಲು ಸಾಧ್ಯವಿರುವುದಿಲ್ಲ. ಮದುವೆಯೂ ಕಾಲ ಕಾಲಕ್ಕೆ ತಕ್ಕಂತೆ ವಯಸ್ಸಿಗೆ ಅನುಗುಣವಾಗಿ ಮದುವೆ ಮಾಡುವರು ನಮ್ಮ ಹಿರಿಯರು.

ಮದುವೆ ಎಂಬುದು ಒಂದು ಉನ್ನತ ಕಾರ್ಯಕ್ಕೆ ನಾಂದಿ. ಅದುವೇ ಪ್ರಕೃತಿ ನಿಯಮವಾದಂತಹ ಸಂತಾನೋತ್ಪತ್ತಿ ಕ್ರಿಯೆ. ಪ್ರಕೃತಿ ಧರ್ಮ ಹೆಣ್ಣು-ಗಂಡು ಕೂಡಿ ಬಾಳಲು ಈ ಸಮಾಜದಲ್ಲಿ ಮದುವೆ ಎಂದು ಮಾಡುತ್ತಾರೆ. ತನ್ಮೂಲಕ ಸತ್ಪ್ರಜೆಗಳ ಉತ್ತಮ ನಿರ್ಮಾಣಕ್ಕಾಗಿ ಮದುವೆ ಮಾಡುತ್ತಾರೆ. ಇಂದು ಮದುವೆ ಎಂದರೆ ಕೇವಲ ಕಾಲ್ಪನಿಕ ಮತ್ತು ಕೆಲವೇ ಕೆಲವು ದಿನಗಳಾಗಿದ್ದರು ಸಣ್ಣ ಸಣ್ಣ ಜಗಳಕ್ಕೂ ವಿವಾಹ ವಿಚ್ಛೇದನ ಪಡೆಯುತ್ತಿದ್ದಾರೆ. ಹಾಗಾಗದೆ ಮದುವೆ ಎಂದರೆ ಸರಸವೇ ಜನನ. ವಿರಸವೇ ಮರಣ ಸಮರಸವೇ ಜೀವನ ಸಾಸಿವೆಯಷ್ಟು ಸುಖಕ್ಕಾಗಿ ಸಾಗರದಷ್ಟು ದುಃಖವು ಮದುವೆಯಲ್ಲಿದೆ ಈ ಸತ್ಯವನ್ನರಿತು ಧರ್ಮಮಾರ್ಗದಲ್ಲಿ ಬಾಳಿ ಸದ್ಗತಿ ಪಡೆಯುವುದು ಲೇಸು.

# ಶಿಕ್ಷಕ ಮತ್ತು ಶಿಕ್ಷಣ



**ಮೇಘನಾ ಹೆಚ್.ಎಸ್.**
ತೃತೀಯ ಬಿ.ಕಾಂ

ನಾವು ಶಿಕ್ಷಕರ ದಿನಾಚರಣೆಯನ್ನು ಆಚರಿಸುತ್ತೇವೆ. ವಿದ್ಯೆ, ಶಿಕ್ಷಣ, ಗುರುಶಿಷ್ಯರ ಬಗ್ಗೆ ಇರುವುದಾದರೂ ಎರಡಕ್ಕೂ ವ್ಯತ್ಯಾಸವಿದೆ. ಗುರು ಪೂರ್ಣಿಮೆಗೆ ಪರಂಪರೆಯ ಮೆರಗು. ಆಧ್ಯಾತ್ಮದ ಸೊಗಡು ಇದ್ದರೆ ಶಿಕ್ಷಕರ ದಿನಾಚರಣೆಗೆ ಲೌಕಿಕವಾಗಿ ಅಸ್ತಿತ್ವ, ವ್ಯಾಪಕವಾದ ಆಚರಣೆ ಇದೆ. ಗುರುಪೂರ್ಣಿಮೆ ಭಾರತದ ಲೆಕ್ಕಾಚಾರದ ಪ್ರಕಾರ ಪೂರ್ಣಿಮೆಯ ದಿನವೇ ನಡೆಯಬೇಕು ಶಿಕ್ಷಕರ ದಿನಾಚರಣೆ ಸೆಪ್ಟೆಂಬರ್ 5 ರಂದು ನಡೆಯುತ್ತದೆ.

ಗುರು–ಶಿಕ್ಷಕರಿಗೆ ಅಂಥ ವ್ಯತ್ಯಾಸವೇನೂ ಇಲ್ಲ ಎಂದೇ ಹೇಳಬೇಕು. ಅನೇಕರು ಪ್ರೌಢ ಶಾಲೆಯ ನಂತರದ ಶಿಕ್ಷಕರನ್ನು ಗೌರವದಿಂದ ಗುರುಗಳು ಎಂದು ಕೊಳ್ಳುತ್ತಾರೋ ಇನ್ನೂ ಸಂಗೀತ, ಕಲೆ ಇತ್ಯಾದಿಗಳನ್ನು ಕಲಿಸುವ ವರನ್ನು ಗುರು ಎಂದು ಕರೆಯುತ್ತಾರೆ.

ಗುರು ಶಬ್ದದ ಬಳಕೆ ಗೌರವಯುತವಾದುದು. ಶಿಕ್ಷಕನಿಗೆ ಕೇವಲ ಕಲಿಸುವವನೇ ಎಂದಷ್ಟೇ ಸೀಮಿತ ಅರ್ಥವಿದೆ. ಶಿಕ್ಷಕನಿಗೆ ಗುರುಗಿರುವ ಗೌರವ ಇಲ್ಲ ಎಂದು ಹೇಳುವವರೂ ಇದ್ದಾರೆ. ಶಿಕ್ಷಕ ಅಂದರೆ ಯಾರು ? ಶಿಕ್ಷಣ ಎಂದರೇನು ? ಶಿಕ್ಷಣ ಏಕೆ ಬೇಕು ? ಶಿಕ್ಷಕನಿಗೂ ಶಿಕ್ಷಿತನಿಗೂ ಇರುವ ಸಂಬಂಧ ಎಂಥದ್ದು ಎಂಬ ಅನೇಕ ಅಂಶಗಳನ್ನು ಗಮನಿಸಿದರೆ ಎಷ್ಟೂ ವಿಚಾರಗಳೂ ತೆರೆದುಕೊಳ್ಳುತ್ತವೆ.

ಬದುಕು ಸುಸಂಸ್ಕೃತವಾಗಲು, ವಿಕೃತವಾಗದೆಯಿರಲು ಕಲಿಕೆ ಬಹು ಮುಖ್ಯ. ಗುರುಗಳ ಅಥವಾ ಶಿಕ್ಷಕರ ಬಳಿಗೆ ಬಂದು ಕಲಿಯುವವನು ವಿದ್ಯಾರ್ಥಿ. ವಿದ್ಯೆಯನ್ನು ಅರಸಿ ಬರುವವನೇ ವಿದ್ಯಾರ್ಥಿ.

ವಿದ್ಯಾರ್ಥಿಗೆ ವಿದ್ಯೆ ಕಲಿಯುವ ಬಗ್ಗೆ ಸಂಪೂರ್ಣ ಗಮನವಿರಬೇಕಾಗುತ್ತದೆ. ವಿದ್ಯಾರ್ಜನೆಗಾಗಿಯೇ ಜೀವಿತದ ಅವಧಿಯಲ್ಲಿ ಇಂತಷ್ಟು ವರ್ಷಗಳನ್ನು ಮೀಸಲಿರಿಸುವ ನಿಯಮ ಜಾರಿಯಲ್ಲಿರುತ್ತಿತ್ತು. ರಾಜರ ಮಕ್ಕಳಿಗೂ, ಮಂತ್ರಿಗಳ ಮಕ್ಕಳಿಗೂ ಅವರವರಿಗೆ ತಕ್ಕ ವಿದ್ಯಾಭ್ಯಾಸ ಕಡ್ಡಾಯವಾಗಿತ್ತು. ಕ್ಷಣವೂ ವ್ಯರ್ಥ ಮಾಡದೆ ವಿದ್ಯಾರ್ಜನೆ ಮಾಡಬೇಕು. ಮೋಲು ಮಾಡದೆ ಹಣವನ್ನು ಕೂಡಿಡಬೇಕು. ದಿಢೀರ್ ವಿದ್ಯಾವಂತನಾಗಲೀ ಇನ್‌ಸ್ಟಂಟ್ ಸ್ಥಿತಿವಂತನಾಗಲಿ ಆಗಲು ಸಾಧ್ಯವಿಲ್ಲ. (ಲಾಟರಿ ಹೊರತುಪಡಿಸಿ)

ಇಂದಿನ ವಿಶ್ವವಿದ್ಯಾನಿಲಯಗಳಲ್ಲಿ, ವ್ಯಾಸಂಗದಲ್ಲಿ ತೊಡಗುವ ಅನೇಕರಿಗೆ ಈ ನಿಯಮಗಳ ಪರಿಚಯವೇ ಇಲ್ಲ. ಇಂಥವರಿಗೆ ವಿಶ್ವವಿದ್ಯಾನಿಲ ಯಗಳ ವಿದ್ಯಾ ಕೇಂದ್ರಗಳಾಗಿವೆ. ತಮ್ಮ ರಾಜಕೀಯ ಭವಿಷ್ಯವನ್ನು ರೂಪಿಸುವ ಕಾರ್ಯಾಗಾರ ಗಳಾಗಿವೆ ಎಂಬುದು ದುರದೃಷ್ಟಕರ.

ಶಿಕ್ಷಕನು ಎಂಥವನಿರಬೇಕು ಎಂಬುದಕ್ಕೆ ಮಹಾಕವಿ ಕಾಳಿದಾಸರ ಪ್ರಕಾರ "ಕೆಲವರಿಗೆ ವಿದ್ಯೆ ಒಲಿದಿರುತ್ತದೆ. ಚೆನ್ನಾಗಿ ಅಧ್ಯಯನ ಮಾಡಿ ಮನನ ಮಾಡಿಕೊಂಡಿರುತ್ತಾರೆ ಮತ್ತೆ ಕೆಲವರು ತಮಗೆ ತಿಳಿದಿದ್ದನ್ನು ಮತ್ತೊಬ್ಬರಿಗೆ ಹೇಳಿಕೊಡುವುದರಲ್ಲಿ ಪರಿಣತರಾಗಿರುತ್ತಾರೆ ಯಾರು ಚೆನ್ನಾಗಿ ತಿಳಿದು ಅಧ್ಯಾಪನ ಮಾಡಿಸಿರುವುದಲ್ಲಿಯೂ ನಿಪುಣರಾಗಿರುತ್ತಾರೋ ಅಂಥವರು ಶ್ರೇಷ್ಠ ಶಿಕ್ಷಕರಾಗುತ್ತಾರೆ.

**ಜೀವನೋಪಯೋಗಿ ಶಿಕ್ಷಣ :**

ಕಲಿಕೆ ಕೇವಲ ಶಾಲೆಗೆ ಸೀಮಿತವಾಗಿರುವುದಿಲ್ಲ. ಇದನ್ನು ಅರಿತಿದ್ದವರು ನಮ್ಮ ಪ್ರಾಚೀನರು ಜೀವನೋಪಯೋಗಿ ಶಿಕ್ಷಣವನ್ನು ಒಂದು ವರ್ತುಲದಂತೆ ತಿಳಿದು ಅದನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ ಒಂದೊಂದು ಭಾಗವನ್ನೂ ಹೇಗೆ ಗ್ರಹಿಸಬೇಕೆಂದು ತಿಳಿಸಿ ಕಡೆಗೆ ಜೀವನ ಅನುಭವವನ್ನು ನಾಲ್ಕನೆ ಭಾಗವಾಗಿ ತಿಳಿದು ಕಲಿಕೆ ಮಾಡುವುದರಿಂದಲೆ ಕಲಿಕೆ ಪೂರ್ಣವಾಗುವುದು ಎಂದು ನಂಬಿದ್ದವರು.

ಸಾಮಾನ್ಯ ಪಶು, ಪಕ್ಷಿ, ಪ್ರಾಣಿ, ಗಿಡಮರಗಳಿಂದಲೂ ಕಲಿಯುವುದು ತುಂಬಾ ಇದೆ ಎಂದು ನಮ್ಮ ಪೂರ್ವಜರು ತಿಳಿಸುವುದಲ್ಲದೆ ತಾವು ಕಲಿತ ಜ್ಞಾನವನ್ನು ನಮ್ಮ ಕಾಲದವರಿಗೂ ಸಾಗಿಸಿದ್ದಾರೆ. ಚಾಣಕ್ಯನ ಪ್ರಕಾರ ಮನುಜ ಎಲ್ಲಿಂದ ಯಾವ ಅರಿವು ಬಂದರೂ ಅದನ್ನು ಸ್ವೀಕರಿಸಬೇಕು ಎಂದು ಹೇಳುತ್ತಾನೆ.

## ಉತ್ಸವ-ನಿತ್ಯೋತ್ಸವ



ಅಂಜು
ದ್ವಿತೀಯ ಬಿ.ಎ.
ಹೆಚ್ಇಜಿ

ನಮ್ಮಯ ಹೆಮ್ಮೆಯ ಕರುನಾಡು
ನಿತ್ಯ ಉತ್ಸವಗಳ ಬೀಡು
ಸವಿನುಡಿಯ ಸಾಂಸ್ಕೃತಿಕ ನೆಲೆನಾಡು
ಶಿಲ್ಪಕಲಾ ವೈಭವದಿ ಬೇಲೂರು-ಹಳೆಬೀಡು
ಬಾದಾಮಿಯಲಿ ಚಾಲುಕ್ಯೋತ್ಸವ
ವಿಜಯನಗರದೊಳು ಹಂಪಿ ಉತ್ಸವ
ಪಟ್ಟದಕಲ್ಲಿನೊಳು ನವರಸಪುರ ಉತ್ಸವ
ಬನವಾಸಿಯೊಳು ಕದಂಬೋತ್ಸವ
ವಿಜಯದುಂಧುಬಿಯ ನವರಾತ್ರಿ ಉತ್ಸವ
ಸ್ವಾತಂತ್ರ್ಯ ಚರಿತೆಯ ಕಿತ್ತೂರು ಉತ್ಸವ

ಸಂಭ್ರಮ ಸಡಗರದೊಳು ರಾಜ್ಯೋತ್ಸವ
ಚಿತ್ರೋತ್ಸವ ನಾಟಕೋತ್ಸವ ಕಾರ್ತೀಕೋತ್ಸವ
ಕವಿ-ಪುಂಗವರ ಹೆಸರೊಳು ಜನ್ಮ
ಶತಮಾನೋತ್ಸವ
ದೇವಾಲಯಗಳೋಳು ಲಕ್ಷದೀಪೋತ್ಸವ
ಮನೆ ಮನಗಳಲ್ಲಿ ಹಬ್ಬಹರಿದಿನಗಳೋತ್ಸವ
ಸಡಗರ ಸಂತಸದಿ ಉತ್ಸವ
ಭಾಷೆಯ ಹೆಸರೋಳು ಜಾಗೃತಿ ಉತ್ಸವ
ಚೈತನ್ಯ ತುಂಬಿದ ಯಾಂತ್ರಿಕ ಬದುಕಲಿ
ಪ್ರಗತಿಗೆ ಪೂರಕ ಉತ್ಸವ - ನಿತ್ಯೋತ್ಸವ

## ಕಳ್ಳ ಮತ್ತು ರಾಜಕಾರಣಿ



ಜಯಲಕ್ಷ್ಮಿ ಪಿ.
ತೃತೀಯ ಬಿ.ಎ.
ಹೆಚ್ಇಪಿ

ಜನರಿಂದ ಬೇರ್ಪಟ್ಟು ದುಷ್ಟನಾಗಿ
ಬೆಳೆಯುವನು ಕಳ್ಳ
ಜನರಿಂದ ಆರಿಸಲ್ಪಟ್ಟು ವಿಶಿಷ್ಟವಾಗಿ
ಬೆಳೆಯುವವನು ರಾಜಕಾರಣಿ
ಇಬ್ಬರು ವಂಚಿಸುವರ
ಈ ಮಹಾಜನರನ್ನು
ಒಬ್ಬ ಇರುಳಲ್ಲ
ಮತ್ತೊಬ್ಬ ಹಗಲಲ್ಲಿ
ಇಬ್ಬರಿಗೂ ಕಾವಲಿರುವುದು
ಪೋಲೀಸ್ ದಳ
ಒಬ್ಬನು ಜನರ ರಕ್ಷಿಸಲು
ಮತ್ತೊಬ್ಬನು ಜನರಿಂದ ರಕ್ಷಿಸಲು
ಇಬ್ಬರ ಚಿತ್ರವೂ ಬರುವುದು
ಪತ್ರಿಕೆಯ ಮುಖಪುಟದಲ್ಲಿ
ಒಬ್ಬ ಅಪಹರಣಕಾರನೆಂದು
ಮತ್ತೊಬ್ಬ ಹಗರಣದ ಆಕಾರವೆಂದು
ಅದರೇನು
ಎನಿಹುದು ಅಂತರ?!
ಕಳ್ಳ ಹಾಗೂ ರಾಜಕಾರಣಿ ನಡುವೆ
ದೋಚುವರಿಬ್ಬರು ಹಣ ನಿರಂತರ

## ಅನ್ನದಾತನಿಗೊಂದು ಮನವಿ

ನಾಡಿನ ನಾಡಿಯೇ ಓ ಅನ್ನದಾತ
ನಿನ್ನ ನಗುವಲಿ ಅಡಗಿಹುದು ನಾಡಹಿತ
ಅವಸರದಿ ತೆಗೆಯದಿರು ತಪ್ಪು ನಿರ್ಧಾರ
ನಂಬಿದ ಜನರಿಗೆ ಹೊರಿಸದೆ ಕಣ್ಣೀರಭಾರ
ನಿತ್ಯ ನಾಡನೂ ಬೆಳಗೂ ಬಾನ ಸೂರ್ಯ ನೀನು
ಸಣ್ಣಕರಿ ಮೋಡಕೆ ಹೆದರಿ ಓಡುವೇಯೇನು ?
ಬಿರುಗಾಳಿ ಮಳೆಗಂಜದ ಅಚಲ ಶಿಖರವು ನೀನು
ಸಣ್ಣಗಾಳಿಗೆ ಹೆದರಿ ತಲೆ ಬಾಗುವೆಯೇನು ?
ಬೇಡ ಅಧೈರ್ಯ, ಇರಲಿ ತಾಳ್ಮೆಯ ಮಿತ್ರ.
ಸರಿಯುವುದು ಸಮಸ್ಯೆಗಳು ಇಂದಲ್ಲ ನಾಳೆ
ಮನಸಾಗದು ಆಗ ಗೆದ್ದ ಸಂಭ್ರಮಪಡಲು
ನೀನಿಲ್ಲದ ಗೆಳೆಯ ನಿನ್ನವರ ಗೋಳಲ್ಲಿ
ಇದ್ದು ಸಾಧಿಸು ನೀನು ಎಲ್ಲವನು ಇಲ್ಲ.
ನಿನ್ನ ನಾಡಿ ಮಿಡಿತ ನಾಡಿಗೆ ಸಂಜೀವಿನಿ
ಬೀಳದಿರು ಅವಸರದಿ ಕಂದರಕ್ಕೆ ಜಾರಿ
ಸವಾಲಿನ ಬೆನ್ನತ್ತಿ ಸಾಗಲಿ ಸವಾರಿ
ಸಾಧನೆಯ ಬಾಳಿಗೆ ಇದೆ ನೂರಾರು ದಾರಿ
ತುಳಿಯ ಬೇಡವೋ ಮಿತ್ರ ಎಂದೂ ಕೆಟ್ಟದಾರಿ.

# English Section



## CONTENTS


| | | | |
|---|---|---|---|
| 1 | My Motherh | M. Vanishree | 51 |
| 2 | Value Of Time | Indrani. S | 51 |
| 3 | A Good Student | G.N Nisarga | 52 |
| 4 | My College | Swathi G.N | 53 |
| 5 | Jaganmohan Palace | Kavya. A | 54 |
| 6 | Aung San Suukyi | Usharani. N | 56 |
| 7 | Preservation of Wild - life In India | K. Ramya | 61 |
| 8 | Youth Powerk. | Ramya | 62 |
| 9 | The First Men In India | | 63 |
| 10 | Corruption | Sangeetha N. | 64 |
| 11 | Friendship | Pooja. M | 65 |
| 12 | Examination – A Game Of Cricket | | 66 |
| 13 | Life | K. Sukanya | 67 |
| 14 | Bharah Ratna Sir M Visvesvaraya [15.09.1860 to 14.04.1962] | Megha K.M | 68 |
| 15 | Pledge | | 69 |
| 16 | Meaning of Our National Anthem | | 71 |
| 17 | A Sweet Short Story ..... | Preethu | 72 |




## MY MOTHER



The hands those LED through Life

Through dangerous of my life.

Through scores and through blames in my life
Those are the precious hands which led me through life.

The hands those led me to the future through
The hands, which encouraged me led my life.

The hands helped me in my post to overcome the problems of my life

The hands that brought me from tasty to peaceful future.

Those are the precious hands which led me through life.

These precious hands are of MY MOTHER.

**H.M. Vanishree**
III, B.A [H.E.G]

## VALUE OF TIME



To realise the value of 1 year ask a student who has failed in exam.

To realise the value of 1 month ask a mother who has given birth to baby.

To realise the value of 1 week ask the editor of a weekly magazine.

To realise the value of 1 day ask a daily wage labourer.

To realise the value of 1 minute ask a daily Passanger who has missed the train.

To realise the value of 1 second ask a person who was survived an accident.

To realise the value of 1 nano second ask a hardware engineer and if you still don't realise the value of time.

Then you must be a student.

Then you must be a student

**Indrani. S**
III BA [H.E.G]

## MY MOTHER



**H.M. Vanishree**
III, B.A [H.E.G]

My Mother, She is my Treasure.
When I am sick, She is my Doctor.
When I am Learning, She is my Teacher.
When I am struggling, She is my Reducer.
When I am in trouble, She is my protector.
When I trouble her she is my Dictator.
When I am in distress, She is my comfort.
Oh! Mother, you are my treasure.
I will not part from you under any pressure.
"O Mother if you are always with me nothing can hurt me"
"When I am writing about you my pen will never run down"
"You are everything for me, and you are in everything that I do"
So my Mother is always my Treasure.

## A GOOD STUDENT

**G.N Nisarga**
III BA [H.E.G]

A - Always liked by teacher.
G - Greet every one with smile
O -Obedient to teacher and parents
O - On time to School
D - Dresses neat and be disciplined

S - Studies with interest
T - Treat everyone with Respect
U - Understand every thing
D - Does daily home work
E - Eager to know things
N - Never Misbehave in class
T - Talk less in class



## TAKE TIME

Take time to plan your life
It is the source of many blessings
Take time to think
It is a task for happiness
Take time to be friendly
It is the road to openesss of mind
Take time to honour your parents
It is the promise of long life
Take time for the elders
It is the highway to reverence
Take time for the sick
It is the share of compassion
Take time to work
It is the price of success
Take time to play
It is the path to lasting youth
Take time to read
It is the foundation of wisdom
Take time to dream
It is reaching ones wagon to a star
Take time to love and be loved
It is the privilege of God.
Take time to laugh
It helps lift life's road.



## MY COLLEGE



**Swathi G.N**
I M.com

There are many flowers
But not like rose.
There are many birds
But not like peacock.

There are many languages
But not like Kannada.
There are many countries
But not like India.

There are many colleges
But not like JSS.

Holi is colourful,
Diwali is bright full,
But JSS College is wonderful.

River can dry
Birds can fly
But you can never forget this college
How can I......?

# JAGANMOHAN PALACE



**Kavya. A**
**III B.A** [H.E.G.]

Jaganmohan palace is a palace in Mysore, India. Its construction was completed in 1861 and was initially used by the Wodeyars, kings of Mysore as their home, when the present majestic Mysore palace Amba Vilas Palace was under construction. After, the old palace was turned into an art gallery and a function hall. The palace is one of the seven palaces of the royal city of Mysore and one of the most beautiful constructions of the wodeyar kings of the city. During their reign the royal family has innumerable contributions not only to Mysore but also others.

**History:**

The Jaganmohan palace was constructed in 1861 by the king. His Highness krishnaraja wodeyar III as an alternate retreat for the royal family.

1. The Mysore palace which was the original home of the royal family was burnt down in a fire and the construction of new palace in its place was started in 1897. Till the new palace was completed in 1912 the Jaganmohan palace was used by the royals as their home.
2. In 1902 the king His Highness Rajashi Nalvadi Krishnaraja Wodeyar was installed to the Mysore throne in a ceremony that took place in a pavilion inside the Jaganmohan palace. This ceremony was attended by Lord Curzon, the then viceroy and Governor General of India.
3. The palace was used for his daily Durbar by the king and also the special Dasara Durbar during the dasara period. In 1915 the palace was converted into an art gallery which was later renamed in 1955 in the name of H.H Jayachamarajendra wodeyar as the Sri Jayachamarajendra art gallery.
4. The early convocations of the Mysore University were also held in this palace. The first session of the legislative council of the Mysore state was held here in July 1907.
5. The legislative council was then called as the representative council and was presided over by the Diwan prime minister of the state H.H. Jayachamarajendra wodeyar converted the palace into a Trust and opened it for public viewing.

**Art gallery:**

1. The art gallery contains one of the

largest collections of arte facts. The paintings prominent among which art paintings in south india, most of these arte facts are those by Raja Rani Varma some of which demonstrate scenes from the Hindu epics The Ramayana and Mahabharatha. The collection of paintings in the gallery exceed 2000 in number and these belong to different Indian styles of painting like Mysore, Mughol and Shanthinykethana.

2. 16 paintings of Raja Ravi Varma were donated to the gallery.
3. More important painting present here is the lady with the lamp which was painted by the artist Holdenkar and is placed in a dark room where it is the only exhibit this is to give an illusion that the glow of the lamp is illuminating the face of the woman.
4. Some other painters whose work are exhibited here include Nikoloi Roerich Svetoslov Roerich and Rabindranath Tagore and there are beautifull paintings by the Ukil brothers Sharadda Ukil. Ranada ukil and Baradda ukil.
5. Paintings made on a grain of rice which can be viewed only through a magnifier are also displayed here.

# Hill Station; In State

| Hill station | State |
|---|---|
| Gulmarg | Kashmir |
| Kalimpong | West Bengal |
| Kasauli | Himachal Pradesh |
| Kodaikawal | Tamil Nadu |
| Kulu Valley | Himachal Pradesh |
| Landsdowne | Uttar Pradesh |
| Mahabaleshwar | Maharastra |
| Mount Abu | Rajasthan |
| Mussourie | Uttaranchal |
| Mukteswar | Uttar Pradesh |
| Nandi Hills | Karnataka |
| Nainital | Uttaranchal |
| Ootacamound(Ooty) | Tamil Nadu |
| Panchamarhi | Madhya Pradesh |
| Ranchi | Jharkhand |
| Simla | Himachal Pradesh |
| Shillong | Meghalaya |
| Srinagar | Kashmir |
| Munnar | Kerala |

# AUNG SAN SUUKYI



**Usharani. N**
III BA [H.E.P]

Born – 19th June 1945,
Religion – Theravada Buddhism,
Books – Freedom from fear
Letters from Burma,
Awards – Nobel Peace Prize
Jawaharlal Nehru Award, Bhagwan Mahavir World peace.

Suukyi was born on 19 June 1945 is a Burmese States person, politician, diplomat and author who serves as the first and incumbent state counselor and leader of the National League for democracy. She is also the first woman to serve as minister of the president's office. The minister of education in president Htin Kyaw's cabinet and from 2012 to 2016 was a pyithu Hlutlaw MP for Kawhmu Township.

After graduating from the university of Delhi in 1964 and the university of Oxford in 1968. She worked at the united Nations for three years. Aung San suukyi rose to prominence in the 1988 uprisings and became the General Secretary of the newly formed National League for Democracy [NCD] in the 1990 elections. NCD won 81% of the seats in parliament but the results were nullified as the military refused to hand over power. She remained under house arrest for almost 15 to 21 years from 1989 to 2010. Becoming one of the world's most prominent political prisoners.

Her party boycotted the 2010 elections resulting in a decisive victory for the military-backed union solidarity and Development party. Aung san suu kyi become a pyithu hiut law MP while her party won 43 of the 45 vacant seats in the 2012 by - elections. Her party won a great victory taking 86% of the seats in the assembly of the union well more than the 67 percent super majority needed to ensure that its preferred candidates were elected president and second vice president in the presidential electoral college. Although she was prohibited from becoming the president due to a clause in the constitution she assumed the newly created role of state counselor. A role of akin to a prime minister or a head of government.

Aung san suu kyi has gained International acclaim, having received many honours. Including the Rotto prize Sathroprize, Nobel peace prize, Jawaharlal Nehru award. Order of Australia, US congressional Gold medal and presidential medal of freedom she is an honorary citizen of many countries, including Canada.

**Folk Dances in Karnataka**

The dances of Karnataka are a reflection of the rich cultural milieu of the state. Dance belonging to both folk and classical generes have a flourishing presence in different parts of the state. While the many indigenous communites of Karnataka have preserved and nurtured their folk dance forms, the state also boasts of a thriving of indian classical dances.

The rural dreds of Karnataka are vast repository of colorful folk dances and dance - dramas, Dollu kunitha dance is unique for its religious aspect and is associated with worship of the deity of Beereshwara. On the other hand, Yakshagana is a folk theatre that features actors enacting stories from the epics and puranas.

Classical dances too enjoy a firm foothold in the state of Karnataka. The much - acclaimed dance of Bharatanatyam has taken root in the state in the form of Mysore Bharatanatyam with its striking facial expression and graceful hand movements, Bharatanatyam occupies the pride of place in the realm of indian classical dances.

**Karnataka Culture**

Karnataka people, culture and festivals portray a wide variety. Karnataka people, culture and festivals are indeed an area that is of worth speculation.

The Karnataka people, culture and festivals has a strong bearing upon its past. The kingdoms that ruled in Karnataka have left an indelible mark on the lifestyle of the people of the state Thus, we can find a mixture of cultural traits from the Sultans and the other Hindu kings.

The people of Karnataka are cordial people, living with peace with their neighbors beside the aborigines. In Karnataka we also come across people who have migrated from the neighboring territories.

**Chamarajanagar District**

Chamarajanagar is the district of Karnataka bordering modern Mysore district, as well as Erode of Tamil Nadu and Wyanad District of Kerala. The district was carved out of the original larger Mysore district. Chamarajanagar is known for its forest resource. Hence, it has a very high population on forest dwelling tribals - Soligas, Jenu Kurubas, Betta Kurubas.

**Places to Visit**

- Bandipur Wildlife Sanctuary.
- Biligiri Ranganatha hills wildlife Sanctuary
- Kaveri Fishing Camp
- Mahadeswara Hills

**How to Reach**

**Air:** The Nearest airport is at Bangalore

**Rail:** Chamarajanagar is well connected by rail to all the major cities in the state and to other parts of the country.

**Vivekananda on the Power of Youth:**

The youth of India have great creative Energy with the positive potential to take them to spiritual heights. If human creativity is a special quality, then the "Never say Die" spirit is its apex. Demographically, today's India is at its youngest best and has the power to meet any challenge with collective consciousness and effort of all people, especially young people. This is the perfect time when youth is alert and aware and provoked by the environment and lack of values.

This is evident from the utter lack of safety and security for the girl child and women anywhere in the country and the impurity with which monstrous elements like rapists heap violence on girl children and women. On the one hand, people can see such huge wealth and on the other hand more than one-third of the people go without a second meal every day. We have examples of very affluent as well as the extremely poor and millions of our children have no access to education even at the primary level.

And we are still grappling with the issue of child labour, Swami Vivekananda delivered a lecture on the issue of difficulties in life. He made the plea for the need for nationwide renovation with the ideals of "Thyaga" or sacrifice and "Seva", selfless service, the most imperative aspects of shaping the life of young people. The monk made the point that this way of life is what can be called "Spiritual pursuit". The brevity of human triumph and the impermance of material wealth were of serious thought to this philosophy.

What he challenged us to do was to give ourselves a noble reason to live a lofty ideal to live for and a higher state to react within the boundaries of human existence. The only qualification that Swamiji looked for in youngsters was to cultivate and nurture the ability to "feel". He offered his potential "mantra" and desired to take solid action so that those who wanted to go beyond just feeling could do so. The most influential P's are: Purity, Patience and Perseverance.

The P's are the great traits that the youth of today are rich in and this is evident from their keenness to be part of positive change that will have impact on entire society. Purity is thought and achievement. Patience is to understand the dynamic form and need to focus on the area for importance, Today's youth need enormous perseverance to take part in the multifaceted challenges we face in today's society. They need to place their efforts in the realities of livelihoods, societal stage and political variety.

And for these attempts to seriously address social, political and ethical moral issues, they need great

perseverance if not one could easily get trained and unmotivated Swami Vivekananda believed that working for any social change required massive energy and spirit.

Hence, he requested the youth to amplify both their mental energies and physical fitness. What Vivekananda wanted from the youth were "muscles of iron" and " nerves of Steel". Today the youth are exceptionally responsive and they just need to be encouraged in their quest for justice for common benefit.

Swami vivekananda was and is not only the medium, he is himself the message as well, for the youth of India Jan 12, Swami vivekananda's birthday is celebrated as National Youth Day.

**Inspiring words**

A Man asked Lord Budda. 'I want happiness' then lord replied first remove 'I' it's ego, then remove 'want' it is 'desire'... then see you only left with "happiness".

Hurting someone with the truth is better than making them happy with a lie...

Work hard, but make time for your love, family and friends.

Nobody remembers power point presentations on your final day.

1 Good book is equal to 100 friends but one good friend is equal to a library.

Never believe the lines on your hands that predict your future. Because people who don't have hands have future, believe in yourself.

Don't fear for facing failure in the first attempt. Because even the successful maths starts with zero only.

– A.P.J

Sometimes, its better to bunk a class and enjoy with friends, because now, when I look back, marks never make me laugh, but memories DO.

– A.P.J

"Kill tension before tension kills you. Reach your goal before goal kicks you. Live life before Life leaves you.

Leadership is not about size. Its an attitude.

Any intelligent fool can make things bigger and more complex. It takes a touch of Genius – and a lot of courage to move in the opposite Direction.

- Albert Einstein

You Can't be good enough for everybody, but you will always be the best for the one who deserves you.

The best thing about the worst time of your life is that you get to see the true colours of everyone.

Don't Trust everyone, Because sugar and salt both have same colour. Be a good person but don't waste time to prove it.

**Traditional fairs in Karnataka**

The traditional culinary fairs of

Karnataka is a sumptuous spread that includes several essential rich cereal salads like kosambri, Palyas [warm vegetable salads made out of boiled vegetables, chopped fine and tossed with desiccated coconut, green chillies, curry leaves and mustard seasoning], Gojju [a vegetable cooked in tamarind juice with chilli powder in it], tovve] [cooked Dal without too much seasoning], huli [ a thick broth of lentils and vegetables cooked together with ground coconut, spices,tamarind and chili powder] and pappad. A complete range of rice based dishes, including chitranna [rice with lime juice, Green Chili, turmeric powder sprinkled with fried groundnuts and coriander leaves], vangibath [spiced rice with eggplant] and pulliyogare [rice flavoured with tamarind juice and spiced with groundnuts form integral part of the traditional repertoire. The most distinctive Karnataka dish, however, is the celebrated Bisi Bele Bath A unique combination of rice, Dal, tamarind, chili powder and a dash of cinnamon, in rural areas ragi [steam-cooked finger millet rolled into large balls] served either with mutton curry or soppina saaru from the staple diet.

## Life is Accountancy

My birth is my opening stock
My ideas are my assets
My views are my liabilities
Happiness is my Profits
Sorrow is my loss
Soul is my goodwill
Heart is my fixed assets
Duties are my outstanding expenses
Working is my prepaid expenses
Friendship is my hidden adjustments
Character is my capital
Good things always appreciate
Bad things always depreciate
Knowledge is my investment
Patience is my interest
My mind is bank balance
Thinking is my current account
Behaviors is my interest
Aim is to tally the balance sheet
Death is my closing stock

## Preparation for Qualification

OH the examination, it brought great tension
English with its composition
Kannada with its memorization
Hindi with its Recitation, but studied with concentration
Under moms & dads direction
Without watching television
Maths with its calculation.
Chemistry with its equation, Physics with Its definition,
History with Dates and battles, Geography with its maps,
Civics with its civilization,Oh, it brought great tension,But studied with determination to get distinction

